

# ಅಖಿಲ ಭಾರತ ಪತ್ರಿಕೆ

ಜುಲೈ 2019



# ಜೀವನವೇ ಪ್ರಾರ್ಥನೆ

ಬೆಲೆ : 15/-



ಮಾನವನ ಮನದ ಜಾಗ್ರತಿಗೆ ಎಂದು ಧುಮ್ಮಿಕ್ಕಿ ಕರೆಯು ಬಂದು
ಅದರ ಯತ್ನದಲಿ ತುಡಿತ ತುಂಬಿಹುದು ವೈವಿಧ್ಯಮಯದ ಬಿಂದು
ಬಯಕೆಗಳ ಭ್ರಮೆಯ ತತ್ತರವು ಆಗ ಕಂಡಿರಲು ಸ್ಫುರಣಗೊಂಡು
ಅವಳ ಹೃದಯವನು ಮಧುರ ಭಾವದಾ ಅಪರಿಚಿತ ಗತಿಯು ಕಂಡು

**– ಪುಟ್ಟು ಕುಲಕರ್ಣಿ**

(ಶ್ರೀ ಅರವಿಂದರ **‘ಸಾವಿತ್ರಿ’;** ದಳ 1 ರೇಣು 2 ಪುಟ 6)

Photo: Imaging Savitri

**ಅಖಿಲ ಭಾರತ ಪತ್ರಿಕೆ**
**ಜುಲೈ 2019**

ಸಂಪುಟ: 29 ಸಂಚಿಕೆ: 07


## ಪರಿವಿಡಿ

# “ಜೀವನವೇ ಪ್ರಾರ್ಥನೆ”

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಶ್ರೀ ಅರವಿಂದ ವಿರಚಿತ “ಪ್ರಾರ್ಥನೆ”** 10
ಅನು: ಶ್ರೀ ಪುಟ್ಟು ಕುಲಕರ್ಣಿ

**ಸಾಧಕರಿಗಾಗಿ ಪ್ರಾರ್ಥನೆಗಳು** 11

**ತೇಜಸ್ಸಿನ ಮಾತೆಯವರಿಗೆ ಸ್ತುತಿಗೀತೆ** 13

**ಆತ್ಮಗತ ಪ್ರಾರ್ಥನೆಗಳು** 17
ಅನು: ಡಾ॥ ಮಹಾದೇವ ಸಕ್ರಿ

**ಪ್ರಾರ್ಥನಾಶೀಲ ಜೀವನ** 29
ಅನು: ಶ್ರೀ ಕೃಷ್ಣ ಭೀಡ

**ನವ ಚೈತನ್ಯ: ಸಂದೇಶಗಳು ಮತ್ತು ಪ್ರಾರ್ಥನೆಗಳು** 40

**ಭಾರತದ ಸಲುವಾಗಿ ಪ್ರಾರ್ಥನೆಗಳು** 41
ಅನು: ಡಾ॥ ಬಲಭೀಮ ಭೀಡ

**ಶ್ರೀ ಅರವಿಂದಂದ ವಿರಚಿತ ಮಂತ್ರಗಳು ಹಾಗೂ ಪ್ರಾರ್ಥನೆಗಳು** 48

**ಶ್ರೀಮಾತೆಯವರ ಪ್ರಾರ್ಥನೆಗಳು** 50
ಅನು: ಪ್ರೊ. ವೀರಭದ್ರಪ್ಪ ಕೆ.

**ಸಾಧನೆಯೇ ಪ್ರಾರ್ಥನೆ** 55
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 63



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ
ಶ್ರೀ ಪುರುಷೋತ್ತಮ ಗಲಗಲಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಜೂನ್ 2019 ರ 'ಅಖಿಲ ಭಾರತ ಪತ್ರಿಕೆ'ಯಲ್ಲಿ 'ಪ್ರಾರ್ಥನೆಯ' ಕುರಿತಾಗಿ ಸರಳವಾದ ವಿಷಯಗಳನ್ನು ಚರ್ಚಿಸಲಾಗಿದೆ. ಈ ಸಂಚಿಕೆಯಲ್ಲಿ, 'ಸಾಧನೆಯಲ್ಲಿ ಇರುವವರ' ಸಲುವಾಗಿ ಮತ್ತು ಕೆಲವು ವಿಶೇಷ ಉದ್ದೇಶಗಳಿಗಾಗಿ, ಶ್ರೀ ಅರವಿಂದರು ಮತ್ತು ಶ್ರೀ ಮಾತೆಯವರು ರೂಪಿಸಿದ 'ಪ್ರಾರ್ಥನೆ'ಗಳನ್ನು ವಿವರಿಸಲಾಗುತ್ತಿದೆ. ಇದರ ಜೊತೆ ಜೊತೆಗೇ ದಿವ್ಯಮಾತೆಯ ಅಪಾರ–ವ್ಯಾಪ್ತವಾಗಿರುವ ಮತ್ತು ಪ್ರಕಾಶಮಯ (ಕಾಂತಿಮಯ) ಹೃದಯವು ಅವಳ ಪ್ರೇಮದ ಸೌಂದರ್ಯದೊಂದಿಗೆ ಸ್ಪಂದಿಸುತ್ತಿರುವ ಹಾಗೂ ಇಲ್ಲಿಯವರೆಗೂ ವಿಶ್ಲೇಷಣೆಗೆ ಒಳಪಡದ 'ಕೆಲವು ಪ್ರಾರ್ಥನೆ'ಗಳ ಮಿಂಚು–ಕಾಂತಿಗಳನ್ನು ಕುರಿತು ವಿವರಣೆಯನ್ನು ಕೊಡಲಾಗುತ್ತಿದೆ. ಇವೆಲ್ಲವೂ ನಮ್ಮನ್ನು ಪ್ರಭಾವಿತರನ್ನಾಗಿಸಿ ಹಾಗೂ ನಮ್ಮನ್ನು ಪ್ರಗತಿಯತ್ತ ಒಯ್ಯಲು ಹಾಗೂ ನಾವು ಅನುಸರಿಸಲೇಬೇಕಾಗಿರುವ ಪಥವನ್ನೂ ತೋರುವಂತಾಗಲಿ. [ಎಬಿಪಿ]

*

## ಸಂಪಾದಕೀಯ

"ಪ್ರಾರ್ಥನೆ" ಎನ್ನುವದು ಲೌಕಿಕರಿಗೆ ಬದುಕಿನಲ್ಲಿ ಸುಖ–ನೆಮ್ಮದಿಯನ್ನು ಬಯಸಿ, ದೇವರಲ್ಲಿ ಒಪ್ಪಂದದ ಪದ್ಧತಿಯಲ್ಲಿ ತಮ್ಮನ್ನು ತಾವು ಅರ್ಪಿಸಿಕೊಳ್ಳುವ ವಿಧಾನ; ಅವರು ಬಯಸಿದ ಫಲವು ಪ್ರಾಪ್ತಿಯಾಯಿತು ಎಂದರೆ, ಅದೇ ಜೀವನದ ಪರಮೋಚ್ಚ ಗುರಿ ಎಂದು ಸಂತುಷ್ಟಿ ಹೊಂದುತ್ತಾರೆ. ಆದರೆ ಅದು ತಾತ್ಕಾಲಿಕವೆನ್ನುವದು ಅರಿವಾಗುತ್ತಲೇ, ಮತ್ತೆ ಅದೇ ಪ್ರಾರ್ಥನೆಯ ಮೂಲಕ ಮತ್ತೆ ಮತ್ತೆ ತಮ್ಮ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸುತ್ತಾರೆ. ಈ ಪ್ರಯತ್ನದಲ್ಲಿ ಅವಿರತವಾದ ಸ್ಪಂದನವಿರುವದಿಲ್ಲ. ಅದೂ ಅಲ್ಲದೇ ಇಲ್ಲಿ ಬೇಡಿಕೆ ಇಡುವ ಭಕ್ತ ಹಾಗೂ ದೇವರ ಮಧ್ಯೆ ಓರ್ವ ಮಧ್ಯಸ್ಥನ ಪಾತ್ರವೂ ಇರುತ್ತದೆ.

ಆದರೆ 'ಸಾಧನಾ ಪಥ'ದಲ್ಲಿ 'ಪ್ರಾರ್ಥನೆ'ಯನ್ನು ತಮ್ಮ ಉಸಿರಾಗಿಸಿಕೊಂಡವರು, ಅದನ್ನು ಹೃದಯದ ಸ್ಪಂದನದ ಜೊತೆಗೆ ಶ್ರುತಿಗೊಳಿಸಿಕೊಂಡಿರುತ್ತಾರೆ. ಇವರು ಲೌಕಿಕ ಬೇಡಿಕೆಗಳ ಸಂಕೋಲೆಯಲ್ಲಿ ಸಿಲುಕಿಕೊಳ್ಳುವದನ್ನು ಇಚ್ಛಿಸುವದೇ ಇಲ್ಲ. ಆ ಪರಂಜ್ಯೋತಿಯ ತಾಣದಲ್ಲಿದ್ದ ಅವರ ಆತ್ಮವು, ನಿಯತಿಯ ಪ್ರಕಾರ "ಈ ದೇಹ"ಕ್ಕೆ ಬಂದಿದ್ದು, ಆ ದೇಹಕ್ಕೆ ನಿಗದಿಗೊಳಿಸಿದ ಕಾರ್ಯಗಳನ್ನು ಮುಗಿಸಿದ ನಂತರದಲ್ಲಿ, ಮತ್ತೆ "ಆ ಮೂಲ ಪ್ರಕಾಶ"ದಲ್ಲಿಯೇ ಸಂಲಗ್ನಗೊಳ್ಳಲು ಅಭೀಪ್ಸೆ ಹೊಂದಿರುತ್ತಾರೆ. ಇದು ಮಾನವನ ಆತ್ಮವು ಪರಮಾತ್ಮನೊಡನೆ ಸ್ಪಂದಗೊಳ್ಳಲು ಅವಶ್ಯವಾಗಿರುವ ಸಾಧನಾ ಪಥದಲ್ಲಿ ಸಾಗಲು, ಒಂದು ಸೂತ್ರವನ್ನು ಒದಗಿಸುವ ಉಪಕರಣದಂತೆ 'ಪ್ರಾರ್ಥನೆ'ಯನ್ನು ಮಾಡುತ್ತಾರೆ. ಇಲ್ಲಿ ಸಾಕಾರದ ಅವಶ್ಯಕತೆ ಇಲ್ಲ; ಮಧ್ಯಸ್ಥಗಾರರೂ ಬೇಕಾಗಿರುವದಿಲ್ಲ; ಒಪ್ಪಂದವಂತೂ ಅವತರಿಸುವದೇ ಇಲ್ಲ; ಏನಿದ್ದರೂ ಆ ನಿರಾಕಾರದ ನೆಲೆಯನ್ನು ಪರಿಪೂರ್ಣವಾಗಿ, ಪ್ರಶಾಂತವಾಗಿ, ಏಕಾತ್ಮ ಭಾವದಲ್ಲಿ, ಅನವರತವಾಗಿ ಅರಿತುಕೊಳ್ಳುವ ವಿಷಯಕ್ಕೇ ತಮ್ಮನ್ನು ಸಂಪೂರ್ಣವಾಗಿ ತಲ್ಲೀನಗೊಳಿಸಿಕೊಂಡಿರುತ್ತಾರೆ. ತಾದಾತ್ಮ್ಯಗೊಳಿಸಿಕೊಂಡಿರುತ್ತಾರೆ. ಆ ತಾದಾತ್ಮ್ಯತೆಯ ಸ್ಪಂದನಕ್ಕೆ, ಅಭಿವ್ಯಕ್ತಗೊಳ್ಳುವ ಧ್ವನಿಯೂ ಸಹಿತ ಮೇಲ್ನೋಟಕ್ಕೆ ಲೌಕಿಕ ಪ್ರಪಂಚದ ಶಬ್ದ–ಸಂರಚನೆಯಲ್ಲಿದ್ದಂತೆ ಕಂಡರೂ, ಅಲ್ಲಿ ಆ ಶಬ್ದಗಳು ಕೇವಲ ಪೂರಕವಾಗಿ, ಸಂಕೇತವಾಗಿ ಸಹಕಾರಿಯಾಗಿರುತ್ತವೆ. ಲೌಕಿಕವಾಗಿ (ಭೌತಿಕವಾಗಿ) ಲಭ್ಯವಿರುವ ವಿಶ್ವಸತ್ಯಗಳನ್ನೇ ಅರ್ಪಿಸಿ, ಆ ವಿಶ್ವಶಕ್ತಿಯನ್ನು ಪ್ರಾರ್ಥಿಸುವ ಒಂದು ಅಪ್ರತಿಮ

ಪ್ರತಿಮಾ ವಿಧಾನದ ಶ್ಲೋಕವನ್ನು, ಶಿಖರಿಣೀ ಛಂಧಸ್ಸಿನಲ್ಲಿ ಶ್ರೀ ಶಂಕರರು ನೀಡಿದ್ದಾರೆ –

ದಿನಕರನ ದಿವ್ಯ ಕಿರಣಗಳ ಜ್ವಾಲೆಯಾರತಿಯನವಗೆ ಇತ್ತು
ಸುಧೆಯ ಜಲವೀವ ಚಂದ್ರಶಿಲೆಯಿಂದ ಚಂದ್ರನಿಗೆ ಅರ್ಘ್ಯವಿತ್ತು
ಉದಧಿಯಿಂದ ಉದಿಸಿರುವ ಉದಕವನೆ ತರ್ಪಣದಿ ಅರ್ಪಿಸುತ್ತ
ಜನನಿ ನಿನ್ನ ನುತಿಸುತಿಹೆ, ನೀಡುತಿರೆ ನೀನೆನಗೆ ವಾಣಿ–ಚಿತ್ತ

[ಸೌಂದರ್ಯಲಹರಿ ಶ್ಲೋಕ 100]

ಆ ಉಚ್ಚ ಆತ್ಮಾಭಿಲಾಷೆಯಿಂದ ಋತಸಹಜವಾದ ಆವರಣದಲ್ಲಿ ದರ್ಶಿಸುವ ಸಾಧನೆ ಪ್ರಾಪ್ತವಾದಲ್ಲಿ, ಆಗ ಯಾವುದೂ ನಿರಾಕಾರವಾಗಿರುವದಿಲ್ಲ; ನಾದವೂ ಸಹಿತ ತನ್ನ ಆಕಾರ ಹಾಗೂ ವರ್ಣಗಳೊಡನೆ ಸ್ಪಂದನಕ್ಕೆ ಸಿದ್ಧವಿರುತ್ತದೆ. ಇದನ್ನು ಸಾಧಿಸುವ ಸಲುವಾಗಿಯೇ, ಪ್ರಾರ್ಥನಾ ಹಂತದಲ್ಲಿ 'ಸಾಧಕರಿಗೆ" ಎಂದು ಕೆಲವು ನಿಯಮಗಳು ಇವೆ. ಆ ವಿಶ್ವಗೀತದ ನಾದಕ್ಕೆ ಅನುಸ್ಪಂದಗೊಂಡು ನಮ್ಮ ಆತ್ಮವೂ ಮಿಡಿಯುತ್ತಿದ್ದರೆ ಆ "ಜೀವನ ವಿಧಾನವೆ" ಪ್ರಾರ್ಥನೆಯಾಗಿರುತ್ತದೆ. ಅಲ್ಲಿ ಪ್ರಾರ್ಥನೆ ಮತ್ತು ಜೀವನ ಪದ್ಧತಿಯ ಮಧ್ಯೆ ವ್ಯತ್ಯಾಸವೇ ಇರುವದಿಲ್ಲ. ಉಷೆಯಿಂದ ಪೂರ್ವಸಂಧ್ಯೆಯ ತನಕವೂ ಆ ವಿಶ್ವಶಕ್ತಿಯ ಸ್ಪಂದನದೊಂದಿಗೇ ಅನುರಣನಗೊಳ್ಳುತ್ತಾ ಇರುವದೇ "ಸಾಧನಾ ಪಥದ ಪ್ರಾರ್ಥನೆ"ಯಾಗಿದೆ.

ಪಶ್ಯಂತಿ ಹಂತದಲ್ಲಿ ಉದಿಸುವ ತನ್ನದೇ ಭಾವಗಳನ್ನು ಆಲಿಸುತ್ತಾ, ಅದು ಪ್ರತಿಬೋಧದ ದೀಪ್ತಿಯ ಉಲಿತವಾಗಿರುವದನ್ನು ಅರಿತು, ತನ್ನ ಮನೋಕೋಶಗಳಲೆಲ್ಲ ಅವುಗಳನ್ನೇ ತುಂಬಿಕೊಂಡು ವಿಕಸನದ ಹಂತದಲ್ಲಿ ಮುಂದುವರೆಯುವಲ್ಲಿ ಇದು ಮೊದಲನೆಯ ಹಂತವಾಗಿದೆ. ಆ ನಾದದ ಶ್ರುತಿಗೆ ಶ್ರುತಿಗೊಂಡು, ಧ್ವನಿಗೆ ಪ್ರತಿಧ್ವನಿಯಾಗಿ ಅನುರಣನಗೊಂಡು, ಆವರ್ತಗೊಳ್ಳುತ್ತಾ ಸಾಗುವ ಅನುಭಾವದ ಪಥವು ಇದಾಗಿದೆ. ಆ ಭವ್ಯ ದೇವ ಪ್ರಸ್ಥಾನದಿಂದ ಪಡಿಮೂಡಿಕೊಂಡು ಬಂದ ವಾಗ್ಬೀಜಗಳು ವಾಣಿ–ನಾದದಲ್ಲಿ ಹ್ಲಾದುನುಹ್ಲಾದವನ್ನು ತರುತ್ತವೆ. ಘನಮೌನದಂತರಾಳದ ನಿರ್ಮಾಯ ತಾಣದಲ್ಲಿ ಚಿಂತನವು ವಿಕಸನಗೊಳ್ಳುತ್ತ ಪರಿಪೂರ್ಣತೆಯ ಕಡೆಗೆ ಚಲಿಸುತ್ತಾ ಇರುತ್ತದೆ. ಭೌತಿಕ ದೇಹದ ವ್ಯವಸ್ಥೆಯ ಕುಂಡಲಿಯೂ ಸಹಿತ ಅನುಸ್ಪಂದನ ಹೊಂದಿ, ಪ್ರಜ್ಞಾನ ಸ್ಪರ್ಶಕ್ಕೆ ಹೃದಯದ ಸ್ಪಂದವು ಸಮ್ಮಿಲಿತಗೊಂಡಿರುತ್ತದೆ. ಅಲ್ಲಿ ಅನಂತತೆ

ಮತ್ತು ಚಿನ್ಮಯದ ಘನಪ್ರಶಾಂತವಾದ ಕಾಂತಿಜ್ಯೋತಿಯಲ್ಲದೇ ಬೇರೇನೂ ಇರುವದಿಲ್ಲ.

ಮಾನವ ಕುಲದ ಅಬ್ಬರವಾಗಲಿ, ಅವನು ಪಡುತ್ತಿರುವ ಶ್ರಮದ ಉಬ್ಬರವಾಗಲಿ ಮತ್ತು ಜೀವನದ ಹೆದ್ದುಮುಲಗಳಾಗಲೀ ಇವೆಲ್ಲವೂ ಇಲ್ಲಿ ಅತ್ಯಂತ ಪ್ರಶಾಂತಮಯ ವಾತಾವರಣದಿಂದಾಗಿ ಆ ಪ್ರಶಾಂತ ಸ್ಥಿತಿಯಲ್ಲಿಯೇ ಇರುತ್ತವೆ. ಏಕೆಂದರೆ ಆದಿಶಂಕರರು ಹೇಳಿರುವಂತೆ "ಸಾಧಕನು ಇಡುವ ಎಡೆಗಳು ಪ್ರದಕ್ಷಿಣೆಯಾಗಿರುತ್ತವೆ; ಅವನ ಹುರುಡು ಹರಟೆಯೂ ಜಪವಾಗಿರುತ್ತದೆ; ಕರದ ಭಂಗಿಗಳು ತಪದ ಮುದ್ರೆಯಾಗಿರುತ್ತವೆ; ಅವನು ಸ್ವೀಕರಿಸುವ ಆಹಾರ ಹವಿಯಾಗಿರುತ್ತದೆ; ಅವನ ನಿದ್ರಾವಸ್ಥೆಯು ಉದ್ದಂಡ ನಮನವಾಗಿರುತ್ತದೆ." ಈ ಹಂತದಲ್ಲಿ ಭವದ ಬಯಕೆಗಳ ಭಾವಕವಚವನ್ನು ತೊರೆದವನು ಮಾತ್ರ 'ಸಾಧಕ'ನಾಗಿ, ಮುಕ್ತತ್ವದ ಪಥವನ್ನು ಕಾಣುತ್ತಾನೆ. ಮಾನವ ದೇಹದ ಜಡ–ಸ್ವಭಾವವು, ಮೃಣ್ಮಯವನ್ನು ಆಧರಿಸಿಕೊಂಡು ನಿಂತಿದ್ದರೂ ಸಹಿತ, ಧೀಃ–ಶಕ್ತಿಯ ರೆಕ್ಕೆಗಳನ್ನು ಬಳಸಿಕೊಂಡು ಅನಂತಾನಂತದಲ್ಲಿ ಪಯಣಿಸಲು ಸಫಲನಾಗುತ್ತಾನೆ.

ಆ ನಭೋನೀಲದ ಪದ್ಮಸರಸ್ಸಿನಲ್ಲಿ ಹೇಗೆ ಚಿದ್ಘನದ ಲೀಲೆಯ ಛಂದವು ಪ್ರಕೃತಿ ಸಹಜವಾಗಿರುತ್ತದೆಯೋ, ಅದೇ ರೀತಿಯಲ್ಲಿ ಈ ಆತ್ಮಹಂಸವೂ ಸಹಿತ ಮಂದ್ರಸ್ಥಾಯಿಯಲ್ಲಿ ಅತಿಧವಲಗೊಂಡು ಸಾಗುವ ಪಥವೇ 'ಸಾಧಕನ ಪ್ರಾರ್ಥನಾ ಪಥವಾಗಿದೆ'. ಇದನ್ನೇ ಶ್ರೀ ಅರವಿಂದರು –

"ನನ್ನ ಪ್ರಾಣವದು ಅವನ ಪ್ರಾಣದೊಡಗೂಡಿ ಸ್ಪಂದದಲ್ಲಿ
ಅವಿಚ್ಛಿನ್ನದಲಿ ಅವಿಚಲದಿ ಸತತ ಸಮ್ಮಿಲನಗೊಂಡಿತಿಲ್ಲಿ
ಐಕ್ಯೈಕವಾದ ಆ ಘನದ ಮೂಲ ಕರ್ಮಫಲ ಸಾರವಾಗಿ
ನಮ್ಮ ಜೀವಗಳು ಜನಿಸಿ ಬಂದಿದ್ದ ಆ ಸ್ಥಾನ ಜ್ಯೋತಿಯಾಗಿ"


(ಶ್ರೀ ಅರವಿಂದರ 'ಸಾವಿತ್ರಿ'; ದಳ 11 'ಚಿರಂತನದ ಉಷೆ', ಪುಟ 692)

ಎಂದು ಹೇಳಿದ್ದಾರೆ.

ಒಟ್ಟಿನಲ್ಲಿ ಮೃಣ್ಮಯದ ಜೀವ–ಜೀವನವನ್ನು ಪರಿವರ್ತಗೊಳಿಸಿಕೊಂಡು ದಿವ್ಯಜೀವನದ ಭವ್ಯ ಸಾರವನ್ನು ಸುಶ್ರಾವ್ಯಗೊಳಿಸಿಕೊಂಡು, ಆತ್ಮದ ಈ

ತುಡಿತದಭಿಲಾಷೆಯ ಸ್ಪಂದವನ್ನು ಸತತದಲ್ಲೂ ಹೊಂದಿ, ಈ ಜಗವನ್ನು ಮತ್ತು ಮನುಕುಲವನ್ನು ಉಳಿಸಿ, ವಿಕಸನದ ಅಲೆಯಲ್ಲಿ ಕರೆದೊಯ್ಯುವ ಸಾಧನೆಗೆ ಬೇಕಾದದ್ದು ಈ ಹಂತದ "ಪ್ರಾರ್ಥನೆ". ಇದೇ 'ಸಾಧಕನ ಪ್ರಾರ್ಥನೆ'; ಇಲ್ಲಿ ಸಾಧಕನ ಜೀವನವೇ(ಜೀವನ ವಿಧಾನವು) ಪ್ರಾರ್ಥನೆಯಾಗಿರುತ್ತದೆ. ಇದನ್ನೇ ಅಲ್ಲಮಪ್ರಭು 'ಭಾವ ಬೆತ್ತಲೆಯಾಗಿ ಮನ ದಿಗಂಬರವಾದಾಗ ಆತ್ಮ ವಿಶ್ವಂಭರ'ವಾಗುತ್ತದೆ ಎಂದು ಹೇಳಿದ್ದಾನೆ.

ಯಾರೆಲ್ಲಾ ತಮ್ಮ ತಮ್ಮ ಹೃದಯದಲ್ಲಿ ಪರಮ ಪರಿಶುದ್ಧ ಭಾವದಲ್ಲಿ ಆ ದೇವನಿಗೆ ನೆಲೆಯನ್ನು ಕೊಟ್ಟಿರುತ್ತಾರೆಯೋ, ಅವರ ಚಿಂತಗಳೆಲ್ಲವೂ "ಪ್ರಾರ್ಥನಾ ಸದೃಶವೇ" ಆಗಿರುತ್ತವೆ. ಏಕೆಂದರೆ ಆ ಚಿಂತನೆಗಳಿಗೆ ದೈವಕೃಪೆಯು ಇರುತ್ತದೆ. ಇದನ್ನೇ ಶ್ರೀಮಾತೆಯವರೂ ಸಹಿತ, ಈ ಸ್ವರ್ಗಸೀಮೆಯ ಚಿನ್ಮಯದ ತೋಷವನ್ನು ಪ್ರತಿಫಲನಗೊಳಿಸಲೆಂದು ಹಾಗೂ ವಿಶ್ವಚೇತನದ ವಲಯದೆದೆಯಿಂದ ಅವತರಿಸಿ ಬರುವದನ್ನು, ಜೊತೆಗೆ ಅದು ಸಹವರ್ತಿಯಾಗಿರುವದನ್ನೂ ಹೇಳಿದ್ದಾರೆ. ಈ ಚಿತ್ಪ್ರಭೆಯ ಮಂಡಲದಲ್ಲಿ ವಿಶ್ವಶಕ್ತಿಯನ್ನು ಕಾಣುವದನ್ನು "ಪ್ರತ್ಯಭಿಜ್ಞಾ" ಹಂತದಲ್ಲಿ ಅನುಷ್ಠಾನಗೊಳಿಸುವದೇ ಈ "ಪ್ರಾರ್ಥನೆಯ ಸಾಧನಾ ವಿಶೇಷ"ವಾಗಿದೆ. ಈ ಪಥವು (ಅಂದರೆ ಈ ಸಾಧನಾ ಪಥದ ಪ್ರಾರ್ಥನೆಯು) ಸುಪ್ತ ಚೈತನವು ಸಚ್ಚಿದಾನಂದ ಸ್ವರೂಪದ ಸಮ್ಯಕ್ಸಮಾಧಿಯಲ್ಲಿ, ವಿಶ್ವಶಕ್ತಿಯ ಜೊತೆಗೆ ಸ್ಪಂದಗೊಳ್ಳುವ ಪಥವಾಗಿದೆ. ನಮ್ಮ ದೇಹದಲ್ಲಿ ಅಭಿಧಮನಿ ನಾಳದಲ್ಲಿ ಪ್ರವಹಿಸುವ ರಕ್ತವು ಹೇಗೆ ಹೃದಯದಲ್ಲಿ ಹೊಕ್ಕು ಪರಿಶುದ್ಧಗೊಂಡು ಅಪಧಮನಿಗಳ ಮೂಲಕ ಪ್ರಾಣರಸ(ಶುದ್ಧ ರಕ್ತ)ವಾಗುತ್ತದೆಯೋ, ಅದೇ ರೀತಿಯಲ್ಲಿ ಸಾಧನಾ ಪಥದ ಪ್ರಾರ್ಥನೆಯೂ ಇರುತ್ತದೆ.



ಯಾವಾಗ ನಾನು ದೇವರನ್ನು ಸಮೀಪಿಸುತ್ತಿದ್ದೇನೆಯೋ, ಆ ಸಮಯದಲ್ಲಿ, ನಾನು ಅವನಲ್ಲಿ ನನ್ನ ವಿಶ್ವಾಸವನ್ನು ಒತ್ತಾಯಪೂರ್ವಕವಾಗಿ ಉಳಿಸಿಕೊಂಡಿದ್ದೆನು. ಆಗ ನನ್ನಲ್ಲಿ ಅಜ್ಞೇಯವಾದಿ(Agnostic)ನೋರ್ವ ಇದ್ದ. ನಾಸ್ತಿಕನೋರ್ವ (Atheist) ಇದ್ದ. ಸಂದೇಹವಾದಿ (Sceptic) ಸಹಿತ ಇದ್ದನು. ಮತ್ತೆ ಇದ್ದಾನೆ ಎನ್ನುವದರ ಬಗೆಗೇ ನಾನು ಸಂಪೂರ್ಣವಾದ ಖಚಿತತೆಯನ್ನೂ ಹೊಂದಿರಲಿಲ್ಲ. "ಅವನ" ಅಸ್ತಿತ್ವವನ್ನು ನಾನೆಂದೂ ಅನುಭವಿಸಿದ್ದೇ ಇಲ್ಲ. ಆದಾಗ್ಯೂ ವೇದದ ಕೆಲವು ವಿಷಯಗಳು ನನ್ನನ್ನು 'ಸತ್ಯದ' ಕಡೆಗೆ ಸೆಳೆದವು. ಅದೇ ರೀತಿ "ಗೀತೆ"ಯಲ್ಲಿನ ಸತ್ಯ, ಹಿಂದೂ ವಿಚಾರ ಧಾರೆಯಲ್ಲಿ (ಹಿಂದೂ ಪರಂಪರೆಯಲ್ಲಿ) ಹೇಳಲ್ಪಟ್ಟಿರುವ ಸತ್ಯದಿಂದ ನಾನು ಸೆಳೆಯಲ್ಪಟ್ಟಿದ್ದೇನೆ. ಹೀಗಾಗಿ ಯೋಗದಲ್ಲಿ ಮಹತ್ತಾದ ಸತ್ಯವೊಂದು ಎಲ್ಲಿಯಾದರೂ ಇದ್ದಿರಲೇಬೇಕೆಂದು ನಾನು ಭಾವಿಸಿದ್ದೇನೆ. ಅದೂ ವೇದಾಂತವನ್ನು ಆಧರಿಸಿಕೊಂಡಿರುವ ಬೃಹತ್–ಸತ್ಯವೊಂದು ಈ 'ಮತ'ದಲ್ಲಿ ಇರುವದೆನ್ನುವ ವಿಷಯವನ್ನು ಕಂಡಿದ್ದೇನೆ.

ನನ್ನ ಈ ವಿಚಾರವವು ಸೂಕ್ತ ಹೌದೋ ಅಲ್ಲವೋ ಎನ್ನುವದನ್ನು ಕಂಡುಕೊಳ್ಳಲು ಮತ್ತು ನಾನು ಯಾವಾಗ ಯೋಗದ ಕಡೆಗೆ ನನ್ನನ್ನು ತೊಡಗಿಸಿಕೊಂಡೆನೋ, ಮತ್ತು ಅದನ್ನು ಆಚರಣೆಗೊಳಿಸಿಕೊಳ್ಳಲು ದೃಢಸಂಕಲ್ಪ

ಮಾಡಿಕೊಂಡೆನೋ ಮತ್ತು ಅದನ್ನು ಪರಿಪೂರ್ಣವಾಗಿ ಆತ್ಮದಿಂದಲೇ ಅನುಷ್ಠಾನಗೊಳಿಸಿಕೊಂಡು 'ಅವನನ್ನು' ಕುರಿತು ಈ ಪ್ರಾರ್ಥನೆ ಮೂಲಕ– "ನೀನೇ ಕಲಾಕೌಶಲ್ಯವಾಗಿದ್ದಲ್ಲಿ, ನೀನು ನನ್ನ ಹೃದಯವನ್ನು ಅರಿತಿದ್ದೀಯಾ. ನಾನು ಮುಕ್ತಿಯ ಸಲುವಾಗಿ ಪ್ರಾರ್ಥಿಸುತ್ತಿಲ್ಲ ಎನ್ನುವದೂ ನಿನಗೆ ತಿಳಿದಿದೆ. ಇನ್ನುಳಿದವರು ಬೇಡುತ್ತಿರುವ ಯಾವುದನ್ನೂ ನಾನು ನಿನ್ನಲ್ಲಿ ಬೇಡುತ್ತಿಲ್ಲ. ನನ್ನ ರಾಷ್ಟ್ರವನ್ನು ಜಾಗ್ರತಿಗೊಳಿಸುವ ಸಲುವಾಗಿ ನನಗೆ ಶಕ್ತಿ ನೀಡು," ಎಂದು ಬೇಡಿಕೆ ಸಲ್ಲಿಸುತ್ತಿದ್ದೇನೆ. ನೀನು ಪ್ರೀತಿಸುತ್ತಿರುವ ಜನರಿಗಾಗಿಯೇ ನಾನೂ ಸದಾ ಕಾರ್ಯಪ್ರವೃತ್ತವಾಗಿರುವಂತೆ ಮಾಡು. ಅದೇ ರೀತಿ ಬದುಕುವಂತೆ ಅವಕಾಶ ಒದಗಿಸು ಎಂದು ಕೇಳಿಕೊಳ್ಳುತ್ತಿದ್ದೇನೆ. ನನ್ನ ಜೀವನವನ್ನು ಇದಕ್ಕಾಗಿಯೇ ಮುಡಿಪಾಗಿಡುವಂತೆ ಅನುಗ್ರಹಿಸು ಎಂದು ಪ್ರಾರ್ಥಿಸುತ್ತೇನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/9–10 – ಶ್ರೀ ಅರವಿಂದರು**

ಅಂತರಾಳದಲ್ಲಿಯೂ ಮತ್ತೂ ಮತ್ತೂ ಪ್ರಗಾಢವಾದ ಅಂತರಾಳವಿದೆ; ಔನ್ನತ್ಯದಲ್ಲಿ ಮತ್ತೂ ಮತ್ತೂ ತದುತ್ತರದ ಔನ್ನತ್ಯವಿದೆ; ಆದಷ್ಟು ಬೇಗ ಮಾನವನು ಈ ಅನಂತತೆಯ ಗಡಿಯ ಸಮೀಪಕ್ಕೆ ಅವನದೇ ಪರಿಪೂರ್ಣ ಸ್ವರೂಪದಲ್ಲಿ ಆಗಮಿಸಲಿದ್ದಾನೆ. ಅದಕ್ಕಾಗಿ ಆ ಅನಂತತೆಯೇ ಅಸ್ತಿತ್ವವಾಗಿ–ದೇವರಾಗಿದ್ದಾನೆ.

ನಾನು ಅನಂತಾನಂತ ಶಕ್ತಿಯನ್ನು ಹಾಗು ಬಲವನ್ನು ಹೊಂದಲು ಅಭೀಪ್ಸೆ ಹೊಂದುತ್ತೇನೆ, ಅನಂತಾನಂತ ಜ್ಞಾನವನ್ನು ಹೊಂದಲು, ಅನಂತತೆಯ ಕೃಪೆಯನ್ನು ಪಡೆಯಲು ಅಭೀಪ್ಸೆ ಹೊಂದಿದ್ದೇನೆ. ನಾನು ಇದನ್ನು ಪಡೆಯಬಲ್ಲೆನೇ? ಹೌದು, ಖಂಡಿತವಾಗಿಯೂ ಪಡೆಯಬಲ್ಲೆ. ಆದರೆ ಅನಂತತೆಯ ಸ್ವಭಾವವೆಂದರೆ ಅದಕ್ಕೆ ಅಂತಿಮ ಎನ್ನುವದೇ ಇಲ್ಲ. ಹೀಗಾಗಿ ನಾನು ಅದನ್ನು ಪಡೆದಿಲ್ಲ ಎಂದು ಹೇಳಬೇಡಿ. ಏಕೆಂದರೆ ನಾನು "ಅದೇ" ಆಗಿದ್ದೇನೆ. ಮಾನವನು ದೇವತ್ವವನ್ನು ಪಡೆದುಕೊಳ್ಳಲು ದೇವರೇ ಆಗಬಹುದಾಗಿದೆ.

ಇದನ್ನು ಸಾಧಿಸಿಕೊಳ್ಳುವದಕ್ಕಿಂತ ಮುಂಚೆ ವ್ಯಕ್ತಿಯು 'ಅವನೊಡನೆ' ಇರುವ ಸಂಬಂಧಗಳನ್ನು ಹೊಂದಿ, ಅಲ್ಲಿ ಪ್ರವೇಶ ಪಡೆಯಬಹುದು.

ದೇವರೊಡನೆ ಇರುವ ಸಂಬಂಧಗಳೊಡನೆ ಪ್ರವೇಶ ಪಡೆಯುವದು ಎಂದರೆ 'ಯೋಗ'ವಾಗಿರುತ್ತದೆ. ಇದೊಂದು ಪರಮೋಚ್ಚ ಆನಂದ (Rapture) ಮತ್ತು ಪವಿತ್ರ ಸಂತುಷ್ಟಿಯು (Nobler utility) ಆಗಿರುತ್ತದೆ. ನಾವೇ ವಿಕಸನಗೊಳಿಸಿದ (ರೂಪಿಸಿದ) ಮಾನವೀಯತೆಯ ಅಂತರ್ಯದಲ್ಲಿಯೇ ಅದರ ದಿಕ್ಸೂಚಿಯ(Compass)ಲ್ಲಿಯೇ ಈ ಸಂಬಂಧಗಳು ಇರುತ್ತವೆ. ಇವುಗಳು ಪ್ರಾರ್ಥನೆ, ಆರಾಧನೆ, ಸಮರ್ಪಣೆ, ತ್ಯಾಗ, ಚಿಂತನ, ವಿಶ್ವಾಸ, ವಿಜ್ಞಾನ, ತತ್ತ್ವಜ್ಞಾನವೆಂದು ಕರೆಯಲ್ಪಡುತ್ತವೆ. ನಮ್ಮ ವಿಕಸಿತದ ಆ ಸಾಮರ್ಥ್ಯದ ಆಚೆಯೂ ಮತ್ತೂ ಮತ್ತೂ ಕೆಲವು ಸಂಬಂಧಗಳು ಇರುತ್ತವೆ. ಇವುಗಳನ್ನು ನಾವಿನ್ನೂ ಪ್ರಗತಿಗೊಳಿಸಿ–ಕೊಳ್ಳಬೇಕಾಗಿದೆ. ಹಲವು ಅನುಷ್ಠಾನಗಳ ಮೂಲಕ ಸಾಧಿತಗೊಂಡಿರುವ ಈ ಸಂಬಂಧಗಳನ್ನು ನಾನು ಸಾಮಾನ್ಯವಾಗಿ "ಯೋಗ"ವೆಂದು ಕರೆಯುತ್ತೇನೆ.

ನಾವು ಅವನನ್ನು 'ದೇವರು' ಎಂದು ಅರಿತುಕೊಂಡಿರಲಿಕ್ಕಿಲ್ಲ, ಆದರೆ ನಾವು ಅವನನ್ನು 'ಪ್ರಕೃತಿ' ಎಂದು ಅರಿತಿದ್ದೇವೆ. ನಮ್ಮ ಪರಮಾತ್ಮವೆಂದು (Higher Self) ಎಂದು, ಅನಂತತೆಯೆಂದು ಹಾಗೂ ಒಂದು ಹಂತದವರೆಗೂ ಅವರ್ಣನೀಯ (Ineffable) ಗುರಿ ಎಂದೂ ಅರಿತುಕೊಂಡಿದ್ದೇವೆ. ಬುದ್ಧನು 'ಅವನನ್ನು' ಸಾಕ್ಷಾತ್ಕರಿಸಿಕೊಂಡಿದ್ದು ಇದೇ ರೀತಿಯಲ್ಲಿಯೇ ಇತ್ತು. ಆ ಕಠೋರ ಅದ್ವೈತಿಯೂ ಸಹಿತ ಇದೇ ರೀತಿಯಲ್ಲಿಯೇ 'ಅವನನ್ನು' ಸಮೀಪಿಸಿದ್ದಾನೆ. 'ಅವನು' ಆಸ್ತಿಕನಿಗೂ ಸಹಿತ ಅಷ್ಟೇ ಸುಲಭದಲ್ಲಿ ಲಭ್ಯವಾಗಿದ್ದಾನೆ. ಇನ್ನು ಲೌಕಿಕವಾದಿಗೆ ಅವನು ಜಡ(Matter)ದಲ್ಲಿಯೇ ಅಡಗಿಕೊಂಡಿದ್ದಾನೆ. ಮತ್ತೆ ನಿರೀಶ್ವರವಾದಿ (Nihilist)ಗಳಿಗೆ ಅವನು ಆಘಾಥ ನೀಡುವವ (ambushed) ಆಗಿದ್ದು, ಜೊತೆಗೆ ಸರ್ವನಾಶದ ಹೆಬ್ಬಯಕೆಯನ್ನೂ ಹೊಂದಿದವ (bossom of Annihilation)ನಾಗಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/5 – ಶ್ರೀ ಅರವಿಂದರು**

### ಶ್ರೀ ಅರವಿಂದ ವಿರಚಿತ "ಪ್ರಾರ್ಥನೆ"

ನನ್ನಂತರಂಗದಲ್ಲೆಲ್ಲ ವ್ಯಾಪ್ತಗೊಳ್ಳು, ಓ, ವರುಣದೇವ;
ಮಾಬಲವೆ ಆಗಿ ನನ್ನಲ್ಲಿ ನೆಲೆಸು ಈಗ, ಓ ಇಂದ್ರದೇವ;
ಓ ಸೂರ್ಯದೇವ, ಚೈತ್ಯದುತ್ಕರ್ಷ ಜೊತೆ ತೇಜದೀಪ್ತಿಯಾಗು;
ಓ ಚಂದ್ರದೇವ, ಮಾಧುರ್ಯದುಂಬಿ ಸೌಂದರ್ಯಪೂರ್ಣನಾಗು.

ಉಗ್ರಾತಿ–ಉಗ್ರ ರೌದ್ರಭಯವಾಗು, ಓ ಭದ್ರರುದ್ರದೇವ;
ಪ್ರಚೋದನೆ ನೀಡಿ ತ್ವರಿತದಲಿ, ಓ ಮರುತದೇವಗಣವೆ ಈಗ;
ಸಾಮರ್ಥ್ಯಶೀಲ ಜೊತೆಗೆ ಸಾಹಸದಿ, ಆರ್ಯಮಾ ನೆಲೆಸು ಬೇಗ;
ಇಂದ್ರಿಯಾನಂದ ಆನಂದಘನವೆ ಆಗು, ಓ ಭಗನೆ ಸಾಗಿ;
ಕೋಮಲದ ಮತ್ತೆ ಪ್ರೇಮ–ಕೃಪೆಯೊಡನೆ ಜೊತೆಗೊಳ್ಳು ಮಿತ್ರನಾಗಿ.

ಸುಸ್ಪಷ್ಟ–ತೇಜದಲಿ ಪ್ರಕಟಗೊಳ್ಳು, ಓ ದಿವ್ಯ ಉಷಾದೇವಿ;
ಓ ತಮವೆ, ಸತ್ಯ ನಿಷ್ಠತೆಯ ಜೊತೆಗೆ ಅರ್ಥಗರ್ಭಿತದಿ ನೆಲೆಸು.

ಓ ಜೀವ–ಜೀವನವೆ, ಪರಿಪೂರ್ಣವಾಗು, ಸಿದ್ಧನಿರು ಜೊತೆಗೆ ತೇಲು;
ಓ ಮೃತ್ಯು, ನನ್ನ ಮುನ್ನಡೆಸು ಜನ್ಮ–ಜನ್ಮಗಳ ಹೆಜ್ಜೆ ಸಾಲು.

ಸೌಷಮ್ಯಗೊಳಿಸು ಈ ಸರ್ವವನ್ನು, ಓ ಬೃಹ್ಮಣಸ್ಪತಿಯೆ.
ಈ ದೈವಕೆಲ್ಲ ವಸ್ತುವಾಗಿಸದೆನಗೆ, ಕೃಪೆಯ ತೋರು ಕಾಳಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/76 – ಶ್ರೀ ಅರವಿಂದರು**

ಈ ರೀತಿಯಾಗಿ ಶ್ರೀ ಅರವಿಂದರು ಕಾಳಿಮಾತೆಯನ್ನು ಸರ್ವಶ್ರೇಷ್ಠ ಮೋಕ್ಷದಾಯಿನಿ ಶಕ್ತಿ ಎಂದು ಆರಾಧಿಸುತ್ತಾರೆ. ಕಾಳಿಮಾತೆಯು ವಾತ್ಸಲ್ಯಭಾವಪೂರ್ಣಳಾಗಿಯೇ ನಿಮ್ಮನ್ನು ಪ್ರಗತಿ ಹೊಂದುವತ್ತ ಪ್ರಚೋದಿಸುತ್ತಾಳೆ. ನಿಮ್ಮ ಪ್ರಗತಿಗೆ ಅಡೆ–ತಡೆಗಳನ್ನು ಒಡ್ಡುವ ಯಾವುದನ್ನೂ ಅವಳು ಉಳಿಸುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/376–77 – ಶ್ರೀಮಾತೆ**

# ಸಾಧಕರಿಗಾಗಿ ಪ್ರಾರ್ಥನೆಗಳು

– ಅನುವಾದ: ಡಾ॥ ಮಹಾದೇವ ಸಕ್ರಿ

**ಶುದ್ಧೀಕರಣಕ್ಕಾಗಿ ಪ್ರಾರ್ಥನೆಗಳು**

ನನ್ನನ್ನು ಕೋಪದಿಂದ, ಕೃತಘ್ನತೆಯಿಂದ ಮತ್ತು ಹುಚ್ಚು ಅಹಂಕಾರದಿಂದ ವಿಮುಕ್ತಗೊಳಿಸು.

*

ಶ್ರೀಮಾತೆಯವರಿಗೆ ನಮ್ರ ಮತ್ತು ವಿಧೇಯನಾಗಲು ಹಾಗೂ ಅವರ ಕಾರ್ಯಕ್ಕಾಗಿ ಒಂದು ಯೋಗ್ಯ ಉಪಕರಣವಾಗುವ ಸಲುವಾಗಿ, ಸ್ವ–ಬಯಕೆಯಿಂದ ಹಾಗೂ ಸ್ವ–ಸಮರ್ಥನೆಯಿಂದ ಶುದ್ಧಿ ಹೊಂದಲು, ಶರಣಾಗತನಾಗಿ ಮತ್ತು ನಾನು ಮಾಡುವ ಎಲ್ಲದಕ್ಕೂ ಅವರ ಅನುಗ್ರಹದಿಂದ ಮಾರ್ಗದರ್ಶಿತನಾಗಿ ನಾನು ಪ್ರಾರ್ಥಿಸುತ್ತೇನೆ.

*

ನಾನು ಇನ್ನು ಮುಂದೆ ದೃಢ ನಿರ್ಧಾರದಿಂದ ದೋಷಗಳನ್ನು ಹಾಗೂ ಕೊರತೆಗಳನ್ನು ನನ್ನಿಂದ ಕಿತ್ತು ಎಸೆಯಬಹುದು ಮತ್ತು ಸಂಪೂರ್ಣವಾಗಿ ಯಶಸ್ವಿಯಾಗುವ ತನಕ ಸಾಮರ್ಥ್ಯದಿಂದ ಅವಿರತ ಪ್ರಯತ್ನ ಮಾಡಬಹುದು. ಜಗಳಗಂಟತನ, ಆತ್ಮಾಭಿಮಾನ ಮತ್ತು ಆಡಂಬರ, ಶ್ರೀಮಾತೆಯವರ ವಿರುದ್ಧ ದುರಹಂಕಾರ, ಅಸಹಕಾರ ಮತ್ತು ದಂಗೆ, ಬೇರೆಯವರ ವಿರುದ್ಧ ದ್ವೇಷ ಮತ್ತು ಕಡುಹಗೆ, ಮಾತಿನ ಮತ್ತು ನಡತೆಯ ಹಿಂಸೆ, ಹುಸಿತನ, ಸ್ವಯಂ–ಸಮರ್ಥನೆ ಮತ್ತು ಹಕ್ಕೊತ್ತಾಯ, ಅಸಮಾಧಾನ ಮತ್ತು ಗೊಣಗುಟ್ಟುವ ಎಲ್ಲವುಗಳನ್ನು ಕಿತ್ತೊಗೆಯಬಹುದು ಅಥವಾ ತ್ಯಜಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/843 – ಶ್ರೀ ಅರವಿಂದರು**

ಹಗಲಿನಲ್ಲಿರುವಂತೆ ರಾತ್ರಿಯೂ ನನ್ನ ಜೊತೆ ಯಾವಾಗಲೂ ಇರು.

ಎಚ್ಚರವಿರುವಾಗಿನಂತೆ, ನಿದ್ರೆಯಲ್ಲಿಯೂ ಯಾವಾಗಲೂ ನಿಮ್ಮ ನಿಜ ಇರುವಿಕೆಯ ಅನುಭವ ನನಗಾಗಲಿ.

ಅದು ನನ್ನಲ್ಲಿ ಸತ್ಯ, ಪ್ರಜ್ಞೆ ಮತ್ತು ಅತ್ಯಾನಂದವನ್ನು ಯಾವಾಗಲೂ ಉಳಿಸಿ ಬೆಳೆಯುವಂತೆ ಮಾಡಲಿ.

**ಚಂಪಕಲಾಲ್ ವಾಣಿ, ಪು. 4–5**

ನನಗಾಗಿ ಪ್ರಾರಂಭವಾಗುವ ಈ ವರ್ಷವು, ಭಗವಂತನಲ್ಲಿ ಅಳಿಸಲಾಗದ ವಿಶ್ವಾಸ ಮತ್ತು ಭರವಸೆ ಹಾಗೂ ನಿರಂತರ ಮಹತ್ವಾಕಾಂಕ್ಷೆಯ ಹೊಸ ಜೀವನದ ಪ್ರಾರಂಭವಾಗಲಿ.

**ಚಂಪಕಲಾಲರ ಸಂಪತ್ತು, 123**

ಓ ನನ್ನ ದೇವರೆ, ನನ್ನನ್ನು ಸಂಪೂರ್ಣವಾಗಿ ನಿನ್ನವನನ್ನಾಗಿ ಮಾಡಿಕೊ.

*

ನನಗೆ ನೆಮ್ಮದಿಯ ಭರವಸೆಯನ್ನು, ಶಾಂತಿಯುತ ಬಲವನ್ನು, ದೃಢವಾದ ನಂಬಿಕೆ ಹಾಗೂ ಭಕ್ತಿಯನ್ನು ದಯಪಾಲಿಸು.

*

ನನ್ನ ದೇವರೆ, ನನ್ನ ಮಾತೆಯೆ,

ನಿಮ್ಮಯ ಆಶೀರ್ವಾದಗಳಿಂದ ಹಾಗೂ ನಿಮ್ಮಯ ಅನುಗ್ರಹದಿಂದ ನೀವು ಯಾವಾಗಲೂ ನನ್ನೊಂದಿಗಿರುವಿರಿ.

ನಿಮ್ಮ ಉಪಸ್ಥಿತಿಯೇ ಸರ್ವೋಚ್ಚ ರಕ್ಷಣೆ.

"ಓ ದೇವರೆ, ಎಲ್ಲ ತೊಂದರೆಗಳನ್ನು ಮೀರಿಸುವಂಥ ಈ ದೃಢವಾದ ನಂಬಿಕೆಯು ನಿನ್ನಲ್ಲಿರುವಂತೆ ಅನುಗ್ರಹಿಸು."

ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ ಗುಣವಂತನಿಗಾಗಿ ಒಂದು ಪ್ರಾರ್ಥನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/210, 213, 215, 212 – ಶ್ರೀಮಾತೆ**

"ಓ ದೇವರೆ, ನಿಮ್ಮನ್ನೆಂದಿಗೂ ಮರೆಯದಂತೆ ಅನುಗ್ರಹಿಸಿರಿ".

*

"ಓ ದೇವರೆ, ನನ್ನನ್ನು ನೇರವಾಗಿ ನಿಮ್ಮೆಡೆಗೆ ನಡೆಸಿಕೊಂಡು ಹೋಗುವಂಥ ಪರಿಪೂರ್ಣ ಪ್ರಾಮಾಣಿಕತೆಯನ್ನು ಕರುಣಿಸಿರಿ".

**ಚಂಪಕಲಾಲರ ಸಂಪತ್ತು, 124 – ಶ್ರೀಮಾತೆ**

# ತೇಜಸ್ಸಿನ ಮಾತೆಯವರಿಗೆ ಸ್ತುತಿಗೀತೆ

ಕತ್ತಲೆಯ ಗವಿಯೊಳಗೆ ಬೆಳಕು ಬರುವಂತೆ ಒಂದು ಆಂತರಿಕ ಪೂರ್ಣತೆ ಬಂದಿದೆ. ಅದು ವ್ಯಾಪಿಸುತ್ತದೆ, ಅದು ಪ್ರಕಾಶಿಸುತ್ತದೆ, ಅದು ಜೀವನದ ವಿಧವಿಧವಾದ ನರಗಳನ್ನು ಕಂಪಿಸುತ್ತದೆ; ಪ್ರಸ್ತುತ ಬದಲಾಗುವ ರಚನೆಗಳ ಆಧಾರದ ಮೇಲೆ ಭವಿಷ್ಯತ್ತಿನ ಹೊಸವುಗಳನ್ನು ಪ್ರಾರಂಭಿಸಲು ನನ್ನನ್ನು ಸಾಧ್ಯವಾಗಿಸಲು ಮರೆತುಹೋದ ಗತಕಾಲದ ಸಾಧನೆಗಳೊಂದಿಗೆ ಅದು ಸಂಪರ್ಕವನ್ನು ಕಂಡುಕೊಂಡಿದೆ. ಕತ್ತಲೆಯನ್ನು ಪ್ರಕಾಶವನ್ನಾಗಿ ಹಾಗೂ ಸತ್ಯವನ್ನಾಗಿ ಪರಿವರ್ತಿಸಲು ಮತ್ತು ಕೊಳಕು ಹಾಗೂ ದೋಷಗಳನ್ನು ಸುಂದರವನ್ನಾಗಿ ಮತ್ತು ದೋಷರಹಿತವಾಗಿ ಪರಿವರ್ತಿಸಲು ಜೀವನದ ಪ್ರವಾಹಗಳು ಉದ್ಭವಿಸಿ ಮೇಲಣ ಸ್ವರ್ಗಗಳಿಂದ ಕೆಳಗಿಳಿಯುವ ಬೆಳಕಿನ ಕಿರಣಗಳನ್ನು ಸೇರುವವು.

ಓ ತೇಜಸ್ಸುಗಳ ಮಾತೆಯವರೆ, ನನ್ನ ಮನಸ್ಸಿನ ಇಕ್ಕಟ್ಟಾದ ಪದರುಗಳಲ್ಲಿ ತಾವು ಗೋಚರಿಸಿದ್ದೀರಿ. ಅದರ ಆಳವಿಲ್ಲದ ಕಟ್ಟುನಿಟ್ಟಿನೊಳಗಿಂದ, ಅದರ ಗೋಡೆಕಟ್ಟಿದ ಪ್ರದೇಶಗಳ ಮಧ್ಯದಲ್ಲಿ ತನ್ನ ಚಿರವಾದ ಜೀವನವನ್ನು ಜೀವಿಸುವ ಹೃದಯದಂತಹ ಏನೋ ಒಂದನ್ನು ಸೃಷ್ಟಿಸಿರುವಿರಿ. ತಾವುಗಳು ನನಗೆ, ಮನಸ್ಸಿನ ವಸ್ತುರಹಿತ ಧ್ರುವಪ್ರದೇಶಗಳಲ್ಲಿರುವ ಜೀವಂತ ಹಾಗೂ ಬೆಚ್ಚಗಿನ ಕೋಣೆಯನ್ನು ತೋರಿಸಿರುವಿರಿ. ನಾನು ಅಲ್ಲಿ ಸುರಕ್ಷಿತವಾಗಿ ವಿಶ್ರಮಿಸಿ ತಮ್ಮಲ್ಲಿ ನನ್ನ ಆಶ್ರಯವನ್ನು ಕಂಡುಕೊಳ್ಳುವೆನು.

ಚಲಿಸುವ ಬಲಗಳ ಅವಶೇಷಗಳ ಕೆಳಗಣ ಜಾಲದ ಮಧ್ಯದಲ್ಲಿ ನಾನು ನಿಮ್ಮ ಉಪಸ್ಥಿತಿಯನ್ನು ಅನುಭವಿಸುತ್ತೇನೆ. ಚಲಿಸುವ ಬಲಗಳ ಅವಶೇಷಗಳ ಮೇಲಣ ಜಾಲದಲ್ಲಿ ನೀವು ಪ್ರವೇಶಿಸಿ, ಅಲ್ಲಿ ಮೊದಲಿಲ್ಲದ ಪ್ರೀತಿಪೂರಿತ ಜೀವವನ್ನು ಸಹ ಸುರಿಸುತ್ತಿದ್ದೀರಿ, ಅಲ್ಲಿ ನೀವು ಉಲ್ಲಾಸವಿಲ್ಲದ ಪ್ರಭೆಯನ್ನು ದೈವ ತೇಜಸ್ಸನ್ನಾಗಿ ಮಾರ್ಪಡಿಸಿದ್ದೀರಿ. ನಿಮ್ಮ ಕ್ರಿಯಾಶೀಲ ಮತ್ತು ಉಪಯುಕ್ತವಾದ ಉಪಸ್ಥಿತಿ ಎಲ್ಲೆಲ್ಲಿಯೂ ಇದೆ. ನನ್ನ ಮಹತ್ವಾಕಾಂಕ್ಷೆಯ ಶಬ್ದಗಳಿಗೆ, ನನ್ನ ಅನಲ ಬೇಡಿಕೆಗೆ ನಿಮ್ಮ ಸರ್ವವ್ಯಾಪಿತ್ವದ ಗಮನ ಕೊಟ್ಟಿದ್ದೀರಿ. ನಾನು ಅರಿವಿಲ್ಲದೆ ಯಾವುದಕ್ಕಾಗಿ ಹುಡುಕಿದೆನೊ, ಅದಕ್ಕಿಂತ ಹೆಚ್ಚಾಗಿ ನೀವು ನನಗೆ ತೆರೆದುಕೊಂಡಿದ್ದೀರಿ. ಸತ್ಯ ಮತ್ತಯ ಕಟ್ಟಳೆಯಲ್ಲಿದ್ದಾಗ ನೀವು ನನ್ನೊಡನೆ

ಒಂದಾಗಿದ್ದೀರಿ ಮತ್ತು ಅನೋನ್ಯವಾಗಿದ್ದೀರಿ. ಅದೇ ರೀತಿ, ಮಿಥ್ಯಾಸ್ಥಿತಿಯಲ್ಲಿದ್ದಾಗ ಹಾಗೂ ದೋಷಗಳಲ್ಲಿ ನನ್ನಿಂದ ದೂರವಾಗಿದ್ದೀರಿ.

ಯಾವಾಗ ನನ್ನ ಸುತ್ತಮುತ್ತ ಕತ್ತಲಾಗಿಸುವ ನೆರಳುಗಳು ಇಲ್ಲವಾಗುತ್ತವೆಯೋ, ಯಾವಾಗ ನೀವು ನನ್ನ ಅಸ್ತಿತ್ವದ ಪ್ರತಿ ಭಾಗದಲ್ಲಿ ಎಲ್ಲ ಕಪಟತನಗಳಿಂದ ಮತ್ತು ಆಡಂಬರಗಳಿಂದ ಮುಕ್ತವಾದ ನನ್ನನ್ನು ನೋಡುತ್ತೀರೋ; ಯಾವಾಗ ನೀವು ನನ್ನ ದೇಹದ ಪ್ರತಿ ಕೋಶದಲ್ಲಿ ನಿಮಗಾಗಿ ಶಾಶ್ವತ ಮನೆಯನ್ನು ಮತ್ತು ಶಾಶ್ವತ ಗುಡಿಯನ್ನು ನೋಡುತ್ತೀರೋ; ಯಾವಾಗ ನೀವು ನನ್ನನ್ನು ನಿಮ್ಮ ಸ್ವವ್ಯಕ್ತಿತ್ವದಲ್ಲಿ ಒಂದಾಗಿ ನೋಡಿದಾಗ್ಯೂ ನಿಮ್ಮನ್ನು ಪೂಜಿಸುತ್ತಿರುತ್ತೇನೆಯೋ; ಯಾವಾಗ ನೀವು ನನ್ನ ಅಹಂಕಾರವನ್ನು ನಿಮ್ಮ ಕೈಗಳಲ್ಲಿನ ಬಲವನ್ನಾಗಿ ಮತ್ತು ನನ್ನ ಅಜ್ಞಾನವನ್ನು ಬೆಳಕನ್ನಾಗಿ ಪರಿವರ್ತಿಸುತ್ತೀರೋ, ನನ್ನ ಸಂಕುಚಿತತೆಯನ್ನು ವಿಶಾಲತೆಯನ್ನಾಗಿ, ನನ್ನ ಸ್ವಾರ್ಥವನ್ನು ಒಂದು ಕೇಂದ್ರದಲ್ಲಿ ಕ್ರೋಢೀಕರಿಸಿದ ಶಕ್ತಿಗಳನ್ನಾಗಿ, ನನ್ನ ದುರಾಶೆಯನ್ನು ಸತ್ಯಾಂಶಗಳ ಸಾಧನೆಗಾಗಿ ದಣಿವಿಲ್ಲದ ನಿಜ ಹುಡುಕಾಟದ ಸಾಮರ್ಥ್ಯವನ್ನಾಗಿ, ನನ್ನ ಅಹಂಕಾರವನ್ನು ನಿಜ ಹಾಗೂ ಪ್ರಜ್ಞಾಪೂರ್ವಕ ಸಾಧನದ ಕೇಂದ್ರವನ್ನಾಗಿ, ನನ್ನ ಮನಸ್ಸನ್ನು ನೀವು ಕೆಳಗಿಳಿಯುವ ಮಾರ್ಗವನ್ನಾಗಿ, ನನ್ನ ಹೃದಯವನ್ನು ನಿಮ್ಮ ಚೈತನ್ಯಯುತ ಹಾಗೂ ಪ್ರಕಾಶಮಾನವಾದ ನಿಮ್ಮ ಹೃದಯವನ್ನಾಗಿ, ನನ್ನ ಜೀವನವನ್ನು ನಿಮ್ಮ ನಿರ್ವಹಣೆಗಾಗಿ ಶುದ್ಧ ಮತ್ತು ಅರೆಪಾರದರ್ಶಕ ವಸ್ತುವನ್ನಾಗಿ, ನನ್ನ ದೇಹವನ್ನು ನನಗಾಗಿ ಬೇಕಾದ ನಿಮ್ಮ ಪ್ರಜ್ಞೆಯ ಪಾತ್ರೆಯನ್ನಾಗಿ ಮಾಡಿ; ಆಗ, ಓ ಪ್ರಭೆಗಳ ಮಾತೆಯವರೆ, ಈಗ ಮತ್ತು ಇನ್ನು ಮುಂದೆ ನನ್ನ ಜೀವನದ ಉದ್ದೇಶವು ಸತ್ಯ ಹಾಗೂ ವಿಶಾಲವಾದ ಪಥದಲ್ಲಿ ನೆರವೇರುವುದು. ಬಯಕೆಗಳು ನನ್ನಲ್ಲಿ ಜಾಗೃತಗೊಳ್ಳುತ್ತವೆ! ನಾನು ಹಾತೊರೆಯುವ ಎಲ್ಲವನ್ನೂ ನನ್ನಲ್ಲಿ ನೆರವೇರಿಸು! ನಾನು ಏನಾದರೊಂದನ್ನು ನಿಮ್ಮಿಂದ ಕೇಳಿದ ತಕ್ಷಣ ವಿಶೇಷ ಜ್ಞಾನವನ್ನಾಗಿ ಪರಿವರ್ತಿಸುವ, ಒಂದು ಸ್ವ–ಪ್ರಕಟಣೆಯಾಗಿಸುವ, ಅಸ್ಮಿತೆಯ ಅಭಿವ್ಯಕ್ತಿಯಾಗಿಸುವ, ಒಳಗಡೆಯ ಮತ್ತು ಹೊರಗಡೆಯ ತಕ್ಷಣದ ಸಂವೇದನೆಗಾಗಿ ಜಾಗೃತಾವಸ್ಥೆಯನ್ನು ನನ್ನಲ್ಲಿ ಸೃಷ್ಟಿಸಿರಿ. ಓ ಮಾತೆಯವರೆ, ನಾನು ಏನಾದರು ನಿಮ್ಮಿಂದ ಸಂಗ್ರಹಿಸಿದವು ಯಾವುದು ಸರ್ವವ್ಯಾಪಿಯಾಗಿದೆಯೋ ಆ ಗಹನ ಆಳದ್ದಾಗಿರಲಿ. ನಿಮಗೆ ಭಕ್ತಿಯನ್ನು ಹರಿಸಲು, ಜೀವನ ಮತ್ತು ಅದರ ಚಲನವಲನಗಳಿಂದ ನಿಮ್ಮಿಂದ ಬೇರೆಯಾದಾಗ್ಯೂ ಒಂದಾಗಿ, ಶಾಖ ಮತ್ತು ಬೆಳಕಿನಂತೆ, ಶಕ್ತಿ ಮತ್ತು ಅದರ ಅಭಿವ್ಯಕ್ತಿಯಂತೆ, ನಿಜ

ಜ್ಞಾನ ಮತ್ತು ಅದರ ಪರಿಣಾಮದ ಶಕ್ತಿಯಂತೆ ಪರಮಾನಂದವನ್ನು ಹೊಂದಲು ನಾನು ಪ್ರತಿ ಪಥದಲ್ಲೂ ನಿಮ್ಮೊಂದಿಗೆ ಒಂದಾಗಬಹುದು. ನೀವು ನನಗೆ ಏನನ್ನು ಕೊಡುತ್ತೀರೋ ಅದು ಸಂಪತ್ತಾಗಿರಬಾರದು ಆದರೆ ನನ್ನನ್ನು ನಾನು ಅನ್ವೇಷಣೆ ಮಾಡಿದಂತೆ ಇರಬೇಕು.

ನನ್ನ ಪ್ರಜ್ಞೆಯಲ್ಲಿನ ವಿಭಜನೆಯನ್ನು ಅಳಿಸಿಹಾಕುವುದರಿಂದ ನಾನು ನಿಮ್ಮಯ ಅಂಗವಾಗಿ ನಿಮ್ಮನ್ನು ನೋಡಬಹುದು ಮತ್ತು ಕೇಳಬಹುದು. ಸ್ವಸ್ವರೂಪದಿಂದ ನೋಟವು ಉದಿತವಾಗಿದ್ದರಿಂದ, ಕೀಳುವಿಕೆ ತನ್ನ ನಿಲುವನ್ನು ಸ್ವಸ್ವರೂಪದಲ್ಲಿ ತೆಗೆದುಕೊಳ್ಳುವುದರಿಂದ ನನ್ನಲ್ಲಿನ ಜೀವ ಚೈತನ್ಯಗಳು ಸ್ವಸ್ವರೂಪದಿಂದ ಬರುವ ಜ್ಞಾನಕ್ಕಾಗಿ ಹಂಬಲಿಸುತ್ತವೆ – ಆ ಸ್ವಸ್ವರೂಪಿ ನೀವೇ ಆಗಿದ್ದೀರಿ.

ನಿಮ್ಮಯ ಮಿತಿಗಳಲ್ಲಿ ಮತ್ತು ಹೊಳೆಯುವ ಗಗನದಲ್ಲಿ ನಿಮ್ಮ ಅಭಿವ್ಯಕ್ತಿಯ ಅಂಶ ನಾನಾಗಬಹುದು.

ನನ್ನ ಸ್ಫೂರ್ತಿಗಳನ್ನು ಮತ್ತು ಬಯಕೆಗಳನ್ನು ಹೆಚ್ಚಿಸಿರಿ, ತಕ್ಷಣಕ್ಕೆ ಹಾಗೂ ಪ್ರತಿಯೊಂದು ರೀತಿಯಲ್ಲಿ ನನ್ನಲ್ಲಿ ಶರಣಾಗತಿಯನ್ನು ಸಾಧ್ಯವಾಗಿಸಿರಿ; ನನ್ನ ಮುಕ್ತತೆಯನ್ನು ಮತ್ತು ಗ್ರಹಿಕೆಯನ್ನು ವಿಸ್ತರಿಸಿರಿ; ಅಂತರಾಳದಲ್ಲಿ ಅಂತರಾತ್ಮನ ಕೆಲಸವು ವಿಳಂಬವಾಗದಂತೆ ತೆರೆಯನ್ನು ತೆಗೆದುಹಾಕಿರಿ; ಓ ಮಾತೆಯವರೆ, ಯಾವುದು ನನ್ನಲ್ಲಿದೆಯೋ ಮತ್ತು ಯಾವುದು ನನ್ನಲ್ಲಿಲ್ಲವೋ ಅದನ್ನು ನನ್ನಿಂದ ತೆಗೆದುಕೊಳ್ಳಿ.

ನನ್ನ ದೇಹದ ಕೋಶಗಳು, ನನ್ನ ನರಗಳ ಹೊದಿಕೆಯ ತಂತುಗಳು, ನನ್ನ ಮನಸ್ಸಿನ ಪಂಚ ತೊರೆಗಳು – ಎಲ್ಲವುಗಳೂ ತಮಗೆ ಬೇಷರತ್ತಾಗಿ ಶರಣಾಗತವಾಗುತ್ತವೆ. ಓ ತೇಜಸ್ಸುಗಳ ಮಾತೆಯವರೆ, ಅಸ್ತಿತ್ವದಲ್ಲಿ ಮಿಥ್ಯೆಯು, ಪ್ರಜ್ಞೆಯಲ್ಲಿ ವಿಭಜನೆ, ದೈವದಲ್ಲಿ ಮರಣ ಹಾಗೂ ನರನರಗಳಲ್ಲಿ ಸಾಮರಸ್ಯ ಮತ್ತು ಬೇಗುದಿಯ ಬೇಡಿಕೆ, ದೇಹದಲ್ಲಿ ಅನಾರೋಗ್ಯ ........... ಇರಲಿಕ್ಕಿಲ್ಲ.

ನಿಮ್ಮ ಧ್ವನಿಯು ನನಗೆ ಉತ್ತರಿಸಿತು:

"ಕೇಂದ್ರೀಯವಾಗಿ, ಐದುಪಟ್ಟು ದೇಹದ ಶರಣಾಗತಿಯ ಶಕ್ತಿಗಳಿಂದ, ನಿನ್ನ ಹಿಂದಿರುವ ಅತೀಂದ್ರಿಯ ಪ್ರಚೋದನೆಯ ತೀವ್ರತೆಯಿಂದ ಅಂತರ್ಗತ ಆನಂದ ಮತ್ತು ನಿನ್ನ ಪ್ರಜ್ಞೆಯ ಗುಪ್ತ ಐಶ್ವರ್ಯಗಳು ಇನ್ನೂ ಹೆಚ್ಚಾಗಲಿ. ಮೊದಲನೆಯದಾಗಿ, ನಾನು ನಿನ್ನಲ್ಲಿ ಏನನ್ನು ಆಶಿಸಿದ್ದೇನೆಯೋ ಅದರ ಬಗ್ಗೆ ಜಾಗೃತನಾಗು; ನಂತರ,

ನೀನು ಯಾವುದರ ಬಗ್ಗೆ ಜಾಗೃತನಾಗಿರುವಿ, ಅದಾಗು. ತಕ್ಷಣಕ್ಕೆ ಮತ್ತು ಎಂದೆಂದಿಗೂ 'ನಿಮ್ಮ ಎಲ್ಲವೂ ನನ್ನೊಳಗಿದೆ ಎಂದು ತಿಳಿ.'"

ಅಡಿಟಿಪ್ಪಣಿ: *'Hymn just before the Mother of Radianees' ಎಂಬುದು 'ಅಮೃತಾ' ಅವರು ಜನೆವರಿ 1927ರಲ್ಲಿ ಬರೆದದ್ದು. ನಂತರ, ಶ್ರೀ ಅರಬಿಂದೋ ಅವರು ಅಮೃತಾ ಅವರ ಕರಡುಗಳನ್ನು ಕ್ರಮಬದ್ಧವಾಗಿ ಮೂರು ಭಾಗಗಳ ಸ್ತುತಿಗೀತೆಗಳನ್ನಾಗಿ ಪರಿಷ್ಕರಿಸಿದರು.*

**ಅಮೃತಾ**



ಯಾವಾಗ ನೀನು ದುರ್ಗೆಯನ್ನು ಪ್ರಾರ್ಥಿಸುವೆಯೋ, ಅವಳ ಮೂಲಕ ನೀನು ನನ್ನನ್ನು ಪ್ರಾರ್ಥಿಸುವಿ, ಯಾವಾಗ ನೀನು ಶಿವನನ್ನು ಪ್ರಾರ್ಥಿಸುವೆಯೋ, ಅವನ ಮೂಲಕ ನೀನು ನನ್ನನ್ನು ಪ್ರಾರ್ಥಿಸುವಿ – ಕೊನೆಯ ವಿಶ್ಲೇಷಣೆಯಲ್ಲಿ ಎಲ್ಲ ಪ್ರಾರ್ಥನೆಗಳೂ ಆ ಮಹಾನ್ ಚೇತನದೆಡೆಗೆ ಹೋಗುವವು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಡಿಸೆಂಬರ 15, 1958**

## ಆತ್ಮಗತ ಪ್ರಾರ್ಥನೆಗಳು

ನನ್ನ ಪ್ರಭುವೆ, ನನ್ನನ್ನು ಸಂಪೂರ್ಣವಾಗಿ ನಿನ್ನನ್ನಾಗಿ ಮಾಡು.

*

ಓ ಪ್ರಭುವೆ, ನಾನು ಸಂಪೂರ್ಣವಾಗಿ ಹಾಗೂ ಪ್ರಾಮಾಣಿಕವಾಗಿ ನಿಮ್ಮವನಾಗಿರಲಿ.

*

ಓ ಪ್ರಭುವೆ, ನನಗೆ ಪರಿಪೂರ್ಣವಾದ ಪ್ರಾಮಾಣಿಕತೆಯನ್ನು ನೀಡು.

ಓ ಪ್ರಭುವೆ, ನಾನು ಎಂದೆಂದಿಗೂ ಪರಿಪೂರ್ಣವಾಗಿ ನಿಮ್ಮವನಾಗಿರಲಿ.

*

ಪರಮಶಕ್ತನಿಗೆ ಹಂಬಲದ ಬಿನ್ನಹಿಕೆ:

ನನ್ನಲ್ಲಿರುವ ಎಲ್ಲವೂ ಸದಾ ನಿಮ್ಮ ಸೇವೆಯಲ್ಲಿರಲಿ.

*

ಓ ಪ್ರಭುವೆ, ನಿಮ್ಮನ್ನು ತಿಳಿದುಕೊಳ್ಳುವ ಉತ್ಸುಕ ಹಂಬಲವನ್ನು ನನ್ನಲ್ಲಿ ಜಾಗೃತಗೊಳಿಸಿರಿ.

ನನ್ನ ಜೀವನವನ್ನು ನಿಮ್ಮ ಸೇವೆಗಾಗಿ ಮುಡಿಪಿಡಲು ನಾನು ಹಂಬಲಿಸುತ್ತೇನೆ.

*

ನಾನು ಯಾವಾಗಲೂ ನಿಮ್ಮ ದೈವಿಕ ಮಾರ್ಗದರ್ಶನವನ್ನು ಅನುಸರಿಸವಂತಿರಲಿ. ನನ್ನ ನೈಜ ನಿಯತಿಯ ಅರಿವು ನನಗಿರಲಿ.

*

ಓ ಪ್ರಭುವೆ, ನಿಮ್ಮ ಮಾಧುರ್ಯ ನನ್ನ ಆತ್ಮವನ್ನು ಪ್ರವೇಶಿಸಿದೆ, ಮತ್ತು ನೀವು ನನ್ನ ಎಲ್ಲ ಇರುವಿಕೆಯನ್ನು ಆನಂದದಿಂದ ತುಂಬಿರುವಿರಿ.

*

ನನ್ನ ಪ್ರಭುವೆ, ದಿನಾಲೂ, ಎಲ್ಲ ಸನ್ನಿವೇಶಗಳಲ್ಲಿ ನನ್ನ ಹೃದಯದ ಪೂರ್ಣ ಪ್ರಾಮಾಣಿಕತೆಯೊಂದಿಗೆ "ನಿಮ್ಮ ಇಷ್ಟವೇ ನೆರವೇರಲಿ ಮತ್ತು ನನ್ನದಲ್ಲ" ಎಂದು ಪುನರುಚ್ಚರಿಸುವಂತಾಗಲಿ.

*

ಪ್ರಭುವೆ, ನಾನು ಏನು ಮಾಡಬೇಕೆಂದು ತಾವು ನಿರ್ದೇಶಿಸಿದ್ದಿರೋ, ನನ್ನ ಪೂರ್ಣ ಚೈತನ್ಯದೊಂದಿಗೆ ಸಾಧಿಸಬೇಕೆಂದುಕೊಂಡಿದ್ದೇನೆ.

*

ನನ್ನ ಪ್ರಭುವೆ, ಎಲ್ಲ ಆಡಂಬರಗಳಿಂದ ನನ್ನನ್ನು ಪಾರುಮಾಡು; ನನ್ನನ್ನು ವಿನಮ್ರನನ್ನಾಗಿ ಮತ್ತು ಪ್ರಾಮಾಣಿಕನನ್ನಾಗಿ ಮಾಡು.

*

ಓ ಪ್ರಭುವೆ, ನನ್ನ ಪ್ರಯತ್ನದ ಉತ್ತುಂಗದಲ್ಲಿರಲೆಂದು ಅತ್ಯಂತ ವಿನಮ್ರನಾಗಿ ನಾನು ಪ್ರಾರ್ಥಿಸುವೆ, ನನ್ನಲ್ಲಿನ ಅರಿವು ಅಥವಾ ಅರಿವಿರದ ಏನೊಂದೂ, ನಿಮ್ಮ ಪವಿತ್ರ ಕಾರ್ಯದ ಸೇವೆಗೆ ಸೋಲಾಗುವಂತೆ ದ್ರೋಹವೆಸಗದಿರಲಿ.

ಶುದ್ಧ ಭಕ್ತಿಯೊಂದಿಗೆ ನಾನು ನಿಮಗೆ ವಂದಿಸುತ್ತೇನೆ.

*

ಪ್ರಭುವೆ, ಸಂಪೂರ್ಣ ಮತ್ತು ಪರಿಪೂರ್ಣ ಪ್ರಾಮಾಣಿಕತೆಯ ಬಲವನ್ನು ನನಗೆ ಕರುಣಿಸಿ, ಅದರಿಂದ ನಿಮ್ಮ ಸಾಕ್ಷಾತ್ಕಾರ ಮಾಡಿಕೊಳ್ಳಲು ನಾನು ಯೋಗ್ಯವಾಗಬಹುದು.

*

ಓ ನನ್ನ ಹೃದಯವೆ, ವಿಜಯಕ್ಕಾಗಿ ಸಾಕಷ್ಟು ವ್ಯಾಪಕವಾಗು.

*

ನನ್ನ ಹೃದಯವು ನಿಮ್ಮ ವಿಜಯಕ್ಕಾಗಿ ವಿಶಾಲವಾಗಬೇಕೆಂದು ಬಯಸುತ್ತದೆ.

*

ಎಲ್ಲ ಅಹಂಕಾರಿಕ ದೌರ್ಬಲ್ಯಗಳಿಂದ ಮತ್ತು ಪ್ರಜ್ಞೆಯಿಲ್ಲದ ಅಪ್ರಾಮಾಣಿಕತೆಯಿಂದ ನನ್ನನ್ನು ವಿಮೋಚನೆಗೊಳಿಸಬೇಕೆಂದು ಬಯಸುತ್ತೇನೆ.

*

ಪ್ರಭುವೆ, ವಿಷಯಗಳ/ವಸ್ತುಗಳ ನನ್ನ ದೃಷ್ಟಿಕೋನ ನೇರವಾಗಿರಲಿ ಮತ್ತು ವಾಸ್ತವವಾಗಿರಲಿ ಹಾಗೂ ನನ್ನ ಕ್ರಿಯೆಗಳು ಅದರಿಂದ ಸಂಪೂರ್ಣವಾಗಿ ಮಾರ್ಪಾಟಾಗಲಿ ಎಂದು ಅನುಗ್ರಹಿಸಿ.

*

ಪ್ರಭುವೆ, ಒಮ್ಮೆ ಎಸಗಿದ, ಮಾನ್ಯಮಾಡಿದ ಮೂರ್ಖತನವನ್ನು ಪುನರಾವರ್ತನೆಯಾಗದಂತೆ ಅನುಗ್ರಹಿಸಿ.

*

ನನ್ನ ಪ್ರಭುವೆ, ಎಲ್ಲ ತೊಂದರೆಗಳನ್ನು ಜಯಿಸುವಂಥ ನಿಮ್ಮಲ್ಲಿಯ ನಿಶ್ಚಿಂತ ಭರವಸೆಯನ್ನು ನನಗೆ ದಯಪಾಲಿಸಿ.

*

ನಿಶ್ಚಿಂತೆಯ ಭರವಸೆ, ನೆಮ್ಮದಿಯ ಸಾಮರ್ಥ್ಯ, ಬಲವಾದ ನಂಬಿಕೆ ಮತ್ತು ನಿಷ್ಠೆಯನ್ನು ಕರುಣಿಸಿ.

*

ಪ್ರಭುವೆ, ನಾನು ಸಂಪೂರ್ಣವಾಗಿ ಹಾಗೂ ಶಾಶ್ವತವಾಗಿ ನಿಮಗೆ ನಿಷ್ಠಾವಂತನಾಗಿರುವಂತೆ ಅನುಗ್ರಹಿಸಿ.

*

ಪ್ರಭುವೆ, ನಾನೆಂದಿಗೂ ನಿಮ್ಮನ್ನು ಮರೆಯದಂತೆ ಈ ಭಗವತ್ ಪ್ರಸಾದವನ್ನು ಅನುಗ್ರಹಿಸಿ.

*

ನನ್ನ ಪ್ರಭುವೆ, ಪ್ರಜ್ಞೆಯನ್ನು ನಿರ್ಮಲ ಮತ್ತು ನಿಖರವಾಗಿ, ಮಾತನ್ನು ಸಂಪೂರ್ಣ ಸತ್ಯವಾಗಿ, ಶರಣಾಗತಿಯನ್ನು ಪೂರ್ಣವಾಗಿ, ನಿಶ್ಶಬ್ದವನ್ನು ನಿಚ್ಚಳವಾಗಿ ಮತ್ತು ಸಮಗ್ರ ಅಸ್ತಿತ್ವವನ್ನು ಬೆಳಕಿನ ಹಾಗೂ ಪ್ರೀತಿಯ ಸಾಗರವನ್ನಾಗಿ ಮಾಡಿರಿ.

*

ನನ್ನ ಪ್ರಜ್ಞೆಯು ನಿಮ್ಮಲ್ಲಿ ಒಂದಾಗುವಂತೆ ನನ್ನನ್ನು ಸಂಪೂರ್ಣವಾಗಿ ಪಾರದರ್ಶಕವನ್ನಾಗಿ ಮಾಡಿರಿ.

ಈ ಜಗತ್ತಿನ ಎಲ್ಲ ಶ್ರೀಮಂತಿಕೆಯನ್ನು ತಮ್ಮ ಪಾದಗಳಲ್ಲಿ ಅರ್ಪಿಸಬೇಕೆಂದು ನಾನು ಬಯಸುತ್ತೇನೆ.

*

ಓ ಪ್ರಭುವೆ, ನನ್ನ ಹೆಜ್ಜೆಗಳನ್ನು ನಿರ್ದೇಶಿಸಿ, ನನ್ನ ಮನಸ್ಸನ್ನು ಬೆಳಗಿಸಿ, ಪ್ರತಿಕ್ಷಣಕ್ಕೆ ಮತ್ತು ಎಲ್ಲ ವಸ್ತುಗಳಲ್ಲಿ ತಾವು ಬಯಸಿದ್ದನ್ನು ನಿಖರವಾಗಿ ನಾನು ಮಾಡುವಂತೆ ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

*

ಪ್ರಭುವೆ, ನನ್ನನ್ನು ನೇರವಾಗಿ ನಿಮ್ಮಲ್ಲಿಗೆ ಕರೆದೊಯ್ಯುವಂಥ ಪರಿಪೂರ್ಣ ಪ್ರಾಮಾಣಿಕತೆಯನ್ನು ಕರುಣಿಸಿ.

*

ಪ್ರಭುವೆ, ನಾನು ಹೆಚ್ಚು ಹೆಚ್ಚು ಪ್ರಾಮಾಣಿಕನಾಗುವಂತೆ ತಮ್ಮ ಆಶೀರ್ವಾದಗಳನ್ನು ನನಗೆ ನೀಡಿ.

*

ಪ್ರಭುವೆ, ನಿಮ್ಮ ಮೇಲೆ ಅವಲಂಬಿಸಿರುವಂಥ ನಿಜ ಆನಂದವನ್ನು ಮಾತ್ರ ನನಗೆ ಕೊಡಿ.

*

ಓ ಪ್ರಭುವೆ, ಏನಾಗಬೇಕೆಂದು ತಾವು ಬಯಸಿರುವಿರೋ, ನಾನು ಅದಾಗಲೂ ಬಿಡಿ.

*

ನಾನು ನಿಮಗೆ ಸೇರಿದವನು. ಮತ್ತು ಏನು ಮಾಡಬೇಕೆಂದು ತಾವು ಬಯಸುವಿರೋ ಅದನ್ನು ಮಾತ್ರ ಮಾಡಬಹುದಾದ ನಾನು ನಿಮ್ಮನ್ನು ಅರಿಯಲಿಕ್ಕೆ ಹಂಬಲಿಸುವೆ.

*

ಕರುಣಾಮಯಿ ಪ್ರಭುವೆ, ನನ್ನನ್ನು ತಮ್ಮ ಅನುಗ್ರಹದ ಯೋಗ್ಯನನ್ನಾಗಿ ಮಾಡಿರಿ.

*

ನನ್ನ ಪ್ರಭುವೆ, ಇವತ್ತು ರಾತ್ರಿ ತಾವು ನನಗೆ ಸರ್ವೋಚ್ಚ ಜ್ಞಾನವನ್ನು ನೀಡಿರುವಿರಿ.
ನಿಮ್ಮ ಇಂತಹ ಸಂಕಲ್ಪ ಇರುವುದರಿಂದ ಮಾತ್ರ ನಾವು ಜೀವಿಸಿದ್ದೇವೆ.
ತಮ್ಮ ಸಂಕಲ್ಪವಿದ್ದ ಪ್ರಕ್ಷದಲ್ಲಿ ಮಾತ್ರ ನಾವು ಮರಣ ಹೊಂದಬಹುದು.

*

ಸ್ಥಿರಶಾಂತಿಯನ್ನು ಅನುಭವಿಸಲು ಇರುವ ಏಕೈಕ ಮಾರ್ಗವೆಂದರೆ, ಯಾವಾಗಲೂ, ಎಲ್ಲ ಸಂದರ್ಭಗಳಲ್ಲೂ ನೀವು ಏನನ್ನು ಬಯಸುತ್ತೀರೋ ಅದನ್ನು ಬಯಸುವುದು.

*

ಪ್ರಭುವೆ, ಕೇವಲ ನಿಮ್ಮ ಮೇಲೆ ಅವಲಂಬಿಸಿರುವಂಥ ನಿಜ ಆನಂದವನ್ನು ನಮಗೆ ನೀಡಿರಿ.

*

ಪ್ರಭುವೆ, ನಿಮ್ಮಲ್ಲಿಯ ಪರಿಪೂರ್ಣ ನಂಬಿಕೆಯಿಂದ ಬರುವಂಥ ಅದಮ್ಯ ಧೈರ್ಯವನ್ನು ನಮಗೆ ನೀಡಿರಿ.

*

ಪ್ರಭುವೆ, ನಾವು ಸಾರುವ ಆದರ್ಶದಂತೆ ಸಮಗ್ರವಾಗಿ ಜೀವಿಸಲಿಕ್ಕೆ ನಮಗೆ ಶಕ್ತಿಯನ್ನು ನೀಡಿರಿ.

*

ಭವ್ಯ ಭವಿಷ್ಯತ್ತಿನಲ್ಲಿ ವಿಶ್ವಾಸವನ್ನು ಮತ್ತು ಅದನ್ನು ಅರಿತುಕೊಳ್ಳಲು ಸಾಮರ್ಥ್ಯವನ್ನು ನಮಗೆ ನೀಡಿರಿ.

*

ಪ್ರಭುವೆ, ತಮ್ಮ ಒಂದು ದೈವೀ ಶಾಸನದ ವಿಶ್ವಸನೀಯ ಮಧ್ಯವರ್ತಿಗಳಾಗಿ ನಾವು ಹೆಚ್ಚು ಹೆಚ್ಚು ಇರುವಂತೆ ನಮ್ಮಲ್ಲಿ ಪ್ರಜ್ಞೆ ಮತ್ತು ಶಾಂತಿ ಹೆಚ್ಚಾಗಲಿ.

*

ಪ್ರಭುವೆ, ನಮ್ಮಲ್ಲಿಯ ಯಾವುದೇ ವಸ್ತು ತಮ್ಮ ಕಾರ್ಯಕ್ಕೆ ಅಡ್ಡಿಯಾಗದಿರಲಿ.

*

ಪ್ರಭುವೆ, ಮಿಥ್ಯೆಯಿಂದ ನಮ್ಮನ್ನು ಪಾರು ಮಾಡಿರಿ, ನಿಮ್ಮ ಸತ್ಯದಲ್ಲಿ ಶುದ್ಧ ಮತ್ತು ಜಯದ ಗೌರವಾರ್ಹವುಳ್ಳವರಾಗಿ ನಾವು ಹೊರಹೊಮ್ಮುವಂತೆ ಮಾಡಿರಿ.

*

ಓ ಅದ್ಭುತವಾದ ಘನತೆಯೇ, ನಮ್ಮ ಅಭೀಪ್ಸೆಯು ಯಾವಾಗಲೂ ಹೆಚ್ಚು ಉತ್ಕಟವಾಗಿರಲಿ, ನಮ್ಮ ನಂಬಿಕೆಯು ಯಾವಾಗಲೂ ಹೆಚ್ಚು ರೋಮಾಂಚನ–ವಾಗಿರಲಿ, ನಮ್ಮ ಭರವಸೆ ಯಾವಾಗಲೂ ಹೆಚ್ಚು ಸಂಪೂರ್ಣವಾಗಿರಲಿ.

*

ತಾವು ಸರ್ವವನ್ನು ಜಯಿಸಿದವರು.

*

ಪರಮಶಕ್ತ ಪ್ರಭುವೆ, ಮೌನದಲ್ಲಿ ನಾವು ನಿಮ್ಮ ಶಕ್ತಿಯನ್ನು ಮತ್ತು ನಿಮ್ಮ ಸಂಕಲ್ಪವನ್ನು ತಿಳಿದುಕೊಳ್ಳಲು ನಮಗೆ ಮೌನವನ್ನು ಬೋಧಿಸಿರಿ.

*

ಸತ್ಯದೆಡೆಗಿನ ನಮ್ಮ ಪ್ರಯತ್ನಗಳಲ್ಲಿ ನಾವು ನಿಜವಾಗಿಯೂ ಪ್ರಾಮಾಣಿಕರಾಗಿರುವಂತೆ ನಮಗೆ ಭೋದಿಸಿರಿ.

*

ಪ್ರಭು, ಪರಮ ಸತ್ಯ,

ನಿಮ್ಮನ್ನು ತಿಳಿಯಲು ಮತ್ತು ನಿಮ್ಮ ಸೇವೆ ಮಾಡಲು ನಾವು ಹಂಬಲಿಸುತ್ತೇವೆ. ನಿಮ್ಮ ಯೋಗ್ಯ ಮಕ್ಕಳಾಗುವಂತೆ ನಮಗೆ ಸಹಾಯ ಮಾಡಿರಿ. ಮತ್ತು ಇದಕ್ಕಾಗಿ, ಕೃತಜ್ಞತೆಯು ನಮ್ಮ ಹೃದಯಗಳನ್ನು ತುಂಬಲು ಮತ್ತು ನಮ್ಮ ಜೀವನವನ್ನು ಆಳಲು ನಮ್ಮ ಅರಿವನ್ನು ತಮ್ಮ ಶಾಶ್ವತ ಕಾಣಿಕೆಯನ್ನಾಗಿ ಮಾಡಿರಿ.

*

ಪ್ರಭು, ನಿಮ್ಮ ಪ್ರೀತಿ ಬಹಳ ಮಹತ್ತರವಾದ್ದು, ಬಹಳ ಉದಾತ್ತ ಮತ್ತು ಬಹಳ ಶುದ್ಧ, ಅದು ನಮ್ಮ ಗ್ರಹಿಕೆಯಾಚೆಗಿನದು. ಅದು ಅಳೆಯಲಾಗದ್ದು ಮತ್ತು ಅನಂತ: ನಾವು ಮಂಡಿಯೂರಿ ಅದನ್ನು ಸ್ವೀಕರಿಸಲೇಬೇಕು, ಆದಾಗ್ಯೂ ಎಷ್ಟು ಸಿಹಿ ಮಾಡಿರುವಿರೆಂದರೆ ನಮ್ಮವರಲ್ಲಿ ಅತ್ಯಂತ ದುರ್ಬಲರು ಮತ್ತು ಮಗು ಸಹ ತಮ್ಮನ್ನು ತಲುಪಬಹುದು.

*

ನಿಶ್ಚಲ ಮತ್ತು ಶುದ್ಧ ಭಕ್ತಿಯೊಂದಿಗೆ ನಾವು ನಿಮಗೆ ನಮಿಸುತ್ತೇವೆ ಮತ್ತು ನಿಮ್ಮನ್ನು ನಮ್ಮ ಇರುವಿಕೆಯ ಏಕೈಕ ಸತ್ಯವೆಂದು ಪರಿಗಣಿಸುತ್ತೇವೆ.

*

ಪ್ರಭು, ಸೌಂದರ್ಯ ಮತ್ತು ಸಾಮರಸ್ಯದ ದೇವತೆಯೆ,

ತಮ್ಮ ಪರಮ ಸೌಂದರ್ಯವನ್ನು ನಾವು ಜಗತ್ತಿನಲ್ಲಿ ವ್ಯಕ್ತ ಮಾಡುವ ಸಾಧನಾಗಳಾಗುವಂತ ಅನುಗ್ರಹಿಸಿ.

ಇದು ನಮ್ಮ ಪ್ರಾರ್ಥನೆ ಮತ್ತು ಬಯಕೆ.

*

ಓ ಪರಮ ಸತ್ಯವೆ, ಈಗ ನಮಗೆ ಕಂಡ ಅದ್ಭುತವಾದ ರಹಸ್ಯವು ನಾವು ಸಮಗ್ರವಾಗಿ ಜೀವಿಸುವಂತೆ ಕರುಣಿಸು.

*

ಕರುಣಾಮಯಿ ಮಾತೆಯವರೆ, ನಾವು ತಮ್ಮ ಚಿಕ್ಕ ಮಕ್ಕಳಾಗಿ, ಇಂದು ಮತ್ತು ಎಂದೆಂದಿಗೂ ತೊಡಕಿಲ್ಲದೆ ಬಾಳುವಂತೆ ಅನುಗ್ರಹಿಸಿರಿ.

*

ಓ ನನ್ನ ಕರುಣಾಮಯಿ ಪ್ರಭುವೆ, ತಾವು ಜಯಿಸುವವರು, ಮತ್ತು ವಶಪಡಿಸಿಕೊಳ್ಳುವವರು; ವಿಜಯಿ ಮತ್ತು ವಿಜಯ.

*

ತಮ್ಮ ಹೃದಯವು ಎಲ್ಲ ಆತಂಕಗಳನ್ನು ಶಮನಗೊಳಿಸುವ ಧಾಮ, ಓಹ್, ಈ ಹೃದಯ ವಿಶಾಲವಾಗಿ ತೆರೆದಿರಲಿ, ಯಾತನೆ ಪಡುವವರೆಲ್ಲರೂ ಅಲ್ಲಿ ಪರಮ ಆಶ್ರಯ ಪಡೆಯಲಿ.

ಎಲ್ಲ ಹಿಂಸೆಯು ಸ್ತಬ್ಧವಾಗಲಿ, ನಿಮ್ಮ ಪ್ರೀತಿ ಆಳ್ವಿಕೆ ಮಾಡಲಿ.

*

ಓ ಪ್ರಭುವೆ, ನಿಮ್ಮ ಇಚ್ಛೆಯೇ ನೆರವೇರಲಿ, ನೀವು ಅತ್ಯುನ್ನತ ಮತ್ತು ಪರಿಪೂರ್ಣ ರಕ್ಷಣೆ.

*

ಓ ನನ್ನ ಪ್ರಭುವೆ, ನಿಮ್ಮ ಸಹಾಯ ಮತ್ತು ಕೃಪಯಿಂದ ಹೆದರುವುದಕ್ಕಲ್ಲೆನಿದೆ!

ಎಲ್ಲ ವೈರಿಗಳನ್ನು ಸೋಲಿಸುವಂಥ ಪರಮ ರಕ್ಷಣೆ ನೀವು.

*

ಓ ನನ್ನ ಪ್ರಭುವೆ, ನಿಮ್ಮ ರಕ್ಷಣೆ ಸರ್ವಶಕ್ತಿಯುತವಾಗಿದೆ. ಅದು ಪ್ರತಿಯೊಂದು ಶತ್ರುವನ್ನು ಸೋಲಿಸುತ್ತದೆ.

*

ಎಲ್ಲ ಸಂದರ್ಭಗಳಲ್ಲಿಯೂ ತಾವು ಜಯಶಾಲಿಯಾಗುವುದನ್ನು ನೋಡುವುದೇ ಖಂಡಿತವಾಗಿ ಒಂದು ಅತ್ಯುತ್ತಮ ಮಾರ್ಗ.

*

(ಪರಮಾತ್ಮನಿಗೆ ಸಂಬೋಧಿಸಿದ್ದು)

ನಿಮ್ಮಿಂದ ಅತಿ ದೂರ ಇರುವುದಕ್ಕಿಂತ ಬೇರೆ ಪಾಪ ಮತ್ತು ಅನೀತಿ ಮತ್ತೊಂದಿಲ್ಲ.

*

ಪ್ರಭುವೆ, ನೀವಿಲ್ಲದೆ ಬದುಕು ಭಯಾನಕವಾಗಿರುತ್ತದೆ. ನಿಮ್ಮ ಬೆಳಕಿಲ್ಲದೆ, ನಿಮ್ಮ ಪ್ರಜ್ಞೆಯಿಲ್ಲದೆ, ನಿಮ್ಮ ಸೌಂದರ್ಯ ಮತ್ತು ನಿಮ್ಮ ಶಕ್ತಿ ಇಲ್ಲದೆ ಎಲ್ಲ ಬದುಕು ಅಶುಭ ಮತ್ತು ಅಸಂಬದ್ಧವಾದ ಒಂದು ಹಾಸ್ಯ.

*

ಓ ಪ್ರಭುವೆ, ಎಲ್ಲ ಗಹನತೆಯಲ್ಲಿ ಇರುವುದೆಲ್ಲವೂ, ಇರಬಹುದಾದದ್ದು, ನಿಮ್ಮ ದೈವಿಕ ಮತ್ತು ಮಾರ್ಪಾಡಾಗದ ಮುಗುಳುನಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/210–19**

ಓ ಪ್ರಭುವೆ, ನಿಮಗೆ ಅವಶ್ಯಕವಾದ ಸಲಕರಣೆಗಾಗಿ, ಪರಿಪೂರ್ಣ ಸೇವಕನ ಸಲುವಾಗಿ ನನ್ನ ಸಂಪೂರ್ಣ ಅಸ್ತಿತ್ವವನ್ನು ಎಚ್ಚರಗೊಳಿಸಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/202**

ಓ ಪ್ರಭುವೆ, ನಿಮ್ಮನ್ನು ತಿಳಿದುಕೊಳ್ಳಲು ನನ್ನಲ್ಲಿ ಪ್ರಖರವಾದ ಬಯಕೆಯನ್ನು ಜಾಗ್ರತಗೊಳಿಸಿರಿ. ನಿಮ್ಮ ಸೇವೆಗಾಗಿ ನನ್ನ ಜೀವನವನ್ನು ಮುಡಿಪಾಗಿಡಲು ಹಂಬಲಿಸುತ್ತೇನೆ.

*

ನನ್ನ ಹೃದಯವು ಶಾಂತತೆಯಿಲ್ಲದೆ, ನನ್ನ ಮನಸ್ಸು ಅಸಹನೆಯಿಂದ ಮುಕ್ತವಾಗಿದೆ, ಮತ್ತು ಎಲ್ಲ ವಿಷಯಗಳಲ್ಲಿ ಒಂದು ಮಗುವಿನ ವಿಶ್ವಾಸದ ನಗೆಯೊಂದಿಗೆ ತಮ್ಮ ಇಚ್ಛೆಯ ಮೇಲೆ ನಾನು ಅವಲಂಬಿಸಿರುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/211**

**ವಿದ್ಯಾರ್ಥಿಗಳ ಪ್ರಾರ್ಥನೆ**

ನಮ್ಮಿಂದ ನಾವು ಬಯಸಿ ಆಗಬೇಕೆಂದಿರುವ ವೀರ ಯೋಧರನ್ನಾಗಿ ಮಾಡಿರಿ. ಜನಿಸಬೇಕಾಗಿರುವ ಭವಿಷ್ಯದ ಮಹಾಯುದ್ಧ, ಸಹನೆಯನ್ನು ಬಯಸುವ ಭೂತಕಾಲದ ವಿರುದ್ಧ ನಾವು ಯಶಸ್ವಿಯಾಗಿ ಹೋರಾಡುವಂತಾಗಲಿ; ಅದರಿಂದ ಹೊಸ ವಸ್ತುಗಳು ಪ್ರಕಟವಾಗಬಹುದು ಮತ್ತು ನಾವು ಅವುಗಳನ್ನು ಪಡೆಯಲು ತಯಾರಾಗಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/112**

ಪ್ರಭುವೆ, ನಿಮ್ಮ ಬಯಕೆಯು ಸಾಮರಸ್ಯದಿಂದ ನೆರವೇರಲು ನಾವು ನಿಮಗೆ ಪ್ರಾರ್ಥಿಸುತ್ತೇವೆ:

ನಾವು ಇಲ್ಲಿ ಯಾಕಿದ್ದೇವೆ ಎಂಬುದನ್ನು ನಾವು ಚೆನ್ನಾಗಿ ತಿಳಿಯುವಂತಾಗಲಿ,
ನಾವು ಇಲ್ಲಿ ಏನು ಮಾಡಬೇಕೋ ಅದನ್ನು ನಾವು ಚೆನ್ನಾಗಿ ಮಾಡಲಿ,
ನಾವು ಇಲ್ಲಿ ಏನು ಆಗಬೇಕೆಂದುಕೊಂಡಿರುವೆಯೋ, ನಾವು ಅದಾಗಲಿ.

*

ಪ್ರೀತಿಯ ಮಾತೆಯವರೆ, ಈಗ ಮತ್ತು ಯಾವಾಗಲೂ ನಿಮ್ಮನ್ನು ಹೆಚ್ಚು, ಇನ್ನೂ ಹೆಚ್ಚು ಪ್ರೀತಿಸುವ ನಿಮ್ಮ ಸರಳ ಮಕ್ಕಳಾಗಿರಲು ಒಪ್ಪಿಗೆ ಕೊಡಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/126 – ಶ್ರೀಮಾತೆ**

ದೇಹ, ಇಂತು ದೇಹವು ಒಂದು ಪ್ರಾರ್ಥನೆಯನ್ನು ಹೊಂದಿದೆ ಮತ್ತು ಅದು ಯಾವಾಗಲೂ ಒಂದೇಯಾಗಿದೆ:

ನಾನು ನಿಮ್ಮನ್ನು ಅರಿತುಕೊಳ್ಳುವ ಯೋಗ್ಯನನ್ನಾಗಿ ಮಾಡಿರಿ,
ನಾನು ನಿಮ್ಮನ್ನು ಸೇವೆ ಮಾಡುವ ಯೋಗ್ಯನನ್ನಾಗಿ ಮಾಡಿರಿ,
ನಾನು ನಿಮ್ಮ ಅಸ್ತಿತ್ವದ ಯೋಗ್ಯನನ್ನಾಗಿ ಮಾಡಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/330 – ಶ್ರೀಮಾತೆ**

**ವಸತಿ ಶಾಲೆಯ ಮಕ್ಕಳಿಗೆ ಹೇಳಿಕೊಟ್ಟ ಪ್ರಾರ್ಥನೆ**

ನಾವೆಲ್ಲರೂ ನಮ್ಮ ದೈವೀ ಮಾತೆಯವರ ಶ್ರದ್ಧಾವಂತ ಮಕ್ಕಳಾಗಿರಬೇಕೆಂದು ಹಂಬಲಿಸುತ್ತೇವೆ. ಅದಕ್ಕಾಗಿ ಪ್ರೀತಿಯ ಮಾತೆಯವರೆ, ತಾಳ್ಮೆ ಮತ್ತು ಧೈರ್ಯ, ವಿಧೇಯತೆ, ಸದ್ಭಾವನೆ, ಉದಾರತೆ ಮತ್ತು ನಿಸ್ವಾರ್ಥತೆ ಮತ್ತು ಎಲ್ಲ ಅವಶ್ಯಕ ಸದ್ಗುಣಗಳನ್ನು ಪ್ರೀತಿಯ ಮಾತೆಯವರೆ ನಮಗೆ ಅನುಗ್ರಹಿಸಿರಿ. ಇದು ನಮ್ಮ ಪ್ರಾರ್ಥನೆ ಮತ್ತು ಹಂಬಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/127**

## ದೇಹದ ಕೋಶಗಳ ಪ್ರಾರ್ಥನೆ

ಅನುಗ್ರಹದ ಪ್ರಭಾವದಿಂದ ನಾವು ನಿಧಾನವಾಗಿ ಅರಿವಿಲ್ಲದ ಸ್ಥಿತಿಯಿಂದ ಹೊರಬಂದು ಮತ್ತು ಅರಿವಿನ ಜೀವನಕ್ಕೆ ಎಚ್ಚರಗೊಳ್ಳುತ್ತಿದ್ದೇವೆ, ಹೆಚ್ಚಿನ ಬೆಳಕಿಗಾಗಿ, ಹೆಚ್ಚಿನ ಪ್ರಜ್ಞೆಗಾಗಿ ನಮ್ಮಲ್ಲಿ ಒಂದು ಪ್ರಖರ ಪ್ರಾರ್ಥನೆ ಉದಯಿಸುತ್ತದೆ.

"ಬ್ರಹ್ಮಾಂಡದ ಪರಮಶಕ್ತ ಪ್ರಭುವೆ, ಈ ಭೂಮಿಯ ಮೇಲೆ ನಿಮ್ಮ ದೈವಿಕ ಸಾಧನಗಳಾಗಲು ಬೇಕಾದ ಶಕ್ತಿ ಮತ್ತು ಸೊಗಸು, ಸಮರಸವಾದ ಪರಿಪೂರ್ಣತೆಯನ್ನು ನಮಗೆ ಅನುಗ್ರಹಿಸಬೇಕೆಂದು ಶ್ರದ್ಧೆಯಿಂದ ಬೇಡುತ್ತೇವೆ".

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/282**

**ಆಹಾರಕ್ಕಾಗಿ ಪ್ರಾರ್ಥನೆ**

ಓ ನನ್ನ ಪ್ರೀತಿಯ ಪ್ರಭುವೆ, ಪರಮ ಸತ್ಯವೆ, ನಾನು ತೆಗೆದುಕೊಳ್ಳುವ ಆಹಾರವು ತಮ್ಮೆಲ್ಲ ಜ್ಞಾನ, ತಮ್ಮೆಲ್ಲ ಶಕ್ತಿ, ತಮ್ಮೆಲ್ಲ ಒಳ್ಳೆಯತನವನ್ನು ನನ್ನ ದೇಹದ ಕೋಶಗಳಲ್ಲಿ ಸೇರಿಸಲಿ ಎಂದು ನಾನು ಹಂಬಲಿಸುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/54 – ಶ್ರೀಮಾತೆ**

## ರಾಧೆಯ ನೃತ್ಯ

ನಾನು ನಿನ್ನೆ ರಾಧೆಯ ನೃತ್ಯದ ಬಗ್ಗೆ ಹೇಳಿದ್ದನ್ನು ಪೂರ್ಣಗೊಳಿಸುವ ಸಲುವಾಗಿ, ಕೊನೆಯಲ್ಲಿ ರಾಧೆಯು ಕೃಷ್ಣನ ಮುಂದೆ ನಿಂತುಕೊಂಡಾಗ ಅವಳಲ್ಲಿ ಇರಲೇಬಹುದಾದ ವಿಚಾರಗಳ ಮತ್ತು ಭಾವನೆಗಳ ಲಕ್ಷಣವೆಂದು ನಾನು ಗುರುತು ಹಾಕಿಕೊಂಡಿರುವೆ.

"ನನ್ನ ಮನಸ್ಸಿನ ಪ್ರತಿಯೊಂದು ವಿಚಾರ, ನನ್ನ ಹೃದಯದ ಪ್ರತಿಯೊಂದು ಭಾವನೆ, ನನ್ನ ಅಸ್ತಿತ್ವದ ಒಂದೊಂದು ಚಲನೆ, ಒಂದೊಂದು ಅನಿಸಿಕೆ ಮತ್ತು ಸಂವೇದನೆ, ನನ್ನ ದೇಹದ ಪ್ರತಿಕೋಶ, ನನ್ನ ರಕ್ತದ ಪ್ರತಿ ತೊಟ್ಟು ಎಲ್ಲವೂ ನಿಮ್ಮದೆ, ನಿಚ್ಚಳವಾಗಿಯೂ ನಿಮ್ಮದೆ, ಸಂಕೋಚವಿಲ್ಲದೆ ನಿಮ್ಮದೆ. ನೀವು ನನ್ನ

ಜೀವನ ಅಥವಾ ನನ್ನ ಮೃತ್ಯುವನ್ನು, ನನ್ನ ಸಂತೋಷ ಅಥವಾ ನನ್ನ ದುಃಖ, ನನ್ನ ನಲಿವು ಅಥವಾ ನನ್ನ ನೋವು ನಿರ್ಧರಿಸಬಹುದು; ನನ್ನ ಜೊತೆ ನೀವು ಏನಾದರೂ ಮಾಡಿ, ತಮ್ಮಿಂದ ನನ್ನೆಡೆಗೆ ಏನಾದರೂ ಬರಲಿ, ಅದು ನನ್ನನ್ನು ದೈವೀ ಮಹದಾನಂದದ ಕಡೆಗೆ ಮುನ್ನಡೆಸುತ್ತದೆ".

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/209**

**ರಾಧೆಯ ಪ್ರಾರ್ಥನೆ**

ಮೊದಲ ನೋಟದಲ್ಲೇ ಕಂಡುಕೊಂಡ ಓ ನನ್ನ ಅಸ್ತಿತ್ವದ ಪ್ರಭುವೆ ಮತ್ತು ನನ್ನ ದೇವರೆ, ನನ್ನ ಅರ್ಪಣೆಗಳನ್ನು ಸ್ವೀಕರಿಸಿರಿ.

ನನ್ನ ರಕ್ತ ಪ್ರತಿ ಕಣ, ನನ್ನ ದೇಹದ ಪ್ರತಿ ಕೋಶ, ನನ್ನೆಲ್ಲ ಭಾವಗಳು, ನನ್ನೆಲ್ಲ ಸಂವೇದನೆಗಳು, ನನ್ನೆಲ್ಲ ವಿಚಾರಗಳು, ನನ್ನ ಹೃದಯದ ಎಲ್ಲ ಭಾವನೆಗಳು, ನನ್ನ ಜೀವನದ ಎಲ್ಲ ಚಲನಗಳು ನಿಮ್ಮದು. ನಾನು ನಿಚ್ಚಳವಾಗಿ ಮತ್ತು ಪೂರ್ಣವಾಗಿ ಸಂಕೋಚವಿಲ್ಲದೆ ನಿಮ್ಮವಳು. ನಾನು ಏನಾಗಬೇಕೆಂದು ತಾವು ಬಯಸುವಿರೋ ನಾನು ಅದಾಗುವೆ. ತಾವು ನನಗಾಗಿ ಜೀವನವನ್ನು ಅಥವಾ ಮೃತ್ಯುವನ್ನು, ಸಂತೋಷವನ್ನು ಅಥವಾ ದುಃಖವನ್ನು, ನಲಿವನ್ನು ಅಥವಾ ನೋವನ್ನು ಆರಿಸುತ್ತೀರೋ, ತಮ್ಮಿಂದ ಬರುವುದೆಲ್ಲವನ್ನು ನಾನು ಸ್ವಾಗತಿಸುತ್ತೇನೆ. ನಿಮ್ಮ ಪ್ರತಿಯೊಂದು ಕಾಣಿಕೆಯು, ಯಾವಾಗಲೂ ದೇವನು ತನ್ನೊಡನೆ ತರುವ ಶ್ರೇಷ್ಠ ಸೌಭಾಗ್ಯ ನನಗೆ ಕಾಣಿಕೆಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/210** **– ಶ್ರೀಮಾತೆ**

# ಪ್ರಾರ್ಥನಾಶೀಲ ಜೀವನ

– ಅನುವಾದ: ಶ್ರೀ ಕೃಷ್ಣ ಭೀಡ

## ಪ್ರತಿದಿನದ ಪ್ರಾರ್ಥನೆ

ಓ ದೇವರೆ, ನಾನು ಭಯ ಹಾಗೂ ಚಿಂತೆಯಿಂದ ಮುಕ್ತನಾಗಿ, ನನ್ನ ಸಾಮರ್ಥ್ಯದಲ್ಲಿ ಯಾವಾಗಲೂ, ನಿನ್ನ ಸೇವೆಯ ಮಾಡಲು ಶಕ್ತಗೊಳಿಸು.

*

## ಮುಂಜಾನೆ ಮತ್ತು ಸಂಜೆಯ ಪ್ರಾರ್ಥನೆ

ದೇವರೇ, ನಾನು ನಿನ್ನವನಾಗಬಯಸುತ್ತೇನೆ, ನಿನಗೆ ಅರ್ಹನಾಗಬಯಸುತ್ತೇನೆ; ನೀನು ನನ್ನನ್ನು ನಿನ್ನ ಆದರ್ಶ (ಚಿಂತನಶೀಲ) ಮಗುವನ್ನಾಗಿ ಮಾಡು.

*

## ಮುಂಜಾನೆ

ಓ, ನನ್ನ ದೇವರೇ, ನನ್ನ ಪೂಜ್ಯ ಮಾತೆಯೇ, ನಾನು ನಿನ್ನವನಾಗಲಿ, ಸಂಪೂರ್ಣವಾಗಿ ನಿನ್ನವನಾಗಲಿ, ಪರಿಪೂರ್ಣವಾಗಿ ನಿನ್ನವನಾಗಲಿ.

ನಿನ್ನ ಶಕ್ತಿ, ನಿನ್ನ ಪ್ರಕಾಶ ಹಾಗೂ ನಿನ್ನ ಅನುರಾಗ ಎಲ್ಲವೂ ನನ್ನನ್ನು ಎಲ್ಲ ಅನಿಷ್ಟಗಳಿಂದಲೂ ರಕ್ಷಿಸುವವು.

*

## ಮಧ್ಯಾಹ್ನ

ಓ ನನ್ನ ದೇವರೇ, ಪೂಜ್ಯ ಮಾತೆಯೇ ನಾನು ನಿನ್ನವನೇ, ಮತ್ತು ಹೆಚ್ಚು ಪರಿಪೂರ್ಣವಾಗಿ ನಿನ್ನವನೇ ಆಗಲಿ ಎಂದು ಪ್ರಾರ್ಥನೆ.

*

## ರಾತ್ರಿ

ಓ ನನ್ನ ದೇವರೇ, ಪೂಜ್ಯ ಮಾತೆಯೇ ನಿನ್ನ ಶಕ್ತಿ ನನ್ನ ಜೊತೆಯಿದೆ. ನೀನು, ನಿನ್ನ ಶಕ್ತಿ ಹಾಗೂ ನಿನ್ನ ಅನುರಾಗಗಳು, ನನ್ನನ್ನು ಎಲ್ಲ ತೊಂದರೆಗಳಿಂದಲೂ ಕಾಪಾಡುತ್ತವೆ.

*

**ಮಳೆಗಾಗಿ ಪ್ರಾರ್ಥನೆ**

ಮಳೆ, ಮಳೆ, ಮಳೆ, ನಮಗೆ ಬೇಕು ಮಳೆ
ಮಳೆ, ಮಳೆ, ಮಳೆ, ನಮ್ಮ ಕೋರಿಕೆ ಮಳೆ
ಮಳೆ, ಮಳೆ, ಮಳೆ, ನಮ್ಮ ಅಗತ್ಯ ಮಳೆ
ಮಳೆ, ಮಳೆ, ಮಳೆ, ಮಳೆಗಾಗಿಯೇ ನಮ್ಮ ಪ್ರಾರ್ಥನೆ.

*

**ಸೂರ್ಯನಿಗೆ ಪ್ರಾರ್ಥನೆ**

ಓ ಸೂರ್ಯನೇ, ನಮ್ಮ ಮಿತ್ರನೇ
ಚದುರಿಸು ಮೋಡಗಳನು, ಹೀರಿಕೋ ಮಳೆಯನ್ನು..
ನಮಗೆ ಬೇಕು, ನಿನ್ನ ಕಿರಣಗಳು, ನಮಗೆ ಬೇಕು ನಿನ್ನ ಪ್ರಕಾಶ
ಓ ಸೂರ್ಯನೇ, ನಮ್ಮ ಮಿತ್ರನೇ...

*

**ಪ್ರತಿಕೂಲ ಪಡೆಗಳನ್ನು ಹೊಡೆದೋಡಿಸಲು ಒಂದು ಪ್ರಾರ್ಥನೆ**

ನಮ್ಮ ಪ್ರಭುವಿನ ಅಭಿದಾನದಲ್ಲಿ;
ನಮ್ಮ ಪ್ರಭುವಿಗಾಗಿ...
ನಮ್ಮ ಪ್ರಭುವಿನ ಸಂಕಲ್ಪದ ಮೇರೆಗೆ
ನಮ್ಮ ಪ್ರಭುವಿನ ಶಕ್ತಿಯಿಂದ...
ಎಲ್ಲ ಪ್ರತಿಕೂಲ ಪಡೆಗಳಿಂದ ನಮ್ಮ ಶೋಷಣೆ ತ್ವರಿತ ನಿಲ್ಲಲಿ...

*

**ಭಕ್ತಿ ಪ್ರಾರ್ಥನೆ**

ನನ್ನ ಪ್ರೀತಿಯ ಪ್ರಭುವೇ, ನನ್ನ ಪ್ರೀತಿಯ ಪುಟ್ಟ ತಾಯಿಯೇ...
ತನ್ನನ್ನೇ ತಾನು ಮರೆಯೂವಂತಹ ನಿಜವಾದ ಪ್ರೇಮವನ್ನು ನನಗೆ ಕೊಡು...

*

ನನ್ನ ಪ್ರಭುವೇ, ನನ್ನ ಮಾತೆಯೇ ....

ನೀವು ಯಾವಾಗಲೂ, ನಿಮ್ಮ ಆರ್ಶೀವಾದ ಹಾಗೂ ನಿಮ್ಮ ಅನುಗ್ರಹಗಳೊಂದಿಗೆ ನಮ್ಮ ಜೊತೆಯಲ್ಲಿದ್ದೀರಿ...

ನಿಮ್ಮ ಸನ್ನಿದಾನವೇ ಪರಮ ರಕ್ಷಣೆ...

*

ನನ್ನ ಹೃದಯದಲಿ ನೆಲೆಸಿದ್ದಾಳೆ,
ನನ್ನ ಪ್ರೀತಿಯ ಪುಟ್ಟಮಾತೆ
ನಮಗೆ ತುಂಬ ಸಂತೋಷ,
ನಾವೆಂದಿಗೂ ಬಿಡುವುದಿಲ್ಲ ಜೊತೆ...

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/212–20**

ನಮ್ಮ ದೈನಂದಿನ ಹಾಗೂ ಎಂದೆಂದಿನ ಪ್ರಯತ್ನಗಳು ನಿನ್ನನ್ನು ನಿತ್ಯನೂತನವಾಗಿ ಅರಿಯಲು ಹಾಗೂ ಉತ್ತಮವಾಗಿ ಸೇವೆ ಮಾಡು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/126**

**ಸಾಧಿಕೆಯೊಬ್ಬಳಿಗೆ ನೀಡಿದ ಪ್ರಾರ್ಥನೆ**

ನನ್ನ ಪ್ರೀತಿಯ ಮಗುವಿಗೆ ಆಕೆಯ ಹುಟ್ಟುಹಬ್ಬದ ಪ್ರೀತ್ಯರ್ಥ ನನ್ನ ಪ್ರೇಮಪೂರ್ವಕ ಆಶೀರ್ವಾದಗಳು. ನಿನ್ನ ಅಂತರಾತ್ಮಿಕ ಸತ್ತೆಯು ಹೆಚ್ಚು ಹೆಚ್ಚಾಗಿ ಮುಂದೆ ಬರಲಿ ಹಾಗೂ ಪರಮಾತ್ಮನ ಜೊತೆ ನಿಜವಾದ ಅನ್ಯೋನ್ಯತೆಯನ್ನು ತಂದುಕೊಡಲಿ.

*

ಹೊಳೆಯುವ ಸೂರ್ಯನಲ್ಲಿ ನೀನು ಉಜ್ವಲತೆಯಾಗಿ ಇರುವಿ, ಸುಳಿಯುವ ತಂಗಾಳಿಯಲ್ಲಿ ನಿನ್ನ ಇರುವಿಕೆಯನ್ನು ನೀನು ಶ್ರುತಪಡಿಸುವಿ, ಸಕಲ ಜೀವರಾಶಿಗಳಲ್ಲಿ ವಾಸಿಸುತ್ತ, ಅವರ ಹೃದಯಗಳಲಿ ನಿನ್ನ ಇರುವಿಕೆಯನ್ನು ಪ್ರಕಟಪಡಿಸುವಿ.

*

ಪರಮ ಪ್ರಭುವೇ, ನಾನು ಸಂಪೂರ್ಣವಾಗಿ ಸದಾ ಕಾಲಕ್ಕೂ ನಿನಗೆ ನಿಷ್ಠಾವಂತಳಾಗಿರುವಂತೆ ಕರುಣಿಸು.

*

ಪರಮ ಪ್ರಭುವೇ, ನಾನು ಅದ್ಭುತ ಸ್ನೇಹಿತನೇ, ಸರ್ವಶಕ್ತನಾದ ಒಡೆಯನೇ, ನಮ್ಮ ಸತ್ತೆಯಲ್ಲಿ ಪ್ರವೇಶಿಸು, ನೀನು ಮಾತ್ರ ನಮ್ಮೊಳಗೆ ನಮ್ಮ ಮೂಲಕ ಇರುವಂತೆ ನಮ್ಮ ಸತ್ತೆಯನ್ನು ಪರಿವರ್ತಿಸು.

**– ಶ್ರೀಮಾತೆ, ಚಂಪಕಲಾಲರ ಸಂಪತ್ತು, ಪು. 46**

ಪರಮಾತ್ಮನೆಡಗೆ ಅನನ್ಯವಾದ ಭಕ್ತಿ, ಅವನ ಕಾರ್ಯದ ಬಗ್ಗೆ ವಿಶ್ವಾಸ, ಮತ್ತು ಅವನ ಸಂಕಲ್ಪಕ್ಕೆ ವಿಧೇಯನಾಗಿರುವುದು – ಇವು ಯೋಗ ಮೊದಲ ಆಧಾರಗಳು ಈಸ್ತಂಭಗಳ ಮೇಲೆ ಉಳಿದೆಲ್ಲವನ್ನು ಕಟ್ಟಬಹುದು.

**– ಶ್ರೀ ಅರವಿಂದರು, ಚಂಪಕಲಾಲರ ಸಂಪತ್ತು, ಪು. 46**

ವಿಶ್ವಾಸ, ಭಕ್ತಿ, ಆತ್ಮ ಸಮರ್ಪಣೆ, ಸಃಸ್ವಾರ್ಥ ಸೇವೆ ಮತ್ತು ಕಾರ್ಯ, ನಿರಂತರ ಅಭೀಪ್ಸೆ ಇವು ಅತ್ಯಂತ ಸರಳವಾದ ಹಾಗೂ ಅತ್ಯಂತ ಪರಿಣಾಮಕಾರಿಯಾದ ಉಪಾಯಗಳು. ಇವುಗಳ ಮೂಲಕ ಆತ್ಮವನ್ನು ಸಿದ್ಧಗೊಳಿಸಬಹುದು ಮತ್ತು ಪರಮಾತ್ಮನ ಶಾಶ್ವತವಾದ ಸಾನ್ನಿಧ್ಯದಲ್ಲಿರುವುದನ್ನು ಮನಗಾಣಬಹುದು.

**– ಶ್ರೀ ಅರವಿಂದರು, ಚಂಪಕಲಾಲರ ಸಂಪತ್ತು, ಪು. 46**

**ಹುಟ್ಟುಹಬ್ಬದ ಪ್ರಾರ್ಥನೆ**

ಪ್ರತ್ಯಕ್ಷ ಆಚರಣೆಯಲ್ಲಿ ಬಂದ ಒಂದು ಕಾಳು ಬೆಟ್ಟದಷ್ಟು ಸಿದ್ಧಾಂತಗಳಿಗಿಂತ ಹೆಚ್ಚಿನದು.

"ಪ್ರಭು, ನನ್ನ ಈ ಹುಟ್ಟುಹಬ್ಬದ ದಿನ, ನನ್ನನ್ನು ಸಂಪೂರ್ಣವಾಗಿ ಪರಿವರ್ತನೆಗೊಳಿಸಲು ಸಾಧ್ಯವಾಗುವಂಥ ಶಕ್ತಿಯನ್ನು ಅರ್ಥೈಸಿಕೊಳ್ಳುವ ಶಕ್ತಿಯನ್ನು ನನಗೆ ನೀಡು".

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/199**

ಶ್ರೀಮಾತೆ ಸದಾ ನಿಮ್ಮ ಜೊತೆ ಇದ್ದಾರೆ ಎಂಬುದನ್ನು ಸದಾ ನೆನಪಿಸಿಕೊಳ್ಳಿ ಆಕೆಯನ್ನು ಹೀಗೆ ಪ್ರಾರ್ಥಿಸಿ, ನಿಮ್ಮ ಎಲ್ಲ ತೊಂದರೆಗಳಿಂದ ಆಕೆ ನಿಮ್ಮನ್ನು ಪಾರು ಮಾಡುತ್ತಾಳೆ.

"ಶ್ರೀಮಾತೆ, ನೀನು ನನ್ನ ಬುದ್ಧಿಶಕ್ತಿಯ ಬೆಳಕು, ನನ್ನ ಆತ್ಮದ ಪಾವಿತ್ರ್ಯ, ನನ್ನ ಪ್ರಾಣಿಕದ ಮೂಕ ಸಾಮರ್ಥ್ಯ, ನನ್ನ ಶರೀರದ ತಾಳ್ಮೆ, ನಾನು ನಿನ್ನನ್ನು ಮಾತ್ರ ನಂಬಿದ್ದೇನೆ ಸಂಪೂರ್ಣವಾಗಿ ಕೇವಲ ನಿನ್ನವನೇ ಆಗಲು ಬಯಸುತ್ತೇನೆ. ಎಲ್ಲ ಅಡೆತಡೆಗಳನ್ನು ನಿವಾರಿಸುವ ಶಕ್ತಿ ನೀಡು."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/215**

**ಶಾಂತವಾಗಿ ಮಲಗಬೇಕು**

ನೀವು ಶಾಂತವಾಗಿ ಮಲಗಬೇಕು, ನಿಮ್ಮ ಮನಸ್ಸನ್ನು ಸಂಪೂರ್ಣವಾಗಿ ಖಾಲಿಮಾಡಲು ಪ್ರಯತ್ನಿಸಬೇಕು. ನಿಮಗೆ ದಣಿವು ಎನಿಸಿದಾಗ, ಅರ್ಧತಾಸು ಸುಮ್ಮನೇ ಕುಳಿತುಬಿಡಿ, ಏನೂ ವಿಚಾರ ಕೂಡ ಮಾಡಬೇಡಿ, ಪ್ರಭುವನ್ನು ಪ್ರಾರ್ಥಿಸಿರಿ, ಕರೆಯಿರಿ, ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳಿ – ವಿಶ್ರಾಂತಿಯಲ್ಲಿ ಹಾಗೂ ಶಾಂತಿಯಲ್ಲಿ ಮಾತ್ರ ನೀವು ಚೆನ್ನಾಗಿ ಕೆಲಸ ಮಾಡಲು ಸಾಧ್ಯ. ನೀವು ವಿಶ್ರಾಂತಿಯಿಲ್ಲದೇ ಪ್ರಕ್ಷುಬ್ಧರಾಗಿರುವಾಗ, ಅಂತರ್ಬೋಧೆಯು ನಿಮ್ಮ ಪ್ರಜ್ಞೆಯಲ್ಲಿ ಪ್ರವೇಶಿಸುವ ಮೊದಲೇ ಸಹಜವಾಗಿ ಮಾಯವಾಗಿ ಬಿಡುತ್ತದೆ. ಆದ್ದರಿಂದ, ನೀವು ಏನೇ ಮಾಡಲಿ, ವಿಶ್ರಾಂತಿಯಲ್ಲಿ ಮಾಡಿ, ಶಾಂತಿಯಲ್ಲಿ ಮಾಡಿ ನಿಧಾನವಾಗಿ ನೀವು ದಣಿವು ಇಲ್ಲದವರಾಗುವಿರಿ.

ದಣಿದಾಗ ಬಹಳ ಒತ್ತಡ ಹಾಕಿಕೊಳ್ಳಬೇಡಿ, ಆರಾಮ ಖುರ್ಚಿಯ ಮೇಲೆ ಕುಳಿತು ವಿಶ್ರಾಂತಿ ಪಡೆಯಿರಿ. ಪರಮಾತ್ಮನನ್ನು ಪ್ರಾರ್ಥಿಸಿರಿ "ಪ್ರಭುವೇ, ನನ್ನ ಮಿದುಳನ್ನು ಶಾಂತಗೊಳಿಸು, ನನ್ನ ಹೃದಯವನ್ನು ಶಾಂತಗೊಳಿಸು, ನನ್ನ ಇಡೀ ಶರೀರವನ್ನು ಶಾಂತಗೊಳಿಸು".

ಆಗ ನಿಮಗೆ ಕೇವಲ ಶಾಂತಿ ಮಾತ್ರ ಅಲ್ಲ, ನೀವು ಸರ್ವಥಾ ಸ್ವಸ್ಥರಾಗಿಬಿಡುವಿರಿ.

**– ಶ್ರೀಮಾತೆ ನೀವು ಹೇಳಿದ್ದು ಹೀಗೆ: 10.03.1966**

## ತೊಂದರೆಗಳನ್ನು ನಿವೇದಿಸಿಕೊಳ್ಳಲು ಪ್ರಾರ್ಥನೆ

ಯಾವಾಗಲೂ ಮೌನವಾಗಿರಿ, ಶಾಂತವಾಗಿರಿ, ಎಲ್ಲವನ್ನು ಭಗವಂತನಿಗೆ ಅರ್ಪಿಸಿಬಿಡಿ, ಏಕೆಂದರೆ ಏನು ಮಾಡಬೇಕೆಂಬುದನ್ನು ನಮ್ಮೆಲ್ಲರಿಗಿಂತ ಅವನು ಚೆನ್ನಾಗಿ ಬಲ್ಲ. ಅವನು ಮಾನವ ಜೀವಿಗಳಿಗೆಲ್ಲ ಸದಾ ಒಳ್ಳೆಯದನ್ನೇ ಮಾಡುತ್ತಾರೆ. ಹೇಗೆ ಮಾಡಬೇಕೆಂಬುದು ಅವನಿಗೆ ಚೆನ್ನಾಗಿ ಗೊತ್ತು. ಅವನು ತನ್ನ ಸಂಕಲ್ಪದಂತೆ ಮಾಡಲು ನಾವು ಬಿಡಬೇಕಷ್ಟೇ. ನಾವು ಸರಳವಾಗಿ ಪ್ರಾರ್ಥಿಸಿದರೆ ಸಾಕು "ಪ್ರಭು, ನಿನ್ನ ಸಂಕಲ್ಪದಂತೆ ಮಾಡು, ಅದನ್ನೇ ಮಾಡು, ಅದರಂತೆಯೇ ಮಾಡು.."

ನೀವು ಅದನ್ನು ಮಾಡಲು ಪ್ರಯತ್ನಿಸಿದರೆ, ಸಾಧ್ಯವಾಗದು . ಭಗವಂತನು ತನ್ನ ರೀತಿಯಲ್ಲಿ ತನಗೆ ಬೇಕಾದಂತೆ ಮಾಡಲು ನಾವು ಬಿಟ್ಟುಬಿಡಬೇಕು ಅಷ್ಟೇ. ಭಗವಂತನಿಗೆ ಪವಾಡಗಳಲ್ಲಿ ವಿಶ್ವಾಸವಿಲ್ಲ, ಅವನು ಅವುಗಳನ್ನು ಸೇರುವುದಿಲ್ಲ. ಏಕೆಂದರೆ ಪವಾಡಗಳು ಕ್ಷಣಿಕ, ಭಗವಂತನ ಕಾರ್ಯ ಶಾಶ್ವತ, ನಿಜ, ಅದೇನೋ ತುಸು ಸಮಯ ತೆಗೆದುಕೊಳ್ಳುವುದು. ನಾವು ತಾಳ್ಮೆ ವಹಿಸಬೇಕಷ್ಟೇ, ಶಾಂತವಾಗಿರಬೇಕು, ಸಹನೆಯಿಂದಿರಬೇಕು, ಈ ಜಗತ್ತು ಬದಲಾಗಬೇಕಿದೆ.

**ಶ್ರೀಮಾತೆ ನೀವು ಹೇಳಿದ್ದು ಹೀಗೆ: 21.05.1964**

ಮಾನವನ ಜೀವನ ತುಂಬ ಸಂಕೀರ್ಣವಾದುದು, ಜೀವನವು/ಜೀವಾತ್ಮವು ಪರಿಶುದ್ಧವಾಗಲೆಂದೇ ಈ ಭೂಮಿಯ ಮೇಲೆ ಜನ್ಮ ತಾಳುವುದು. ಅದರ ಸುತ್ತ ಅನೇಕ ವಸ್ತುಗಳಿವೆ, ಅಭ್ಯಾಸಗಳಿವೆ, ಸ್ವಭಾವ ಇದೆ. ಹೀಗೆ ಅನೇಕ ಸಂಗತಿಗಳಿವೆ. ಇಡೀ ಸತ್ತೆಯೇ ದೋಷಪೂರ್ಣವಾಗಿದೆ, ಅಲ್ಲಲ್ಲಿ ಚದುರಿಹೋಗಿದೆ.

ಒಳ್ಳೆಯ ಹಾಗೂ ಕೆಟ್ಟ ಸಂಗತಿಗಳು ತಂದೆತಾಯಿಯರಿಂದಲೂ ಬರುವುದು ನಿಜ. ಆದರೆ ಜನರು ತಮ್ಮ ದೋಷಗಳನ್ನು ಹಿಂದಕ್ಕೆ ಮರೆಮಾಚಲು ಯತ್ನಿಸುತ್ತಾರೆ, ಅದು ಸಲ್ಲದು. ಈ ಎಲ್ಲ ಅಭ್ಯಾಸಗಳು, ದೋಷಗಳು ಅವು ಯಾವಾಗ ಜಾಗೃತವಾದರೂ ಜನರು ಅವು ಎಲ್ಲಿಂದ ಹುಟ್ಟುತ್ತವೆ ಎಂಬುದನ್ನು, ಎಲ್ಲಿಂದ ಬರುತ್ತವೆ ಎಂಬುದನ್ನು ತಕ್ಷಣ ಕಂಡುಹಿಡಿಯಬೇಕು. ಎಲ್ಲವನ್ನು ಪರಮಾತ್ಮನಿಗೆ

ಅರ್ಪಿಸಿ ಪ್ರಾರ್ಥಿಸಬೇಕು “ಪರಮ ಪ್ರಭು, ನನ್ನೆಲ್ಲ ದೋಷಗಳನ್ನು ದೂರಮಾಡು, ನಮಗೆ ಅವು ಬೇಕಿಲ್ಲ, ಎಲ್ಲವೂ ಸರ್ವಸ್ವವೂ – ನೀನೇ ನೋಡಿಕೋ”.

**– ಶ್ರೀಮಾತೆ ನೀವು ಹೇಳಿದ್ದು ಹೀಗೆ: 09.07.1964**

ನಿಷ್ಠೆಯಿಂದ ತುಂಬಿದ ನಿಜವಾದ ಪ್ರಾರ್ಥನೆ
ಸದಾ ಫಲ ನೀಡುತ್ತದೆ.

**– ಶ್ರೀಮಾತೆ ನೀವು ಹೇಳಿದ್ದು ಹೀಗೆ: 21.03.1969**

**ಸಹಾಯಕ್ಕಾಗಿ ಮತ್ತು ಕೃತಜ್ಞತೆಗಾಗಿ ಪ್ರಾರ್ಥನೆ**

*ಶ್ರೀಮಾತೆಯವರೆ, ನಾನು ಸದಾ ವಿಚಾರ ಮಾಡುತ್ತಲೇ ಇರುತ್ತೇನೆ, ಅದಾವ ರೀತಿಯಲ್ಲಿ ನನ್ನ ಕೃತಜ್ಞತೆಯನ್ನು, ಉಪಕೃತಿಯನ್ನು ನಿನಗೆ ಸಲ್ಲಿಸಲಿ?*

ನನಗೆ!.. ಆಹ್! ನನಗದನ್ನು ಸ್ವೀಕರಿಸುವ ಹಕ್ಕಿಲ್ಲ. ಏಕೆಂದರೆ ಯಾರೂ ಕಷ್ಟಪಡುತ್ತಿಲ್ಲ. ಏನಾದರೂ ತೊಂದರೆ ಬಂದರೆ, ಏನಾದರೂ ಅಡಚಣೆ ಉಂಟಾದರೆ, ಏನಾದರೂ ಅಕಸ್ಮಾತ್ತಾಗಿ ಆಗಿಬಿಟ್ಟರೆ, ಎಲ್ಲರೂ ನನಗೆ ಪ್ರಾರ್ಥನೆ ಸಲ್ಲಿಸಿಬಿಡುತ್ತಾರೆ. ಸಹಾಯಕ್ಕಾಗಿ ಕೋರುತ್ತಾರೆ. “ದಯವಿಟ್ಟು ನನ್ನನ್ನು ಕಾಪಾಡು, ನನ್ನನ್ನು ರಕ್ಷಿಸಿ ಅಥವಾ ತೊಂದರೆಗಳಿಂದ ಪಾರಾಗಲು ಮಾತ್ರ ನಮ್ಮ ಸಹಾಯಕ್ಕೆ ಬಾ, ನಮ್ಮನ್ನು ರಕ್ಷಿಸಲು ನಿನ್ನ ಕೈಗಳನ್ನು ಮುಂದೆ ಚಾಚು. ನಿನ್ನ ಕರುಣೆ ಇರಲಿ. ನಮ್ಮ ಮೇಲೆ ದಯೆ ತೋರು” ಎಂದು ಮೊರೆಯಿಡುತ್ತಾರೆ. ಮತ್ತೆ ಪರಮ ಕೃಪೆಯು ಪರಿಣಾಮ ಬೀರಿ ಕೆಲಸ ಸಾಧಿಸಿದಾಗ, ಅದು ತುಂಬ ದಯಾರ್ದವಾದ ಶಕ್ತಿಗಾಗಿ. ನಾನು ಅವರಿಗಾಗಿ ಮಾಡುವ ಸಾವಿರಾರು ಕೆಲಸಗಳಿಗಾಗಿ, ಒಂದೇ ಒಂದು ಕೃತಜ್ಞತೆಯ ಶಬ್ದವನ್ನು ಯಾರು ಹೇಳುವುದಿಲ್ಲ. ನಾನು ತೊಂದರೆ ನಿವಾರಿಸಿಯಾದ ಮೇಲೆ, ತೊಂದರೆಗಳನ್ನು ದೂರ ಮಾಡಿದ ಮೇಲೆ, ಅದಾದ ನಂತರ ಒಂದೇ ಒಂದು ಶಬ್ದ ಕೂಡ ಇಲ್ಲ. ಪರಮ ಕೃಪೆಯು ಅವರಿಗಾಗಿ ಎಲ್ಲವನ್ನೂ ಮಾಡಿದ ಮೇಲೆ, – ಅವರನ್ನು ಕಾಪಾಡಿದ ಮೇಲೆ, ರಕ್ಷಿಸಿದ ಮೇಲೆ, ಎಲ್ಲ ತೊಂದರೆಗಳಿಂದಲೂ ಪಾರಾದ ಮೇಲೆ – ಕೆಳಗಿನಿಂದ ಒಂದು ಶಬ್ದ ಕೂಡ ಮೇಲೆ ಬರುವುದಿಲ್ಲ. ತಕ್ಷಣ ಮರೆತುಬಿಡುತ್ತಾರೆ. ಒಂದು ಭಯಾನಕವಾದ ಶಕ್ತಿ ತಮ್ಮನ್ನು ಅಪಾಯದಿಂದ ರಕ್ಷಿಸಿ ಹೊರತಂದಿದೆ, ಅದಿಲ್ಲದೇ ಹೋಗಿದ್ದರೆ ಅವರು

ಉಳಿಯುತ್ತಲೇ ಇರಲಿಲ್ಲ. ಸುರಕ್ಷಿತವಾಗಿ, ಭದ್ರವಾಗಿ ಉಳಿಯಲು ಸಾಧ್ಯವೇ ಇರಲಿಲ್ಲ, ಆದರೆ ಅದರ ನಂತರ ಅವರಿಗೆ ಏನೂ ಅನ್ನಿಸುವುದೇ ಇಲ್ಲ, ಏನೂ ವಿಶೇಷವೆಂದು ತೋರುವುದೇ ಇಲ್ಲ. ಉಫ್! ಮರೆತುಹೋಗಿ ಬಿಡುತ್ತದೆ, ಜನರ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ತಮ್ಮನ್ನು ಉಳಿಸಿದ, ಕಾಪಾಡಿದ ಅದ್ಭುತವಾದ ಘಟನೆಯನ್ನು ಸಂಗತಿಯನ್ನು ಮರೆತುಬಿಡುತ್ತಾರೆ. ಅವರಿಗೆ ನೆನಪಾಗುವುದೇ ಇಲ್ಲ. ಕೃತಜ್ಞತೆಯ ಭಾವನೆ ಇಲ್ಲವೇ ಇಲ್ಲ, ಅಂತಹ ವರ್ತನೆಯನ್ನು ಸಹಿತ ನಿಜವಾಗಿ ತಳ್ಳಿಹಾಕಲಾಗಿದೆ. ಈಗ ಈ ಜಗತ್ತಿನಲ್ಲೇ ಅಂಥ ಕಾರ್ಯ ಈಗ ಇಲ್ಲ. ಅಥವಾ, ಅದು ತುಂಬ ಕಡಿಮೆಯಾಗಿದೆ ಎಂದು ಹೇಳಬಹುದು.. ಹ್ಞಂ. ಕೃತಜ್ಞರಾಗಿರುವುದು! ಅಲ್ಲೇ.

**– ಸರ್ವೋಚ್ಚ, ಪು. 59–60**

ಪ್ರಾರ್ಥನೆ ಮತ್ತು ಅಭೀಪ್ಸೆಗಾಗಿ ಅತ್ಯಂತ ಸರಿಯಾದ ಅಥವಾ ವಿಶೇಷವಾದ ಪ್ರಕ್ರಿಯೆ ಇಲ್ಲ, ಬಾಹ್ಯ ಜ್ಞಾನದ ಯಾವ ಕ್ರಿಯೆಯೂ ಇಲ್ಲ. ಅದು ಅಂತರಂಗದಿಂದ ನೇರವಾಗಿ ಬರುತ್ತದೆ, ಬಾಹ್ಯ ಸತ್ತೆಯನ್ನು ಆವರಿಸಿಕೊಂಡು ಬಿಡುತ್ತೇನೆ. ಆಗ ಎಲ್ಲವೂ ತಾನಾಗಿ ಸಹಜವಾಗಿ ಸರಳವಾಗಿ ಬಿಡುತ್ತದೆ ಹಾಗೂ ಅದ್ಭುತವಾಗಿ ಬಿಡುತ್ತದೆ.

**– ಶ್ರೀಮಾತೆ ನೀವು ಹೇಳಿದ್ದು ಹೀಗೆ: 05.07.1957**

**ಪರಮಾತ್ಮನ ನಾಮ ಸ್ಮರಣೆ ಮತ್ತು ಜಪ**

ಎಲ್ಲ ವಿರೋಧಿ ಶಕ್ತಿಗಳಿಂದ ಪಾರಾಗಲು, ಅವುಗಳ ಪ್ರಭಾವದಿಂದ – ಹಿಡಿತದಿಂದ ಪಾರಾಗಲು ಇರುವ ಅತ್ಯಂತ ಸುಲಭವಾದ ದಾರಿಯೆಂದರೆ ಪರಮಾತ್ಮನ ನಾಮಸ್ಮರಣೆಯನ್ನು ಸದಾ ಮಾಡುತ್ತಿರಬೇಕು, ಉಣ್ಣುವಾಗ ತಿನ್ನುವಾಗ ಮಲಗುವಾಗ, ನೀವು ಏನೇ ಮಾಡುತ್ತಿರಲಿ "ನನಗೆ ಪರಮಾತ್ಮ ಮಾತ್ರ ಬೇಕು, ಬೇರೇನೂ ಬೇಡ" ಎಂದು ಜಪಿಸುತ್ತಿರಬೇಕು – ನೀವು ಅಸ್ವಸ್ಥರಾಗುವಿರಿ, ನಿಮಗೆ ಏನೋ ತೊಂದರೆಯಾಗುತ್ತದೆ, ಆಗ ನಿಮ್ಮನ್ನು ಗುರಿ ತಲಪುವಂತೆ, ತಡೆಯೊಡ್ಡುವ ಎಲ್ಲ ಅಡ್ಡಿ ಆತಂಕಗಳನ್ನು ನಿವಾರಿಸುವಂತೆ, ಪರಮಾತ್ಮನಿಗೆ ಪ್ರಾರ್ಥನೆ ಸಲ್ಲಿಸಬೇಕು. ನಿಮ್ಮ ಕರೆಯು ನಿಷ್ಠೆಯಿಂದ ಕೂಡಿದ್ದರೆ ಎಲ್ಲ ಅಡಚಣೆಗಳು ತಕ್ಷಣ ದೂರಾಗುವುವು.

ನಾವು ಸದಾ ಪ್ರಾರ್ಥನೆ ಮಾಡುವ ಅಭ್ಯಾಸವನ್ನು ಬೆಳೆಸಬೇಕೆಂದರೆ ನಿಮ್ಮ ಪ್ರಾರ್ಥನೆ ಶ್ರದ್ಧಾಪೂರ್ಣವಾಗುವುದು. ಏಕೆಂದರೆ ಪರಮಾತ್ಮನು ಎಲ್ಲರ ಹೃದಯಾಂತರಂಗಗಳಲ್ಲಿ ಇದ್ದಾನೆ. ಅವನು ಎಲ್ಲ ನಿಷ್ಠೆಯಿಂದ ಕೂಡಿದ ಎಲ್ಲ ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಎಲ್ಲವನ್ನು ನೋಡುತ್ತಾನೆ. ಆದರೆ ನಾವು ಆತುರದಲ್ಲಿ ಪಕ್ಕಕ್ಕೆ ಸರಿದುಹೋದರೆ, ಆಗ ಪರಮಾತ್ಮನು ಏನೂ ಮಾಡುವುದಿಲ್ಲ. ಅಲ್ಲದೇ ಅವನು ಎಲ್ಲವನ್ನೂ ನಿಲ್ಲಿಸುತ್ತಾನೆ. ಪ್ರತಿಕ್ಷಣ ಗಮನಿಸುತ್ತಾನೆ. ಆದ್ದರಿಂದ ನೀವು ಎಂದಿಗೂ ಆತುರ ಪಕ್ಷದೆಡೆಗೆ ಹೋಗಬಾರದು. ಬದಲಾಗಿ ನಿರಂತರ ಪ್ರಾರ್ಥನೆ, ಪರಮಾತ್ಮನ ನಾಮಸ್ಮರಣೆ ಇವು ಅಪೇಕ್ಷಣೀಯವಾಗಿವೆ.

ಇಡೀ ಸತ್ತೆಯ ಪರಮಾತ್ಮನ ದಿವ್ಯ ಬೆಳವಣಿಗೆಯೆಡೆಗೆ ತಿರುಗಿದಾಗ, ಎಲ್ಲರೂ ಅವನ ಪ್ರಭಾವಕ್ಕೆ ಒಳಗಾಗಿರುತ್ತಾರೆ, ಎಲ್ಲವನ್ನೂ ಪರಮಾತ್ಮನ ಮೇಲೆ ಭಾರಹಾಕಿ ಇನ್ನಿಲ್ಲದಂತೆ ಒಪ್ಪಿಸಿ ಬಿಡುತ್ತಾರೆ, ಆಗ 'ನಿಜವಾದ ಶರಣಾಗತಿ ಅಥವಾ ಸಮರ್ಪಣೆ' ಆಗುವುದು.

ನೀವು ಪರಮಾತ್ಮನಿಗೆ ತೀವ್ರ ಅಭೀಪ್ಸೆಯಿಂದ ಪ್ರಾರ್ಥಿಸಬೇಕು, "ಓ ಪರಮ ಪ್ರಭುವೇ, ನನ್ನ ಕಾಲುಗಳಲ್ಲಿ,ನನ್ನ ಕೈಗಳಲ್ಲಿ, ನನ್ನ ಇಡೀ ಪ್ರಜ್ಞೆಯಲ್ಲಿ ದಯವಿಟ್ಟು ಕೆಲಸ ಮಾಡು; ಚೈತನ್ಯದಲ್ಲಿ ನಾನು ನಡೆದರೆ ನನ್ನನ್ನು ನಡೆಸು, ನಾನು ಉಂಡರೆ ನನ್ನೊಳಗೇ ನೀನಿದ್ದು ಅದನ್ನು  ಉಣ್ಣು, ನಾನು ಏನೇ ಮಾಡಲಿ, ಸದಾ ನನ್ನ ಜೊತೆಗೆ ಇರು..." ಈ ರೀತಿ ನೀವು ಸದಾ ಆ ಪರಮಾತ್ಮನ ಕೃಪೆಯಿಂದ ರಕ್ಷಿತರಾಗುವಿರಿ.

ಹೃದಯವು ಏಕಾಗ್ರತೆಗಾಗಿ ಅತಿಯೋಗ್ಯವಾದ ಸ್ಥಾನವಾಗಿದೆ, ನಿಮ್ಮ ಹೃದಯದಲ್ಲಿ ಆಳಕ್ಕೆ ಹೋಗಿರಿ, ಪರಮಾತ್ಮನ ವಿಷಯದಲ್ಲಿ ಏಕಾಗ್ರತೆ ಸಾಧಿಸುತ್ತಿರುವಾಗ 'ಪರಮಾತ್ಮನು ಇಡೀ ಜಗತ್ತನ್ನು ನಿಯಮಗೊಳಿಸುತ್ತಿದ್ದಾನೆ. ಅವನು ಸರ್ವಶಕ್ತನು. ಸರ್ವಾಂತರ್ಯಾಮಿ. ಸರ್ವಶಕ್ತ, ಅವನಿಗೆ ನನ್ನೀ ಭಕ್ತಿ, ಆರಾಧನೆ ಸಲ್ಲಲಿ'.. ಎಂದು ಚಿಂತನೆ ಮಾಡುತ್ತಿರಬೇಕು.

**– ಶ್ರೀಮಾತೆ ನೀವು ಹೇಳಿದ್ದು ಹೀಗೆ: 02.03.1956**



**ಪ್ರೇಮವೊಂದೇ ಕಾಪಾಡಬಲ್ಲದು**

ಬಾಹ್ಯದ ಕಡೆಗೆ ನೋಡಬೇಡಿ, ನಿಮ್ಮಂತರಂಗದೊಳಗೆ ನೋಡಿಕೊಳ್ಳಿ, ಅಲ್ಲಿ ನೀವು ಪ್ರೇಮ, ಶಾಂತಿ, ಪ್ರಕಾಶ ಮತ್ತು ಶಕ್ತಿಯನ್ನು ಕಾಣಬಲ್ಲಿರಿ.

ದೈವೀ ಸತ್ಯವಾದರೂ ಸಹ ದಿವ್ಯ ಪ್ರೇಮವಿಲ್ಲದೇ ಪ್ರಕಟವಾಗಲಾರದು. ಪ್ರೇಮದ ಮೂಲಕ ಮಾತ್ರ ಪರಮ ಸತ್ಯ ಪ್ರಕಟವಾಗಬಲ್ಲದು. ಪ್ರೇಮವೆಂಬುದೊಂದು ಅಗ್ನಿ, ಅದು ಹೃದಯಾಂತರಾಳದಲ್ಲಿ ಪ್ರಜ್ವಲಿತವಾಗಿರುತ್ತದೆ. ಪ್ರೇಮವೊಂದೇ ನಿಮ್ಮನ್ನು ಕಾಪಾಡಬಲ್ಲದು. ಅಲ್ಲದೇ ಇಡೀ ಜಗತ್ತು ಪ್ರೇಮಕ್ಕೆ ಮಾತ್ರ ತೆರೆದುಕೊಳ್ಳುತ್ತದೆ.

ನಾನು ಪರಮಾತ್ಮನನ್ನು ಸದಾ ಹೀಗೆ ಪ್ರಾರ್ಥಿಸುತ್ತೇನೆ. "ಪರಮ ಪ್ರಭು, ನಿನ್ನ ದಿವ್ಯ ಪ್ರೇಮವನ್ನು ಪ್ರಕಟಿಸು".

ಕೃಪೆ ಯಾವಾಗಲೂ ಇದ್ದೇ ಇರುತ್ತದೆ. ಅಂತರಂಗದಲ್ಲಿಳಿದು ಹೋಗಿ, ಅಲ್ಲಿ ಇರುವ ಪ್ರೇಮವನ್ನು ನೀವು ಗುರುತಿಸದರೆ, ಆಗ "ನಾನು" ಎಂಬ ಭಾವ ಇರುವುದಿಲ್ಲ, "ನೀನು" ಎಂಬುದೂ ಇರದು, "ಪ್ರಭು" ಕೂಡ ಇರಲು ಸಾಧ್ಯವಿಲ್ಲ, ಅಲ್ಲಿ 'ಯಾರು' ಇರಲಾರರು. ಅಲ್ಲಿರುವುದು ಕೇವಲ ಪ್ರೇಮ. ಆ ಪ್ರೇಮವೇ ನಿಮ್ಮಲ್ಲಿ ಶಾಂತಿಯನ್ನು, ತಾಳ್ಮೆಯನ್ನು ತುಂಬುತ್ತದೆ.

ಪ್ರೇಮ ಶಾಶ್ವತ, ಅದು ನಿಮ್ಮನ್ನೆಂದಿಗೂ ಕೈಬಿಡದು. ಬಾಹ್ಯ ಜಗತ್ತು ಕೇವಲ ಗೊಂದಲಗಳಿಂದ ತುಂಬಿದೆ, ಅಂತರಂಗದಲ್ಲಿ ಪ್ರೇಮವಿದೆ, ಅಲ್ಲಿ ಜೀವಿಸಲು ಕಲಿಯಿರಿ.

**– ಶ್ರೀಮಾತೆ ನೀವು ಹೇಳಿದ್ದು ಹೀಗೆ: 29.04.1964**

## ಆವಾಹನೆ

ಓ ನಮ್ಮ ಮಾತೆಯೇ, ಭಾರತದ ಆತ್ಮಳೇ, ತಾಯಿ, ನೀನು ನಿನ್ನ ಮಕ್ಕಳನ್ನು ಎಂದಿಗೂ ಕೈಬಿಟ್ಟಿಲ್ಲ, ನಿರಾಶೆಯ ಕರಾಳ ದಿನಗಳಲ್ಲಿ, ನಿನ್ನ ಮಾತುಗಳನ್ನು ಕೇಳದೇ ಹೋದಾಗಲೇ ಆಗಲಿ, ಬೇರೆ ಬೇರೆಯವರನ್ನು ನೇಮಿಸುತ್ತ ನಿನ್ನನ್ನು ನಿರಾಕರಿಸಿದಾಗಲೂ ಕೂಡ ನೀನು ಅವರ ಕೈಬಿಟ್ಟಿಲ್ಲ. ಅವರೀಗ ಎಚ್ಚೆತ್ತಿದ್ದಾರೆ. ಸ್ವಾತಂತ್ರ್ಯದ ಬೆಳಕು ನಿನ್ನ ಮುಖದ ಮೇಲೆ ಉದಿಸುತ್ತಿರುವ ಈ ಸುಸಂದರ್ಭದಲ್ಲಿ ನಾವು ನಿಮಗೆ ನಮಿಸುತ್ತೇವೆ.

ನಮ್ಮೆದುರು ತೆರೆದುಕೊಳ್ಳುತ್ತಿರುವ ಸ್ವಾತಂತ್ರ್ಯದ ಕ್ಷಿತಿಜವು ನಿಜವಾದ ಮಹತಿಯ, ಘನತೆಯ, ಹಾಗೂ ದೇಶಗಳ ಸಮುದಾಯದಲ್ಲಿ ನಿಜವಾದ ಜೀವನದ ಕ್ಷಿತಿಜವಾಗುವಂತೆ ಮಾಡು. ನಾವು ಸದಾ ಮಹತ್ತರವಾದ ಆದರ್ಶಗಳ ಪಕ್ಷದಲ್ಲಿರುವಂತೆ, ಹಾಗೂ ಆಧ್ಯಾತ್ಮದ ಪಥದಲ್ಲಿ ನೀನು ನಾಯಕಿಯೂ ಹೌದು, ಸ್ನೇಹಿತೆಯೂ ಹೌದು, ಎಲ್ಲ ಜನರ ಸಹಾಯಕಿಯೂ ಹೌದು ಎಂಬ ನಿಜವಾದ ಸ್ವರೂಪವನ್ನು ಜನತೆಗೆ ಪರಿಚಯ ಮಾಡಿಕೊಡಲು ಸಾಧ್ಯವಾಗುವಂತೆ ನಮಗೆ ಮಾರ್ಗದರ್ಶನ ನೀಡು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/352**

*("ಶ್ರೀಮಾತೆಯವರು ದೇಶದ ಸಮಸ್ತ ಜನತೆಗೆ ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ನೀಡಿದ ಮಂತ್ರವಿದು" ಎಂಬ ಪೀಠಿಕೆಯೊಂದಿಗೆ ಕೆಳಗಿನ ಸಂದೇಶವನ್ನು ಆಶ್ರಮದಲ್ಲಿ ಬಿತ್ತರಿಸಲಾಯಿತು.)*

ಪರಮ ಪ್ರಭು, ಶಾಶ್ವತ ಸತ್ಯವೇ
ನಾವು ಕೇವಲ ನಿನಗೆ ಮಾತ್ರ ವಿಧೇಯರಾಗಿರಲಿ
ಹಾಗೂ ಪರಮ ಸತ್ಯಕ್ಕನುಗುಣವಾಗಿ ಜೀವಿಸುವಂತಾಗಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/371**

## ನವ ಚೈತನ್ಯ: ಸಂದೇಶಗಳು ಮತ್ತು ಪ್ರಾರ್ಥನೆಗಳು

– ಅನುವಾದ: ಡಾ॥ ಬಿ.ಆರ್. ಭೀಡ

ಈ ಜನವರಿ ಮೊದಲ ದಿನದಿಂದ ಹೊಸ ಜಗತ್ತು ಅಥವಾ ಹೊಸ ಪ್ರಜ್ಞೆ ಈ ಭೂಮಿಯ ಮೇಲೆ ಪ್ರಕಟವಾಗಿದೆ ಎಂಬುದು ಸತ್ಯ.

*

ಹೊಸ ಪ್ರಜ್ಞೆಗೆ ನನ್ನನ್ನು ಸಂಪೂರ್ಣವಾಗಿ ತೆಗದಿರಿಸಿಕೊಳ್ಳಲು ನನಗೆ ಶಕ್ತಿಯನ್ನು ನೀಡು.

*

ನಾನು ಹೊಸ ಪ್ರಜ್ಞೆಯಲ್ಲಿ ಜನಿಸುವಂತಾಗಲಿ.

*

ಹೊಸ ಪ್ರಜ್ಞೆಗೆ ನಿಮ್ಮನ್ನು ನೀವು ತೆರೆದುಕೊಳ್ಳಿ.

*

ಅತಿಯಾಗಿ ಮಾನವ ಸಹಜ ದೌಬಲ್ಯಗಳಿಂದ ನನ್ನನ್ನು ಶುದ್ಧಗೊಳಿಸು. ಹೊಸ ಪ್ರಜ್ಞೆಯನ್ನು ಸ್ವೀಕರಿಸಲು ಅವಶ್ಯವಾದ ಶಾಂತಿ ಸ್ಥಿರತೆಗಳನ್ನು ನಾನು ಪಡೆಯುವಂತಾಗಲಿ.

ನಾನು ಅದಕ್ಕೆ ಯೋಗ್ಯವಾಗುವಂತೆ ಮಾಡು.

ಈ ಎಲ್ಲ ಆಂತರಿಕ ಸಾಧನೆಯ ಪರಿಣಾಮವಾಗಿ ನನ್ನಲ್ಲಿರುವ ಆಶೆಗಳೆಲ್ಲ ಬತ್ತಿಹೋಗಲಿ. ಏಕೆಂದರೆ ಆಶಾರಹಿತ ಪ್ರಜ್ಞೆಯಲ್ಲಿ ಮಾತ್ರ ಹೊಸ ಪ್ರಜೆ ಆವಿಷ್ಕಾರಗೊಳ್ಳಬಲ್ಲದು.

*

ಹೊಸ ಪ್ರಜ್ಞೆಯು ಅವಿಕೃತವಾಗಿ ಪ್ರಕಟವಾಗಬೇಕಾದರೆ ಅವಶ್ಯವಾದ ನಿಯಮಗಳೇನೆಂಬುದನ್ನು ಅದೇ ಸ್ವಯಂ ನಿಗದಿಪಡಿಸಿದೆ.

ಪರಮೋಚ್ಚ ಪ್ರಜ್ಞೆಯಲ್ಲಿ ನೆಲನಿಲ್ಲಬೇಕಾದರೆ ತನ್ನ ನೆರಳು ಕೂಡ ಬೀಳದಂತೆ ಯೋಗ್ಯವಾಗಿರಬೇಕು.

ಇದು ಅಹಂನ ಕರಗುವಿಕೆಯನ್ನು ಸೂಚಿಸುತ್ತದೆ.

*

ಈ ಭೂಮಿಯ ಮೇಲೆ ಹೊಸ ಸೃಷ್ಟಿಯೊಂದು ಉದಿಸಲಿದೆ.

ಈ ಹೊಸ ಸೃಷ್ಟಿಯಲ್ಲಿ ನಾನು ಪ್ರಜ್ಞಾಪೂರ್ವಕವಾಗಿ ಭಾಗವಹಿಸುವಂತೆ ಕರುಣಿಸು.

**ಕೃಪಾಶೀರ್ವಾದಗಳು, ಪು. 139–40**

## ಭಾರತದ ಸಲುವಾಗಿ ಪ್ರಾರ್ಥನೆಗಳು

### ಭಾರತಮಾತೆಯ ಆವಾಹನೆ

ಪ್ರತಿ ವ್ಯಕ್ತಿಯೂ ತನ್ನದೇ ಆದ ಅಂತರಾತ್ಮನನ್ನು ಹೊಂದಿದ್ದಾನೆ, ಅದೇ ಅವನ ನಿಜವಾದ ಆತ್ಮ, ಅದೇ ಅವನ ಎಲ್ಲ ಆಗುಹೋಗುಗಳನ್ನು, ಗುರಿಯನ್ನು ಪ್ರಕಟವಾಗಿ ನಿರ್ದೇಶಿಸುತ್ತಿದೆ. ಅದೇ ರೀತಿ ಪ್ರತಿಯೊಂದು ದೇಶವೂ ಸಹ ತನ್ನದೇ ಅಂತರಾತ್ಮವನ್ನು ಹೊಂದಿದೆ. ಅದೇ ಅದರ ಅಸ್ತಿತ್ವದ ನಿಜವಾದ ಪಾಠ ಸರ್ವಸ್ವ. ಅದೇ ಹಿಂದಿನಿಂದ ಮರೆಯಲ್ಲಿದ್ದುಕೊಂಡು ದೇಶದ ಭವಿತವ್ಯವನ್ನೂ ರೂಪಿಸುತ್ತದೆ. ಅದು ಆಯಾ ದೇಶದ ಆತ್ಮವಿದ್ದಂತೆ. ಅದು ರಾಷ್ಟ್ರೀಯ ಪ್ರತಿಭೆ ಅಥವಾ ರಾಷ್ಟ್ರರಕ್ಷಕ ದೇವತೆ, ಅದು ಜನರ ಸತ್ವ, ರಾಷ್ಟ್ರೀಯ ಅಭೀಪ್ಸೆಯ ಕೇಂದ್ರ: ಅಲ್ಲಿನ ಜನಜೀವನದಲ್ಲಿರುವ ಸೌಂದರ್ಯ, ಉದಾತ್ತತೆ, ಉದಾರತೆ, ಮಹತ್ತರತೆ ಇವುಗಳ ಚಿಲುಮೆ ಇದ್ದಂತೆ. ನಿಜವಾದ ದೇಶಭಕ್ತರ ಅದರ ಅಸ್ತಿತ್ವವನ್ನು ಸ್ಪರ್ಶಗ್ರಾಹ್ಯವೆನ್ನುವಷ್ಟರ ಮಟ್ಟಿಗೆ ಸ್ಪಷ್ಟವಾಗಿ ಗುರುತಿಸುತ್ತಾರೆ. ಭಾರತದಲ್ಲಂತೂ ಅದನ್ನೊಂದು ದಿವ್ಯಶಕ್ತಿಯಾಗಿ ಗುರಿತಿಸುತ್ತಾರೆ. ಯಾರು ತಮ್ಮ ದೇಶವನ್ನು ನಿಜವಾಗಿ ಪ್ರೀತಿಸುತ್ತಾರೋ ಅವರು ಅದನ್ನು "ಭಾರತ ಮಾತೆ" ಎಂದೇ ಕರೆಯುತ್ತಾರೆ. ಮತ್ತು ತಮ್ಮ ದೇಶದ ಒಳತಿಗಾಗಿ ಪ್ರತಿದಿನ ಆಕೆಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಆ ಭಾರತ ಮಾತೆಯೇ ಈ ದೇಶದ ನಿಜವಾದ ಆದರ್ಶದ ಸಂಕೇತ ಮತ್ತು ಅದರ ಮೂಲಕ ರೂಪ, ಅದರ ನಿಜವಾದ ಕಾರ್ಯವಾಗಿದೆ.

ಭಾರತದಲ್ಲಿರುವ ವಿಚಾರಶೀಲ ಜನರು/ಬುದ್ಧಿಜೀವಿಗಳು ಭಾರತ ಮಾತೆಯನ್ನು ವಿಶ್ವಮಾತೆಯ ಅಂಶಗಳಲ್ಲೊಂದಕ್ಕೆ ಹೋಲಿಸಿಯೋ ಗುರುತಿಸುತ್ತಾರೆ, ಇದನ್ನೇ 'ದುರ್ಗಾ ಸ್ತೋತ್ರ'ದಲ್ಲಿ ವಿವರಿಸಲಾಗಿದೆ.

ತಾಯಿ ದುರ್ಗೆ! ಶಕ್ತಿ ಮತ್ತು ಪ್ರೇಮ ಮತ್ತು ಜ್ಞಾನ ಪ್ರದಾಯಿನಿಯೇ, ನಿನ್ನ ಶಕ್ತಿ ಭಯಾನಕವಾಗಿದೆ, ನೀನು ಸುಂದರಳೂ ಹೌದು, ಭಯಂಕರಳೂ ಹೌದು. ಜೀವನದ ಹೋರಾಟದಲ್ಲಿ, ಭಾರತ ಸಂಗ್ರಾಮದಲ್ಲಿ ನಾವು ನಿನ್ನಿಂದಲೇ ಪ್ರವೃತ್ತರಾಗಿದ್ದೇವೆ. ನಮ್ಮ ಮನಸ್ಸಿಗೆ , ಹೃದಯಕ್ಕೆ ದೈವಶಕ್ತಿಯನ್ನು ನೀಡು, ನಮ್ಮ ಅಂತರಾತ್ಮಕ್ಕೆ ನಮ್ಮ ಬುದ್ಧಿಗೆ ದೇವತೆಯ ಚಾರಿತ್ರ್ಯವನ್ನು, ಜ್ಞಾನವನ್ನು ನೀಡು.

ತಾಯಿ ದುರ್ಗೆ! ಜಗತ್ತಿನ ಅತಿ ಉದಾತ್ತ ಜನಾಂಗವಾದ ಭಾರತ ಇಂದು ಕತ್ತಲಲ್ಲಿ ಮುಳುಗಿದೆ. ತಾಯಿ, ನೀನು ಪೂರ್ವ ಕ್ಷಿತಿಜದಲ್ಲಿ ಉದಯಿಸುವಿ, ನಿನ್ನ ದಿವ್ಯ ಅಂಗಗಳ ಮೂಲಕ ಕಾಂತಿ ಹರಿದು ಅರುಣೋದಯದ ಮೂಲಕ ನಮ್ಮೆಡೆ ಬರುತ್ತದೆ. ಕತ್ತಲೆಯನ್ನು ಚದುರಿಸುತ್ತದೆ. ನಿನ್ನ ಬೆಳಕು ಎಲ್ಲೆಡೆ ಹರಡಲಿ ತಾಯಿ, ಕತ್ತಲೆಯನ್ನು ನಷ್ಟಗೊಳಿಸು.

ತಾಯಿ ದುರ್ಗೆ! ನಾವು ನಿನ್ನ ಮಕ್ಕಳು. ನಿನ್ನ ಕೃಪೆಯ ಮೂಲಕ, ನಿನ್ನ ಪ್ರಭಾವದಿಂದ ನಾವು ಈ ಮಹತ್ತರವಾದ ಕೆಲಸಕ್ಕೆ ಯೋಗ್ಯರಾಗಲಿ, ಮಹೋನ್ನತವಾದ ಆದರ್ಶಕ್ಕೆ ಅರ್ಹರಾಗಲಿ. ತಾಯಿ, ನಮ್ಮ ಸಣ್ಣತನವನ್ನು ಸ್ವಾರ್ಥವನ್ನು, ನಮ್ಮ ಹೆದರಿಕೆಯನ್ನು ನಾಶಪಡಿಸು.

ತಾಯಿ ದುರ್ಗೆ! ನೀನೇ ಕಾಳಿಯು ನಿನ್ನ ಕೈಗಳಲ್ಲಿರುವ ಖಡ್ಗದಿಂದ ಅಸುರರನ್ನು ಸಂಹಾರ ಮಾಡುವಿ. ಮಹಾದೇವಿ, ನಿನ್ನ ನಿರ್ದಯವಾದ ರಣಘೋಷದೊಂದಿಗೆ ನಮ್ಮೊಳಗಿರುವ ಶತ್ರುಗಳನ್ನು ನಾಶಪಡಿಸು, ಯಾರು ಜೀವಂತವಾಗಿ ಉಳಿಯದಂತೆ ಒಬ್ಬನೇ ಒಬ್ಬ ಶತ್ರು ಕೂಡ ಉಳಿಯದಂತೆ ನಾಶಗೊಳಿಸು. ನಾವು ಪರಿಶುದ್ಧರಾಗಲಿ, ಅಕಳಂಕಿತರಾಗಲಿ, ಇದೇ ನಮ್ಮ ಪ್ರಾರ್ಥನೆ. ತಾಯಿ, ನೀನು ಪ್ರಕಟಳಾಗು.

ತಾಯಿ ದುರ್ಗೆ! ಭಾರತವಿಂದು ಸ್ವಾರ್ಥದಲ್ಲಿ, ಹೆದರಿಕೆಯಲ್ಲಿ, ಕ್ಷುಲಕತದಲ್ಲಿ ಸಿಲುಕಿ ಕೆಳಮಟ್ಟಕ್ಕಿಳಿದಿದೆ. ನಮ್ಮನ್ನು ಶ್ರೇಷ್ಠರನ್ನಾಗಿ ಮಾಡು, ನಮ್ಮ ಪ್ರಯತ್ನವನ್ನು ಶ್ರೇಷ್ಠವಾಗಿಸು, ನಮ್ಮ ಹೃದಯ ವಿಶಾಲವಾಗಲಿ, ನಾವು ನಮ್ಮ ಸಂಕಲ್ಪಕ್ಕೆ

ಬದ್ಧರಾಗಿರುವಂತೆ ಮಾಡು. ನಾವು ಇನ್ನೆಂದಿಗೂ ಸಣ್ಣದಕ್ಕೆ ಆಶೆಪಡದಿರುವಂತಾಗಲಿ, ಶಕ್ತಿಹೀನರಾಗದಿರಲಿ, ಆಲಿಸಿಗಳಾಗದಿರಲಿ, ಹೆದರದಿರಲಿ.

ತಾಯಿ ದುರ್ಗೆ! ಯೋಗ ಶಕ್ತಿಯಿಂದ ವಿಶಾಲವಾಗಿ ಆವರಿಸು, ನಾವು ನಿನ್ನ ಆರ್ಯ ಸಂತಾನ, ನಾವು ಕಳೆದುಕೊಂಡಿರುವ! ಮರೆತುಹೋಗಿರುವ ಬೋಧನೆ, ನಮ್ಮಲ್ಲಿ ಪುನಃ ಬೆಳೆಯುವಂತಾಗಲಿ, ಚಾರಿತ್ರ್ಯ, ಬೌದ್ಧಿಕ ಶಕ್ತಿ, ನಂಬಿಕೆ, ಶ್ರದ್ಧೆ, ಭಕ್ತಿ, ತಪಃಶಕ್ತಿ, ಪಾವಿತ್ರ್ಯ ಮತ್ತು ನಿಜವಾದ ಜ್ಞಾನದ ಶಕ್ತಿ ನಮ್ಮಲ್ಲಿ ಬೆಳೆಯಲಿ. ಇವೆಲ್ಲವನ್ನು ಈ ಜಗಕ್ಕೆ ಕರುಣಿಸು. ಮಾನವನೆಡೆಗೆ ಸಹಾಯ ಮಾಡಲು ಪ್ರಕಟವಾದ ವಿಶ್ವಮಾತೆಯೇ, ಎಲ್ಲ ವಿಕೃತಿಗಳನ್ನು ನಾಶಪಡಿಸು.

ತಾಯಿ ದುರ್ಗೆ! ಅಂತರಂಗದಲ್ಲಿರುವ ಶತ್ರುವನ್ನು ಕೊಂದುಬಿಡು, ಎಲ್ಲ ಅಡೆತಡೆಗಳನ್ನು ಬೇರು ಸಹಿತ ಕಿತ್ತುಹಾಕು. ಉದಾತ್ತವಾದ, ಸಶಕ್ತವಾದ ಮುಂದಾಳುವಾದ ಭಾರತ ಜನಾಂಗವು, ಪ್ರೇಮದಲ್ಲಿ ಏಕತೆಯಲ್ಲಿ ಶ್ರೇಷ್ಠವಾಗಿ, ಸತ್ಯದಲ್ಲಿ ಶಕ್ತಿಯಲ್ಲಿ ಶ್ರೇಷ್ಠವಾಗಿ, ಕತೆ, ಸಾಹಿತ್ಯ, ಶಕ್ತಿ, ಜ್ಞಾನಗಳಲ್ಲಿ ಶ್ರೇಷ್ಠವಾಗಿ ತನ್ನ ಪ್ರವಿತ್ರವಾದ ನೆಲದ ಮೇಲೆ, ಸಮೃದ್ಧವಾದ ಕೃಷಿ ಭೂಮಿಯಲ್ಲಿ ಮುಗಿಲೆತ್ತರದ ಗುಡ್ಡುಗಾಡುಗಳಲ್ಲಿ, ಪರುಶುದ್ಧವಾಗಿ ಹರಿಯುವ ನದಿಗಳ ದಂಡೆಗಳಲ್ಲಿ ಸದಾ ಜೀವಿಸುವಂತಾಗಲಿ. ಇದೇ ನಮ್ಮ ಪ್ರಾರ್ಥನೆ, ತಾಯಿ, ನಿನ್ನ ಚರಣಗಳಲ್ಲಿದು ಸಮರ್ಪಿತ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/42–44**

## ಶ್ರೀಮಾತೆಯವರ ಕೆಲ ಆವಾಹನೆಗಳು ಮಂತ್ರಗಳು ಮತ್ತು ಪ್ರಾರ್ಥನೆಗಳು

ಓ ನನ್ನ ಪ್ರೀತಿಯ ಪ್ರಭು, ಗುರು, ದಯೆ ಮತ್ತು ಅನುಕಂಪಗಳ ದೇವರೇ,

ನಾವೇನನ್ನು ತಿಳಿದುಕೊಳ್ಳಬೇಕೆಂದು ನೀನು ಬಯಸುವಿಯೋ ನಾವದನ್ನು ತಿಳಿದುಕೊಳ್ಳುವವು, ನಾವೇನು ಮಾಡಬೇಕೆಂದು ನೀನು ಇಚ್ಛೆಸುವೆಯೋ ನಾವು ಅದನ್ನೇ ಮಾಡುವೆವು. ನಾನೇನಾಗಬೇಕೆಂದು ನೀನು ಆಶಿಸುವಿಯೋ ನಾವು ಅದೇ ಆಗುವೆವು – ಸದಾಕಾಲಕ್ಕೂ.

*ಓಂ ನಮೋ ಭಗವತೇ*

ಏಕೆಂದರೆ ಏನೆಲ್ಲಿ ಇದೆಯೋ ಅದೆಲ್ಲವೂ ನೀನೇ ಇರುವಿ, ನಿನಗೆ ಎಲ್ಲವೂ ಗೊತ್ತು. ನೀನೇ ಎಲ್ಲವನ್ನೂ ಮಾಡುವವನು. ಎಲ್ಲ ಕಾರ್ಯಗಳ ಪರಿಣಾಮವೂ ನೀನೇ ಆಗಿರುವಿ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಜುಲೈ 25, 1958**

ಶರೀರವು ಪರಮೋಚ್ಚ ಪ್ರಭುವಿಗೆ ನಿವೇದಿಸಿಕೊಳ್ಳುತ್ತದೆ. "ನಾನೇನಾಗಬೇಕೆಂದು ನೀನು ಬಯಸುವಿಯೋ ನಾನು ಅದೇ ಆಗುವೆ, ನಾನೇನನ್ನು ತಿಳಿದುಕೊಳ್ಳಬೇಕೆಂದು ನೀನು ಬಯಸುವಿಯೋ ನಾನು ಅದನ್ನೇ ತಿಳಿದುಕೊಳ್ಳುವೆ, ನಾನೇನು ಮಾಡಲೇಬೇಕೆಂದು ನೀನು ಇಚ್ಛಿಸುವಿಯೋ ನಾನು ಅದನ್ನೇ ಮಾಡುವೆ".

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಅಕ್ಟೋಬರ್ 3, 1958 (ಮೂಲ: ಫ್ರೆಂಚ್)**

ಓಂ
ಓಂ ಪರಮ ಪ್ರಭುವೇ
ಈ ಶರೀರವನ್ನು ನಿನ್ನ ಸುಪರ್ದಿಗೆ ತೆಗೆದುಕೋ
ಅದರಲ್ಲಿ ನೀನು ಪ್ರಕಟವಾಗು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಜನವರಿ 21, 1959**

ಓ ದಿವ್ಯ ಬೆಳಕೇ, ಅತಿಮಾನಸದ ಸತ್ಯವೇ, ಈ ಆಹಾರದೊಂದಿಗೆ ನನ್ನ ಶರೀರದಲ್ಲೆಲ್ಲ ತುಂಬಿ ಪ್ರವಹಿಸು, ಎಲ್ಲ ಜೀವಕೋಶಗಳಲ್ಲೂ ಪ್ರವೇಶಿಸು, ಕಣಕಣದಲ್ಲಿಯೂ ಪ್ರವೇಶ ಮಾಡು. ಎಲ್ಲವೂ ಪರಿಪೂರ್ಣವಾಗಿ ಪ್ರಾಮಾಣಿಕವಾಗಲಿ /ಶ್ರದ್ಧಾನ್ವಿತವಾಗಲಿ, ನಿನ್ನ ಪ್ರಕಟಣೆಗೆ ಏನೆಲ್ಲ ಅಡ್ಡಿಯನ್ನುಂಟುಮಾಡುವುದೋ ಅದೆಲ್ಲದರಿಂದ ಮುಕ್ತವಾಗಿ ನಿನಗೆ ತೆರೆದುಕೊಂಡಿರಲಿ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಯಾವ ಭಾಗವು ಇನ್ನೂ ನೀನೇ ಆಗಿ ಬದಲಾಗಿಲ್ಲವೋ ನನ್ನ ಶರೀರದ ಆ ಎಲ್ಲ ಭಾಗಗಳನ್ನು ನಿನಗಾಗಿ ತೆರೆದುಕೊಳ್ಳುವಂತೆ ಮಾಡು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಅನುಕ್ತ ದಿನಾಂಕ (1959)**

**ಏಕೈಕದ ವಿಭಿನ್ನ ಅಂಶಗಳಿಗೆ ಆವಾಹನೆ**

ಪ್ರಭು, ದಯೆ ಮತ್ತು ಅನುಕಂಪಗಳ ಒಡೆಯನೇ, ಪರಮೋಚ್ಚ ಏಕತೆಯ ದೇವನೇ, ಪ್ರಭು, ಸೌಂದರ್ಯ ಮತ್ತು ಸಾಮರಸ್ಯಗಳ ದೇವತೆಯೇ, ಪ್ರಭು, ಶಕ್ತಿ ಮತ್ತು ಸಾಕ್ಷಾತ್ಕಾರಗಳ ದೇವನೇ, ಪ್ರಭು, ಪ್ರೇಮ, ಅಂತಃಕರಣಗಳ ದೇವನೇ, ಪ್ರಭು, ಮೌನ, ಏಕಾಗ್ರತೆಗಳ ದೇವದೇವನೇ, ಪ್ರಭು, ಬೆಳಕು ಮತ್ತು ಜ್ಞಾನಗಳ ದೇವತೆಯೇ, ಪ್ರಭು, ಜೀವನ ಮತ್ತು ಅರತ್ವದ ಅಧಿದೇವನೇ, ಪ್ರಭು, ತಾರುಣ್ಯ ಮತ್ತು ಪ್ರಗತಿಯ ಅಧಿದೇವತೆಯೇ, ಪ್ರಭು, ಶ್ರೀಮಂತಿಕೆಯ ಮತ್ತು ಸಮೃದ್ಧಿಯ ದೇವತೆಯೇ, ಪ್ರಭು, ಆರೋಗ್ಯ ಹಾಗೂ ಶಕ್ತಿಯ ದೇವತೆಯೋ ಪ್ರಭು, ಶಾಂತಿ ಮತ್ತು ವೈಶಿಷ್ಟದ ದೇವವೇ, ಪ್ರಭು, ಶಕ್ತಿ ಮತ್ತು ಅಜೇಯತೆಯ ದೇವತೆಯೇ, ಪ್ರಭು, ಸರ್ವವಿಜಯಿ ಸತ್ಯದ ದೇವದೇವನೇ.

ನನ್ನೀ ಶರೀರವನ್ನು ಒಪ್ಪಿಸಿಕೋ, ಅದರಲ್ಲಿ ಪ್ರಕಟವಾಗು.

*

ಓಂ ಪರಮೋಚ್ಚ ಪ್ರಭು,
ನನ್ನ ಶರೀರದ ಎಲ್ಲ ಜೀವಕೋಶಗಳನ್ನು ವಶಕ್ಕೆ ತೆಗೆದುಕೋ
ಈ ಮಿದುಳನ್ನು ನಿನ್ನ ವಶಕ್ಕೆ ತೆಗೆದುಕೋ
ಈ ನರನಾಡಿಗಳನ್ನು ನಿನ್ನ ವಶಕ್ಕೆ ತೆಗೆದುಕೋ
ಈ ಭೌತಿಕವನ್ನು ವಶಕ್ಕೆ ತೆಗೆದುಕೋ
ಓಂ ಪರಮೋಚ್ಚ ಪ್ರಭು
ನಿನ್ನ ಶಾಂತಿ ಮತ್ತು ವೈಭವಗಳನ್ನು ಪ್ರಕಟಿಸು

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಅನುಕ್ತ ದಿನಾಂಕ (ಜನವರಿ 1959)**

ನೀನು ನನ್ನ ಪ್ರತಾಳ್ಮೆ ನನ್ನ ಶಕ್ತಿ
ಮತ್ತು ನನ್ನ ಆನಂದ
ನೀನೇ ನನ್ನ ಪರಮೋಚ್ಚ ಸಾಕ್ಷಾತ್ಕಾರ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಅಕ್ಟೋಬರ್ 9, 1959**

ಓಂ ಪರಮೋಚ್ಚ ಪ್ರಭುವೇ, ದಯೆ ಹಾಗೂ ಅನುಕಂಪಗಳ ದೇವನೇ, ಓಂಪರಮೋಚ್ಚ ಪ್ರಭುವೇ, ಪ್ರೇಮ ಮತ್ತು ಕರುಣೆಗಳ ಅಧಿದೇವತೆಯೇ, ಓಂ ಪರಮೋಚ್ಚ ಪ್ರಭುವೇ ನನ್ನೀ ಜೀವಕೋಶಗಳನ್ನೆಲ್ಲ ನಿನ್ನ ವಶಕ್ಕೆ ತೆಗೆದುಕೋ, ಓಂ ಪರಮೋಚ್ಚ ಪ್ರಭುವೇ ಮಿದುಳನ್ನು ಆವರಿಸು, ಓಂ ಪರಮೋಚ್ಚ ಪ್ರಭುವೇ ಈ ನರನಾಡಿಗಳನ್ನೆಲ್ಲ ಆವರಿಸು. ಓಂ ಪರಮೋಚ್ಚ ಪ್ರಭುವೇ ಈ ಮನಸ್ಸನ್ನು ನಿನ್ನ ವಶಕ್ಕೆ ತೆಗದುಕೋ, ಓಂ ಪರಮೋಚ್ಚ ಪ್ರಭುವೇ ನನ್ನ ಮಾತುಗಳನ್ನು ನಿನ್ನ ವಶಕ್ಕೆ ತೆಗೆದುಕೋ, ಓಂ ಪರಮೋಚ್ಚ ಪ್ರಭುವೇ ಹೃದಯವನ್ನು ನಿನ್ನ ವಶಕ್ಕೆ ತೆಗೆದುಕೋ, ಓಂ ಪರಮೋಚ್ಚ ಪ್ರಭುವೇ ಈ ಭೌತಿಕವನ್ನು ಆವರಿಸು. ಓಂ ಪರಮೋಚ್ಚ ಪ್ರಭುವೇ ಅಣು ಅಣುವಿನಲ್ಲೂ ನೀನು ವ್ಯಾಪಿಸು. ಪರಮ ಪ್ರಭುವೇ ಅವಚೇತನವನ್ನು ವಶಕ್ಕೆ ತೆಗೆದುಕೋ, ಪರಮ ಪ್ರಭುವೇ ಅಚೇತನವನ್ನು ನಿನ್ನ ವಶಕ್ಕೆ ತೆಗೆದುಕೋ.

*ಓಂ ನಮೋ ಭಗವತೇ*

ಓಂ ಪರಮೋಚ್ಚ ಪ್ರಭು, ದಯೆ ಮತ್ತು ಕರುಣೆಗಳ ದೇವತೆಯೇ,
ಓಂ ಪರಮೋಚ್ಚ ಪ್ರಭು, ಪ್ರೇಮ ಮತ್ತು ಆನಂದಗಳ ದೇವತೆಯೇ,
ಓಂ ಪರಮೋಚ್ಚ ಪ್ರಭು, ನಿನ್ನ ಸಂಕಲ್ಪವನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಸತ್ಯವನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಪಾವಿತ್ರ್ಯವನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಪರಿಪೂರ್ಣತೆಯನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಏಕತೆಯನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಶಾಶ್ವತೆಯನ್ನು ಪ್ರಕಟಿಸು.
ಓಂ ಪರಮೋಚ್ಚ ಪ್ರಭು, ನಿನ್ನ ಅನಂತತೆಯನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಅಮರತ್ವವನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ನಿಃಶಬ್ದತೆಯನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಶಾಂತಿಯನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಅಸ್ತಿತ್ವವನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಚೈತನ್ಯವನ್ನು/ಚಿತ್ತನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಸರ್ವಶಕ್ತತೆಯನ್ನು ಪ್ರಕಟಿಸು,

ಓಂ ಪರಮೋಚ್ಚ ಪ್ರಭು, ನಿನ್ನ ಆನಂದವನ್ನು/ಸರ್ವೋತ್ಕೃಷ್ಟತೆಯನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ಜ್ಞಾನವನ್ನು ಪ್ರಕಟಗೊಳಿಸು
ಓಂ ಪರಮೋಚ್ಚ ಪ್ರಭು, ನಿನ್ನ ಸರ್ವಜ್ಞತ್ವವನ್ನು ಪ್ರಕಟಿಸು,
ಓಂ ಪರಮೋಚ್ಚ ಪ್ರಭು, ನಿನ್ನ ವಿವೇಕವನ್ನು/ಬುದ್ಧಿಯನ್ನು ಪ್ರಕಟಗೊಳಿಸು
ಓಂ ಪರಮೋಚ್ಚ ಪ್ರಭು, ನಿನ್ನ ಸಮತೆಯನ್ನು ಪ್ರಕಟಿಸು
ಓಂ ಪರಮೋಚ್ಚ ಪ್ರಭು, ನಿನ್ನ ತೀವ್ರತೆಯನ್ನು ಪ್ರಕಟಿಸು
ಓಂ ಪರಮೋಚ್ಚ ಪ್ರಭು, ನಿನ್ನ ದಿವ್ಯಪ್ರಕಾಶವನ್ನು ಪ್ರಕಟಿಸು
ಓಂ ಪರಮೋಚ್ಚ ಪ್ರಭು, ನಿನ್ನ ಸಾಮರಸ್ಯವನ್ನ ಪ್ರಕಟಿಸು
ಓಂ ಪರಮೋಚ್ಚ ಪ್ರಭು, ನಿನ್ನ ಅನುಕಂಪವನ್ನು ಪ್ರಕಟಿಸು
ಓಂ ಪರಮೋಚ್ಚ ಪ್ರಭು, ನಿನ್ನ ಸೌಂದರ್ಯವನ್ನು ಪ್ರಕಟಿಸು
ಓಂ ಪರಮೋಚ್ಚ ಪ್ರಭು, ನಿನ್ನ ಪ್ರೇಮವನ್ನು ಪ್ರಕಟಗೊಳಿಸು
ಓಂ ಪರಮೋಚ್ಚ ಪ್ರಭು, ನಿನ್ನ ವಿಜಯಶಾಲಿಯಾಗು, ನಿನಗೆ ಜಯವಾಗಲಿ, ಶ್ರೇಷ್ಠ ವಿಜೇತೃ ನಿನಗೆ ಜಯವಾಗಲಿ

*

*ಮಹಿಮಾ ತಪ್ಪಿನ ಪ್ರಭೋ ಪರಮ ಜೇತ್ವರಾ ಓಂತತ್ ಸತ್ ಓಂ ಸಚ್ಚಿತ್ತ ಪಸ್ ಆನಂದ ಓಂ ನಮೋ ಭಗವತೇ, ಓಂ ನನ್ನ ಪ್ರೀತಿಯ ಪ್ರಭುವೇ, ಓಂ ನನ್ನ ಪ್ರಿಯಕರವೇ/ಪ್ರಿಯ ದೈವವೇ.*

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, (ಅನುಕ್ತ ದಿನಾಂಕ)**

**ಶರೀರದ ಏಕೈಕ ಪ್ರಾರ್ಥನೆ**

ಎಲ್ಲ ಸಂಗತಿಗಳೂ ಈಗ ತೀವ್ರ ಸ್ವರೂಪ ತಾಳಿವೆ. ಇಡೀ ವಾತಾವರಣವು ಒಂದು ರೀತಿಯಲ್ಲಿ ಉನ್ನತೀಕರಣಗೊಂಡಿದೆ, ಅನೂಹ್ಯವಾದ ಕಾಂತಿಯಿಂದ ತುಂಬಿದೆ, ಆದರೆ ಅದೇ ಕಾಲಕ್ಕೆ ಯಾರೇ ಯಾಗತೇ, ಯಾವುದೇ ಸಮಯದಲ್ಲೂ; ಸಾಯಬಹುದೆಂಬ ಅನಿಸಿಕೆ ಕೂಡ ತುಂಬಿದೆ.. "ಸಾಯುವುದು" ಅಂತಲ್ಲ, ಆದರೆ ಶರೀರ ಕರಗಿಹೋಗಬಹುದು. ಎರಡೂ ಸೇರಿ ಒಂದು ಪ್ರಜ್ಞೆ ನಿರ್ಮಾಣವಾಗಬಹುದು. (ಶ್ರೀಮಾತೆ ತಮ್ಮ ತಲೆ ಅಲ್ಲಾಡಿಸುತ್ತಾರೆ) ಅದರಲ್ಲಿ ಎಲ್ಲ ಹಳೆಯ ನೆನಪುಗಳು, ಅನುಭವಗಳು, ಮಕ್ಕಳಾಟಿಕೆಯಂತೆ,

ಮೂರ್ಖತನವೆಂಬಂತೆ, ಪ್ರಜ್ಞಾಹೀನವೆಂಬಂತೆ ತೋರುವುವು. ಮತ್ತು ಇದು.. ಅತಿ ಅದ್ಭುತವಾಗಿದೆ, ಭವ್ಯವಾಗಿದೆ. ಆದರೆ ಶರೀರ ಒಂದೇ ಬೇಡಿಕೆ ಇದೆ, ಒಂದೇ ಪ್ರಾರ್ಥನೆ ಇದೆ. ಯಾವಾಗಲೂ ಒಂದೇ –

ನಿನ್ನನ್ನು ತಿಳಿದುಕೊಳ್ಳಲು ನನ್ನನ್ನು ಯೋಗ್ಯನನ್ನಾಗಿ ಮಾಡು ನಿನ್ನನ್ನು ಸೇವಿಸಲು ನಾನು ಯೋಗ್ಯವಾಗಲಿ (ಸೇನೆಗೈಯಲು) ನಾನು ನೀನೇ ಆಗಿಬಿಡಲು ಯೋಗ್ಯವಾಗುವಂತೆ ಮಾಡು –

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಸೆಪ್ಟೆಂಬರ್ 30, 1972**

## ಶ್ರೀ ಅರವಿಂದ ವಿರಚಿತ ಮಂತ್ರಗಳು ಮತ್ತು ಪ್ರಾರ್ಥನೆಗಳು

– ಅನುವಾದ: ಪ್ರೊ. ವೀರಭದ್ರಪ್ಪ ಕೆ.



**ಓಂ ಆನಂದಮಯಿ ಚೈತನ್ಯಮಯಿ ಸತ್ಯಮಯಿ ಪರಮೇ**

ಓಂ ಆನಂದಮಯಿ ಚೈತನ್ಯಮಯಿ/ಸತ್ಯಮಯಿ ಪರಮೋ – ಜಾಗೃತದಂತೆ, ನಿದ್ರೆಯಲ್ಲಿ ಕೂಡ, ನಿನ್ನ ಸತ್ಯದ ಸಾನಿಧ್ಯವನ್ನು ಸಂವೇದಿಸುವಾಗ, ಆ ಸತ್ಯ, ಪ್ರಜ್ಞೆ ಮತ್ತು ಆನಂದ ಸಾಂತ್ವನ ಹಾಗೂ ಎಲ್ಲಾ ದಿವ್ಯನುಭವವಾಗಿ ನನ್ನಲ್ಲಿ ಉಳಿಯಲಿ ಮತ್ತು ಬೆಳೆಯುವಂತಾಗಲಿ.

**ಓಂ ತತ್ ಸತ್ ಜೋತಿರ್ ಅರವಿಂದ**
**ಓಂ ಸತ್ಯಂ ಜ್ಞಾನಂ ಜೋತಿರ್ ಅರವಿಂದ**

**ಓಂ ಅಸತೋಮ ಸದ್ಗಮಯ। ತಮಸೋಮ ಜೋತ್ಯಿರ್ಗಮಯ।**
**ಮೃತ್ಯೋರ್ಮಾ ಅಮೃತಂಗಮಯ। ಓಂ ಶಾಂತಿಃ ಶಾಂತಿಃ ಶಾಂತಿಃ॥**

ತಥಾಸ್ತು

ಓಂ ಶ್ರೀ ಅರೊಬಿಂದೋ ಮೀರಾ,

ನನ್ನ ಮನಸ್ಸನ್ನು, ನನ್ನ ಹೃದಯವನ್ನು, ಜೀವನವನ್ನು, ನಿನ್ನ ಪ್ರಕಾಶಕ್ಕೆ, ನಿನ್ನ ಪ್ರೇಮಕ್ಕೆ, ನಿನ್ನ ಶಕ್ತಿಗೆ ತೆರೆಯಿರಿ. ಆದ್ದರಿಂದ ನಾನು ಎಲ್ಲದರಲ್ಲಿಯೂ ಭಗವಂತನನ್ನೂ ಕಾಯುತ್ತೇನೆ.

ಜಾಗೃತದಂತೆ ನಿದ್ರೆಯಲ್ಲಿ ಕೂಡ ನಿನ್ನ ಸತ್ಯದ ಸಾನಿಧ್ಯ ನನಗೆ ಸಂವೇದಿಸುವಂತಾಗಲಿ. ಸತ್ಯ, ಪ್ರಜ್ಞೆ ಮತ್ತು ನಿರಂತರ ಆನಂದ ಎಲ್ಲಾ ಸಮಯದಲ್ಲಿ ನನ್ನಲ್ಲಿ ಉಳಿಯಲಿ ಮತ್ತು ಬೆಳೆಯುವಂತಾಗಲಿ.

## ಶ್ರೀಮಾತೆಯವರ ಪ್ರಾರ್ಥನೆಗಳು

*ಬಹಳಷ್ಟು ಜನರ ದೃಷ್ಟಿಯಲ್ಲಿ ಶ್ರೀಮಾತೆಯವರು ಮಾನವರು ಈಗ ದೈವೀಮಾತೆಯಾಗಿ ಸಾಕಾರಗೊಳ್ಳುತ್ತಿದ್ದಾರೆ. ಮತ್ತು ಅವರ ಪ್ರಾರ್ಥನೆಗಳು, ಎಲ್ಲರೂ ಹೇಳುವ ಹಾಗೆ, ಕಲ್ಪನೆಯನ್ನು ವಿವರಿಸುತ್ತದೆ. ಆದರೆ ನನ್ನ ಮನಸ್ಸಿನ ಪರಿಕಲ್ಪನೆಯಂತೆ, ನನ್ನ ಅಂತರಾತ್ಮದ ಸಂವೇದನೆಯಂತೆ ಅವರು ದೈವೀಮಾತೆ, ನಮ್ಮಂತಹ ಮಾನವರನ್ನು ಜ್ಞಾನದೆಡೆಗೆ, ಆನಂದದೆಡೆಗೆ ಮತ್ತು ಅವನೆಡೆಗೆ ಪರಿಣಾಮಕಾರಿಯಾಗಿ ಮುನ್ನಡೆಸಲು ತಮನ್ನು ಮಾನವ ರೂಪಧಾರಿಯಾಗಿ ಒಪ್ಪಿಕೊಂಡಿದ್ದಾರೆ.*

ದೈವವು ತನ್ನನ್ನು ಮಾನವ ರೂಪದಲ್ಲಿ ತೋರಿಸಿಕೊಳ್ಳುತ್ತದೆ. ಹೊರಗೆ ಮಾನವ ಸ್ವಭಾವವನ್ನು ಪರಿಭಾವಿಸಿಕೊಂಡು ಯೋಗ ಮಾರ್ಗದಲ್ಲಿ ತಾನಡೆದು ಮಾನವರಿಗೆ ತೋರಿಸಿಕೊಡುತ್ತದೆ. ಇದರೊಂದಿಗೆ ತನ್ನ ದೈವತ್ವವನ್ನು ಬಿಡುವುದಿಲ್ಲ. ತನ್ನಲ್ಲಿ ಪ್ರಕಟಿಸಿಕೊಳ್ಳುತ್ತ ದೈವೀ ಪ್ರಜ್ಞೆಯನ್ನು ಬೆಳೆಸುವ ಮೂಲಕ, ಆದರೆ ಮಾನವ ದೈವವಾಗಿ ಬದಲಾದಂತಲ್ಲಾ ಶ್ರೀಮಾತೆಯವರು ಬಾಲ್ಯದಿಂದಲೆ ಅಂತರಂಗದಲ್ಲಿ ಮಾನವರಿಗಿಂತ ಉನ್ನತ ಮಟ್ಟದಲ್ಲಿದ್ದ ಆದರಿಂದ ಎಲ್ಲರೂ ಭಾವಿಸಿರುವ ದೃಷ್ಟಿಕೋನ ತಪ್ಪಿನಿಂದ ಕೂಡಿದೆ.

*

*ನಾನು ಪರಿಭಾವಿಸಿರುವ ಹಾಗೆ ಶ್ರೀಮಾತೆಯವರ ಪ್ರಾರ್ಥನೆಗಳು ನಮ್ಮ ಅಂತರಂಗದ ಅಭೀಪ್ಸೆಗಳನ್ನು ತೋರಿಸುವುದೇ ಆಗಿದೆ. ಯಾವ ರೀತಿ ದೈವವಸ್ತು ಪ್ರಾರ್ಥಿಸನೇಕೆಂದು.*

ಹೌದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/31–32**

*"ದೈವೀಮಾತೆ" ಕುರಿತು ಇರುವ ಕೆಲವೊಂದು ಶ್ರೀಮಾತೆಯವರ ಪ್ರಾರ್ಥನೆಗಳಲ್ಲಿ ನಾನು ಕೆಲವೊಂದು ಕಥೆಗಳನ್ನು ಕಾಣುವೆ "ದೈವೀ ಮೀರಾ ಎಚ್ಚೆತ್ತುಕೋ" ಶ್ರೀಮಾತೆ ಮತ್ತು "ದೈವೀಮಾತೆ" ಹೇಗೆ ತಾನೆ ದೈವೀ ಮೀರಾ ಹೊಂದಿದ್ದಾರೆ? ಇದರರ್ಥ ಶ್ರೀಮಾತೆಯವರ ದೈವೀಮಾತೆ ಅಲ್ಲ*

*ಎಂದೆ. ಈ ರೀತಿ ಬೇರೆ ಮಾತೆ ಇದ್ದಾಳೆಂದೆ ಶ್ರೀಮಾತೆಯವರು ವಿಶ್ವಾತೀತರಲ್ಲವೆಂದು ಅಥವಾ ಈ ಎಲ್ಲ ಪ್ರಾರ್ಥನೆಗಳು ನಿರಾಕಾರವೊಂದನ್ನು ಕುರಿತಾಗಿದ್ದವುಗಳೆ ಆಗಿವೆ.*

ಬಹುತೇಕ ಪ್ರಾರ್ಥನೆಗಳನ್ನು ಭೂಮಿಯ ಪ್ರಜ್ಞೆಯೊಂದಿಗೆ ಗುರುತಿಸಿಕೊಂಡು ಬರೆದದ್ದಾಗಿವೆ. ನಿಮ್ಮ ಪ್ರಕೃತಿಯಲ್ಲಿರುವ ಶ್ರೀಮಾತೆ, ಉನ್ನತ ಪ್ರಕೃತಿಯಲ್ಲಿರುವ ಶ್ರೀಮಾತೆಯವರನ್ನು ಉದ್ದೇಶಿಸಿ ಮಾಡಿದ್ದಾಗಿವೆ, ಭೂಮಿಯ ಪ್ರಜ್ಞೆಯನ್ನು ಪರಿವರ್ತಿಸಲು ತಾವೇ ಸಾಧನೆ ಮಾಡುತ್ತಿದ್ದಾರೆ, ಮೇಲಿರುವ ಪರಿವರ್ತನಾಶೀಲ ಶಕ್ತಿಗೆ ಪ್ರಾರ್ಥಿಸುತ್ತಿದ್ದಾರೆ ಭೂಮಿಯ ಪ್ರಜ್ಞೆಯು ಉನ್ನತ ಪ್ರಜ್ಞೆಗೆ ಸಮವಾಗುವವರೆಗೆ ಇದು ಮುಂದುವರೆಯುತ್ತದೆ. ಶ್ರೀಮಾತೆಯವರು ಎನ್ನುವ ಶಬ್ದ ಸಾಮಾನ್ಯ, ನಾನು ನಂಬುವ ಹಾಗೆ ಶ್ರೀಮಾತೆ ಮತ್ತು ನನ್ನನ್ನು ಬಿಟ್ಟು ಭೂಮಿ ಪ್ರಜ್ಞೆಯಲ್ಲಿ ಜನಿಸಿದವರೆಲ್ಲರಿಗೂ ಅನ್ವಯವಾಗುತ್ತದೆ. ದೈವವನ್ನು ನಾವು ಯಾವಾಗಲೂ ದೈವೀಮಾತೆ ಮತ್ತು ಪರಮಾತ್ಮ ಎಂದು ಕರೆಯಬಹುದು. ಸಾಧನೆ ಮಾಡುವ ಶ್ರೀಮಾತೆ ಮತ್ತು ದೈವೀಮಾತೆ ಇಬ್ಬರೂ ಒಂದೆ ಆದರೆ ಬೇರೆಬೇರೆ ಸ್ಥಂದದಲ್ಲಿ, ಮತ್ತು ಇಬ್ಬರೂ ಪರಮಾತ್ಮನೆಡೆಗೆ ಅಥವಾ ದೈವೀ ಪ್ರಭುವಿನ ಕಡೆಗೆ ಸಾಗುವವರು. ಈ ರೀತಿ ದೈವದಿಂದ ದೈವಕ್ಕೆ ಪ್ರಾರ್ಥನೆ ರಾಮಾಯಾಣ ಮತ್ತು ಮಹಾಭಾರತದಲ್ಲಿ ಕಾಣುವಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/601–02**

*ಶ್ರೀಮಾತೆಯವರ 1914ರ ಕೆಲವು ಪ್ರಾರ್ಥನೆಗಳು ಪರಿವರ್ತನೆ ಮತ್ತು ಪ್ರಕಟವಾಗುವುದರ ಬಗ್ಗೆ ಮಾತಾನಾಡುತ್ತಾರೆ. ಆದರೆ ಆ ಸಮಯದಲ್ಲಿ ಅವರಿಲ್ಲಿರಲಿಲ್ಲ; ಅವರಿಲ್ಲಿ ಬರುವುದಕ್ಕಿಂತ ಮುಂಚೆಯೆ ಇವುಗಳ ಬಗ್ಗೆ ಅವರಿಗೆ ಕಲ್ಪನೆಯಿತ್ತು. ಎಂದರ್ಥವಲ್ಲವೆ?*

ಶ್ರೀಮಾತೆಯವರು ಯುವತಿಯವರಾಗಿದ್ದರಿಂದ ಈ ಪ್ರಜ್ಞೆವುಳ್ಳವರಾಗಿದ್ದರು, ಬಾಲ್ಯದಿಂದಲೂ ಉನ್ನತವಾದ ಸಾಧನೆಯಿತ್ತು, ಭಾರತಕ್ಕೆ ಬರುವ ಬಹಳ ಮೊದಲೇ ಈ ಜ್ಞಾನ ಅವರಿಗಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/384**

*ಶ್ರೀಮಾತೆಯವರು ನನಗೆ ಹೇಳಿದ ಹಾಗೆ ಉದ್ವೇಗ ಮತ್ತು ಶ್ರಮವಿಲ್ಲದ ಸರಿಯಾದ ವರ್ತನೆ ಹೇಗಿರಬೇಕೆಂದರೆ ಪ್ರಕಾಶಮಾನವಾದ ಮತ್ತು ಬೆಳಕಿಗೆ ತೆರೆದುಕೊಳ್ಳುವ ಹಾಗೆ ಸ್ವಾಭಾವಿಕವಾಗಿರಬೇಕು. ಇದು ನೀವು ಮತ್ತು ಶ್ರೀಮಾತೆಯವರಂತಹ ಅವತಾರ ಪುರುಷರಿಗೆ ಸರಿ, ಆದರೆ ನಮ್ಮಂತಹ ಬಹು ಮರ್ತ್ಯ–ಮಾನವರಿಗೆ ಇಂತಹ ಅಸ್ಪಷ್ಟ ಅನುಶಾಸನ ಸಲಹೆ ಎಷ್ಟು ಸರಿ? ನಿರಂತರ ಪ್ರಾರ್ಥನೆ, ಕಠಿಣ ಧ್ಯಾನ ಮತ್ತು ಧೃಡ ಪ್ರಯತ್ನದಿಂದ ನಮ್ಮ ತಪ್ಪು ಚಲನೆಗಳನ್ನು ನಿಯಂತ್ರಿಸದಲ್ಲದೆ ಈ ಸಾಧನೆಯನ್ನು ಪಡೆಯುವುದು ಹೇಗೆ?*

ನೀ ಹೇಳುವ ಹಾಗೆ ಈ ದಾರಿ ನಾನು ಮತ್ತು ಶ್ರೀಮಾತೆಯವಂತಹ ಅವತಾರ ಪುರುಷರಿಗಲ್ಲದೆ ನಿನ್ನಂತಹವರಿಗೆ ಕಷ್ಟಕರವಾದದ್ದು. ಉನ್ನತಿ, ಇದೊಂದು ವಿಚಿತ್ರವಾಗಿರುವ ತಪ್ಪು ಅಭಿಪ್ರಾಯವಾಗಿದೆ, ಆದರೆ ತದ್ವಿರುದ್ಧವಾಗಿ ಇದೊಂದು ಸುಲಭ ಮತ್ತು ಸರಳವಾದ ಮತ್ತು ಬಹಳ ನೇರವಾದ ಮಾರ್ಗ ಮತ್ತು ಯಾರಾದರೂ ಮಾಡಬಹುದಾಗಿದೆ. ಯಾರು ತಮ್ಮ ಮನಸ್ಸನ್ನು ಮತ್ತು ಪ್ರಾಣವನ್ನು ಶಾಂತವಾಗಿಟ್ಟುಕೊಳ್ಳುತ್ತಾರೋ, ಯಾರಿಗೆ ನಿನ್ನ ಸಾಮರ್ಥ್ಯದ ಹತ್ತನೆಯ ಒಂದು ಭಾಗ ಇದ್ದರೂ ಕೂಡ ಈ ಯೋಗವನ್ನು ಮಾಡಬಹುದು. ಅದರ ಬದಲಾಗಿ, ಉದ್ವೇಗ ಮತ್ತು ಶ್ರಮ ಮತ್ತು ಕಷ್ಟಕರವಾದ ಸಾಹಸಕ್ಕೆ ಹೆಚ್ಚಿನದಾದ ಶಕ್ತಿ ಬೇಕು. ನಾನು ಮತ್ತು ಶ್ರೀಮಾತೆಯವರು ಈ ಎಲ್ಲಾ ಮಾರ್ಗಗಳಲ್ಲಿಯೂ ಪ್ರಯತ್ನಿಸಬೇಕು, ಎಲ್ಲಾ ಪದ್ಧತಿಗಳನ್ನು ಪಾಲಿಸಬೇಕು, ಬೆಟ್ಟದಷ್ಟು ಕಷ್ಟಗಳನ್ನು ನಿವಾರಿಸಬೇಕು, ಆಶ್ರಮವಾಸಿಗಳು ಹೊರಗಿನವರಿಗಿಂತ ಹೆಚ್ಚಿನ ಭಾರವನ್ನು ಸಹಿಸಿಕೊಳ್ಳಬೇಕು. ಅತಿ ಹೆಚ್ಚಿನ ಕಷ್ಟಕರ ಪರಿಸ್ಥಿತಿ, ಯುದ್ಧಗಳನ್ನು ಎದುರಿಸಬೇಕು, ಗಾಯಗಳನ್ನು ಸಹಿಸಿಕೊಳ್ಳಬೇಕು, ಅಭೇದ್ಯವಾದ ಕಷ್ಟಕರವಾದ ಕಾನನದಲ್ಲಿ, ಮರುಭೂಮಿಯಲ್ಲಿ ಮಾರ್ಗ ರಚಿಸಬೇಕು, ದುಷ್ಟಶಕ್ತಿಗಳೊಂದಿಗೆ ಸೆಣಸಬೇಕು, ನಮಗಿಂತ ಮುಂಚೆ ಇಂತಹ ಹಾದಿಯಲ್ಲಿ ಯಾರೂ ಸಾಗಿರಲಿಕ್ಕಿಲ್ಲ. ನಮ್ಮ ಯೋಗಪಥದಲ್ಲಿ ಬರೀ ದೈವವನ್ನು ಕೆಳಗಿಳಿಸಿ ತಂದು ಪ್ರತಿಷ್ಠಾಪನೆ ಮಾಡಿದರಷ್ಟೆ ಸಾಲದು, ಮಾನವನಲ್ಲಿರುವ ಊರ್ಧ್ವಮುಖದ ಅಭೀಪ್ಸೆಯನ್ನು ಉಳಿಸಿ, ಅವರಿಗೆ ಸಾಧನೆಯಲ್ಲಿ ಬರುವ ಕಷ್ಟಗಳು, ವಿರೋಧಗಳನ್ನು ನಿವಾರಿಸುವುದು ಮತ್ತು ಸಾಧನೆಯಲ್ಲಿನ ಶ್ರಮಕ್ಕೆ

ನಿಧಾನವಾದ ಗೆಲುವು ಮಾತ್ರ ಸಾಧ್ಯ. ಬೇರೆಯವರಿಗೆ ಇಂತಹ ಅನುಭವಗಳು ಪುನಾರಾವರ್ತನೆಗಳು ಅವಶ್ಯಕತೆಯಿಲ್ಲಾ ಅಥವಾ ಸಹಿಸಬೇಕಿಲ್ಲಾ. ಏಕೆಂದರೆ ನಮ್ಮ ಸಂಪೂರ್ಣವಾದ ಅನುಭವದಿಂದ ಇತರರಿಗೆ ನೇರವಾದ ಮತ್ತು ಸುಲಭವಾದ ಮಾರ್ಗವನ್ನು ತೋರಿಸಬಹುದು. ಅದೂ ಅವರು ಅದನ್ನು ತೆಗೆದುಕೊಳ್ಳಲು ಒಪ್ಪಿದರೆ ಮಾತ್ರ. ಏಕೆಂದರೆ ನಮ್ಮ ಅನುಭವವು ಅದ್ಭುತವಾದ ಪರಿಣಾಮ ಪಡೆದಿದ್ದರಿಂದ, ನಿನಗೆ ಮತ್ತು ಇತರರಿಗೆ ಒತ್ತಾಯಿಸುತ್ತೇವೆ. "ಅಂತರಾತ್ಮದ ವರ್ತನೆಯನ್ನು ಪಡೆಯಿರಿ; ನೇರ ಪ್ರಕಾಶಮಾನದ ಪಥದಲ್ಲಿ ನಡೆಯಿರಿ, ದೈವವು ರಹಸ್ಯವಾಗಿ ಅಥವಾ ಬಹಿರಂಗವಾಗಿ ನಿನ್ನನ್ನು ಮುನ್ನಡೆಸಲಿ – ರಹಸ್ಯವಾಗಿದ್ದರೆ, ದೇವರು ತನ್ನನ್ನು ಹಾಗೆ ಒಳ್ಳೆಯ ಸಮಯದಲ್ಲಿ ಕಾಣಿಸಿಕೊಳ್ಳುತ್ತಾನೆ. – ಕಠಿಣವಾದ, ವಕ್ರವಾದ, ಸುತ್ತುಬಿಸಿದ ಮತ್ತು ಕಷ್ಟಕರವಾದ ಯಾನಕ್ಕೂ ಒತ್ತಾಯಿಸಬೇಡಿ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/94–95**

ನಾನು ಸ್ವತಃ ಪ್ರಕಾಶಮಾನವಾದ ಪಥದಲ್ಲಿ ಚಲಿಸಿದ್ದೇನೆ ಮತ್ತು ಅದನ್ನು ಕಷ್ಟದಿಂದ, ದುಃಖದಿಂದ ಮತ್ತು ಅಪಾಯದಿಂದ ಮುಕ್ತಗೊಳಿಸಿದ್ದೇನೆ ಎಂದು ಅಲ್ಲಾ. ನಾನು ನನ್ನ ಅನುಭವಗಳ ಪಾಲನ್ನು ಮತ್ತು ಶ್ರೀಮಾತೆಯವರು ಇನ್ನು ಹತ್ತುಪಟ್ಟು ಹೆಚ್ಚು ತಮ್ಮ ಪಾಲನ್ನು ಹೊಂದಿದ್ದಾರೆ. ಏಕೆಂದರೆ ಈ ಪಥದಲ್ಲಿನ ಸಾಧಕರು, ಈ ಎಲ್ಲವುಗಳನ್ನು ಎದುರಿಸಿ ಗೆಲ್ಲಬೇಕು. ನಾವು ಎದುರಿಸಿದ ಕಷ್ಟಗಳು ಸಾಧಕರಿಗೆ ಬರಬಾರದು; ನಾವು ನೂರಾರು ಸಲ (ಆದಾಗ್ಯೂ ಇದು ಬಹಳ ಕಡಿಮೆ) ಸಂಘರ್ಷಕ್ಕೆ ಒಳಗಾಗಿದ್ದೇವೆ, ಆದರೆ ಕೊನೆಗೆ ಜಯಿಸಿದ್ದೇವೆ; ಈ ಎಲ್ಲವುಗಳು, ನಾವು ಪೂರ್ಣ ಪರಿಪೂರ್ಣತೆಯನ್ನು ಹೊಂದುವವರೆಗೆ ವಿರೋಧಿಸುತ್ತಿರುತ್ತವೆ. ಬೇರೆಯವರಿಗೆ ಆ ಕಷ್ಟಗಳ ಅವಶ್ಯಕತೆಯಿದೆಯೊಂದು ನಾವು ಒಪ್ಪಿಗೆ ಕೊಟ್ಟಿಲ್ಲಾ. ನಾವು ನಡೆದ ಕಷ್ಟದ ಪಥವನ್ನು, ಈಗಿನಿಂದ ಇದೋ ಸುಲಭವಾದ ಪಥವನ್ನಾಗಿ ಮಾಡಿದ್ದೇವೆ. ಈ ಒಂದು ಉದ್ದೇಶದಿಂದಲೇ ಶ್ರೀಮಾತೆಯವರು ದೈವವನ್ನು ಪ್ರಾರ್ಥಿಸಿ, ಈ ಯೋಗ ಮಾರ್ಗದಲ್ಲಿ ಬರುವ ಕಷ್ಟಗಳು, ಅಪಾಯಗಳು ಮತ್ತು ದುಃಖಗಳು ಅವಶ್ಯಕತೆ ಇದ್ದರೆ ನನಗೆ ಬರಲಿ, ಸಾಧಕರಿಗೆ ಬೇಡವೆಂದು ಕೇಳಿಕೊಂಡಿದ್ದಾರೆ. ಇಲ್ಲಿಯವರೆಗೆ ಕೇಳಿಬಂದ ವಿಚಾರ

ಎಂದರೆ ಯಾರು ಶ್ರೀಮಾತೆಯವರಲ್ಲಿ ವಿಧೇಯರಾಗಿ ನಂಬಿಕೆ ಇಟ್ಟಿದ್ದಾರೋ ಅವರಿಗೆ ವರ್ಷಾಂತರ ಕಾಲ ಕಷ್ಟವಾದ ಪಥ ಈಗ ಪ್ರಕಾಶಮಾನವಾದ ಸುಲಭ ಪಥವಾಗಿ ಮಾರ್ಪಟ್ಟಿದೆ. ನಂಬಿಕೆ ಇಟ್ಟವರಿಗೆಲ್ಲಾ ಈ ಹಾದಿ ಸುಗಮವಾಗಿ ಕಂಡಿದೆ. ಮತ್ತೆ ಅದು ಕಷ್ಟಕರವಾಗಿ ಕಂಡಿದ್ದೆ ಆದರೆ ಅದಕ್ಕೆಲ್ಲಾ ಅಪನಂಬಿಕೆ, ದಂಗೆ, ಅಭಿಮಾನ ಅಥವಾ ಅವರಿಗೆ ಬಂದ ಇತರೆ ಅಜ್ಞಾನಗಳು ಕಾರಣವಾಗಿದೆ. ಪ್ರಕಾಶಮಾನವಾದ ಪಥ ಬರೀ ನೀತಿ ಕಥೆ ಅಲ್ಲಾ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/471–72**

ಶ್ರೀಮಾತೆಯವರು ಬಹಳ ಸುಲಭವಾಗಿ ನೀನು ನನ್ನನ್ನು ಪ್ರಾರ್ಥಿಸಿದ್ದೆ ಆದರೆ, ಆಗ ತ್ವರಿತವಾಗಿ ಸಹಾಯ ಸಿಗುತ್ತದೆ. (ನಿನ್ನ ಪ್ರಕಾರ ಶ್ರೀಕೃಷ್ಣನಿಗೆ ನೀನು ಪ್ರಾರ್ಥಿಸಿದಾಗ ಪರಿಣಾಮವಾಗಿಲ್ಲ) ಸುಮ್ಮನೆ ನಿನಗೆ ಸಹಾಯ ಮಾಡುವುದಷ್ಟೆ ಆಗಿದೆ – ಆಕೆ ನಿನಗೆ ಮತ್ತು ಇತರರಿಗೆ ಸಮೀಪದಲ್ಲಿದ್ದಾಳೆ. ಎಷ್ಟು ಜನ ಬೇಕಾದರೂ ಅವರಿಗೆ ನೋವಾಗಿದ್ದಾಗಲಾಗಲೀ ಮತ್ತು ಸುಲಭವಾಗಿ ಪ್ರಾರ್ಥಿಸಿ ಸಹಾಯ ಪಡೆಯಬಹುದು. ಖಂಡಿತವಾಗಿ ಏನನ್ನು ಪ್ರಶ್ನಿಸಿದೇ ಮತ್ತು ಅನುಮಾನವಿಲ್ಲದೆ. ಈಗಲೂ ಸಹಿತ ನಿನ್ನಂತಹ ಅನಾರೋಗ್ಯದ ಸ್ಥಿತಿಯಿಂದ ಹೊರಬರುತ್ತಿದ್ದಾರೆ, ಅವರಿಗೆ ಬಹಳ ವರ್ಷಗಳ ಕಾಲ ಒಂದು ರೀತಿಯ ಅಜ್ಞಾನದ ನಿರಾಶೆ ಆವರಿಸಿದೆ. ಬರೀ ಸೂಚನೆಗಳ ಪೈಕಿ "ಈ ಯೋಗ ನನಗೆ ಸೂಕ್ತವಾದುದಲ್ಲ, ತಕ್ಕ ಪ್ರತ್ಯುತ್ತರವಿಲ್ಲಾ, ಅನುಭವಗಳೂ ಆಗುತ್ತಿಲ್ಲಾ, ದೈವವು ನನ್ನನ್ನು ಪ್ರೀತಿಸುತ್ತಿಲ್ಲಾ, ಶ್ರೀಮಾತಾ ದೂರ ಬಹಳ ದೂರದಲ್ಲಿದ್ದಾರೆ, ನಾನು ಎಲ್ಲಿಯವರೆಗೆ ಮುಂದುವರೆಯಬೇಕು." ಎಂದೆಲ್ಲಾ ಹೇಳಿ ಯಾರಾದರೂ ಇದನ್ನು ಏಕೆ ಇಷ್ಟಪಡಬೇಕು ಎಂದು ವಿರುದ್ಧವಾಗಿ ಓಡುವುದು, ಆತ್ಮಹತ್ಯೆ ಇತ್ಯಾದಿ ಯೋಚಿಸುತ್ತಿದ್ದವರೂ ಸಹಿತ ಈಗ ಅವರೆಲ್ಲಾ ಹೊರಬರುತ್ತಿದ್ದಾರೆ ಮತ್ತು ಇದ್ದಕ್ಕಿದ್ದಂತೆ ಅವರೆಲ್ಲಾ ಸುಲಭವಾಗಿ ಮತ್ತು ನೇರವಾಗಿ ಶ್ರೀಮಾತೆಯವರ ಕಡೆಗೆ ಹೊರಳುತ್ತಿದ್ದಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/121 – ಶ್ರೀ ಅರವಿಂದರು**

# ಸಾಧನೆಯೇ ಪ್ರಾರ್ಥನೆ

– ಅನುವಾದ: ಪುಟ್ಟು ಕುಲಕರ್ಣಿ

## ದೈನಂದಿನ ಪ್ರಾರ್ಥನೆಗಳು

*ನಾನು ಇಲ್ಲಿ ಹಲವಾರು ಪ್ರಾರ್ಥನೆಗಳ ವೈವಿಧ್ಯವನ್ನು ಉಲ್ಲೇಖಿಸುತ್ತಿದ್ದೇನೆ. ಇವುಗಳಲ್ಲಿ ಯಾವುದು ಆಂತರಂಗಿಕ ಅಥವಾ ಬಾಹ್ಯವಾದುದು, ಯಾವುದು ಸೂಕ್ತ ಅಥವಾ ಸೂಕ್ತವಲ್ಲದ್ದು, ಯಾವುದು ಸಹಕಾರಿ ಅಥವಾ ಅಡೆ–ತಡೆಯನ್ನು ಒಡ್ಡುವದು, ಅಥವಾ ಅವುಗಳನ್ನು ಪರಿಶುದ್ಧಗೊಳಿಸಲು ಯಾವ ತಿದ್ದುಪಡಿಯನ್ನು ಅಳವಡಿಸಿಕೊಳ್ಳಬಹುದು ಎನ್ನುವದನ್ನು ಅನುಷ್ಠಾನಿಸಲು ಅರಿತುಕೊಂಡಲ್ಲಿ ಆಭಾರಿಯಾಗಿರುತ್ತೇನೆ.*

*1. ರಾತ್ರಿಯ ಸಮಯದಲ್ಲಿ ನಾನು ಅಧ್ಯಯನಕ್ಕೆ (ಓದುವದಕ್ಕೆ) ತೊಡಗಿದಾಗ ಅನಿರೀಕ್ಷಿತವಾಗಿ ನಿದ್ರೆಯು ಎರಗಿ ಬರುತ್ತದೆ. ಆಗ ಈ ದಾಳಿಯಿಂದ ಮುಕ್ತಗೊಳಿಸು ಎಂದು ನಾನು ಶ್ರೀಮಾತೆಯಲ್ಲಿ ಪ್ರಾರ್ಥಿಸುತ್ತೇನೆ.*

ಒಂದು ವೇಳೆ ನಿಮ್ಮ ಅಧ್ಯಯನವು ಸಾಧನೆಯ ಒಂದು ಅಂಶವೇ ಆಗಿದ್ದಲ್ಲಿ ಅದು ಅತ್ಯುತ್ತಮ.

*2. ನಾನು ನಿದ್ರೆಯಲ್ಲಿ ತೊಡಗಿದ್ದಾಗ, ನನ್ನ ಈ ನಿದ್ರಾಸಮಯದಲ್ಲಿನ ಸಾಧನೆಯನ್ನು ಶ್ರೀಮಾತೆಯವರ ಶಕ್ತಿಯಲ್ಲಿಯೇ ಬಳಸಿಕೊಳ್ಳುವಂತೆ ನಾನು ಶ್ರೀಮಾತೆಯವರನ್ನು ಪ್ರಾರ್ಥಿಸುತ್ತೇನೆ. ಜೊತೆಗೆ ನನ್ನ ನಿದ್ರೆಯೂ ಸಹಿತ ಪ್ರಜ್ಞಾಪೂರ್ವಕವಾಗಿ ಹಾಗು ಶಾಂತ ತೇಜದಿಂದ ಕೂಡಿರುವಂತೆ ಅನುಗ್ರಹಿಸು, ನಿದ್ರಾಸ್ಥಿತಿಯಲ್ಲಿರುವ ನನ್ನನ್ನು ರಕ್ಷಿಸು, ಶ್ರೀಮಾತೆಯ ಚೈತನ್ಯವನ್ನು ಸದಾ ನನ್ನಲ್ಲಿ ನೆಲೆಸುವಂತೆ ಕೃಪೆದೋರಲಿ ಎಂದು ಪಾರ್ಥಿಸುತ್ತೇನೆ.*

*3. ನಾನು ಯಾವುದೇ ಸಂದರ್ಭದಲ್ಲಿಯೂ ನಿದ್ರೆಯಿಂದ ಎಚ್ಚರಗೊಂಡಾಗ, ನೀನು ಸದಾ ನನ್ನ ಹತ್ತಿರವೇ ಇರು ಹಾಗೂ ನನ್ನನ್ನು ರಕ್ಷಿಸು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.*

ಇವೆರಡೂ ಸಾಧನೆಗಾಗಿ ಇರುವ ಪಥಗಳಾಗಿವೆ.

*4. ನಾನು ಹೊರಗೆ ಹೋಗುತ್ತಿರುವಾಗ ಮತ್ತು ಅಡ್ಡಾಡುತ್ತಿರುವಾಗ, ಆ ಸಮಯದಲ್ಲಿ ಮತ್ತೂ ಮತ್ತೂ ಚಟುವಟಿಕೆಯಿಂದ ಕೂಡಿರುವಂತೆ, ಹೆಚ್ಚಿನ ಸಾಮರ್ಥ್ಯವನ್ನು ಹಾಗೂ ಆರೋಗ್ಯವನ್ನು ನೀಡು ಎಂದು ಶ್ರೀಮಾತೆಯಲ್ಲಿ ಪ್ರಾರ್ಥಿಸುತ್ತೇನೆ. ಮತ್ತೆ ಆ ಸಹಾಯಕ್ಕಾಗಿ (ಕೃಪೆಗಾಗಿ) ನಾನು ಸದಾ ಶ್ರೀಮಾತೆಗೆ ಕೃತಜ್ಞನಾಗಿರುತ್ತೇನೆ.*

ಒಂದು ವೇಳೆ ಆರೋಗ್ಯ ಮತ್ತು ಸಾಮರ್ಥ್ಯಗಳನ್ನು ಸಾಧನೆಗಾಗಿ ಅವಶ್ಯಕವೆಂದು ಅರಿತು ವಿನಂತಿಸಿಕೊಳ್ಳುತ್ತಿದ್ದಲ್ಲಿ ಹಾಗೂ ಇವು ಪರಿಪೂರ್ಣತೆಯ ಎಡೆಗೆ ಪ್ರಗತಿ ಹೊಂದುವಲ್ಲಿ ಅವಶ್ಯವಾದ ಉಪಕರಣವಾಗಿದ್ದಲ್ಲಿ, ಆಗ ಅದು ಸೂಕ್ತವಾದ ಅಂಶವಾಗಿರುತ್ತದೆ.

*5. ನಾನು ಅಡ್ಡಾಡುತ್ತಿರುವಾಗ, ರಸ್ತೆಯಲ್ಲಿ ನಾಯಿಯೊಂದು ಕಂಡಲ್ಲಿ, ತಕ್ಷಣವೇ ಆ ನಾಯಿಯಿಂದ ರಕ್ಷಿಸು, ನನ್ನಲ್ಲಿ ಬಂದಿರುವ ಭಯವನ್ನು ಹೋಗಲಾಡಿಸು ಎಂದು ಹಾಗೂ ರಕ್ಷಿಸು ಎಂದು ಶ್ರೀಮಾತೆಯಲ್ಲಿ ಪ್ರಾರ್ಥಿಸುತ್ತೇನೆ.*

ರಕ್ಷಣೆಯ ಸಲುವಾಗಿ ಇರುವ (ಆರ್ತ) ಕರೆಯು ಯಾವಾಗಲೂ ಸ್ವೀಕರಿಸಲ್ಪಡುವದೇ ಆಗಿರುತ್ತದೆ. ಭಯದ ನಿವಾರಣೆಯೇ ಸಾಧನೆಯ ಒಂದು ಅಂಶವಾಗಿರುತ್ತದೆ.

*6. ನಾನು ಆಹಾರ ಸ್ವೀಕರಿಸುತ್ತಿರುವಾಗ, ನಾನು ಸ್ವೀಕರಿಸುತ್ತಿರುವ ಪ್ರತಿಯೊಂದು ತುತ್ತೂ ಸಹಿತ ಶ್ರೀಮಾತೆಗೆ ನೀಡುತ್ತಿರುವ ತುತ್ತು ಆಗಿರುವಂತೆ, ಅಂತಹ ಶಕ್ತಿ ಒದಗಿಸು ಎಂದು ನಾನು ಶ್ರೀಮಾತೆಯನ್ನು ಪ್ರಾರ್ಥಿಸುತ್ತೇನೆ. ಪ್ರತಿಯೊಂದು ತುತ್ತೂ ಸಹಿತ ಸುಲಭವಾಗಿ ಜೀರ್ಣವಾಗುವಂತೆ, ನನ್ನ ಚೇತನವು ಸಮಾನತೆಯಲ್ಲಿ ಹಾಗೂ ನಿರ್ಮಮಕಾರದ ಹಂತವನ್ನು ತಲುಪುವಂತೆ ಪ್ರಗತಿಗೊಳಿಸು, ಈ ಮೂಲಕ ನಾನು ಯಾವುದೇ ಆಹಾರವನ್ನು ತೆಗೆದುಕೊಂಡರೂ, ಅದೇ "ವಿಶ್ವದ ಆನಂದ ರಸ"ಕ್ಕೆ ಸಮಸಮವಾಗಿರುವಂತೆ ಮಾಡು, ಯಾವುದೇ ಒತ್ತಾಯವಿಲ್ಲದೇ ಅಥವಾ*

*ಆಕಾಂಕ್ಷೆ ಇಲ್ಲದೇ ಅಥವಾ ಯಾವುದೇ ಅತೃಪ್ತಿ ಅಥವಾ ಆಸೆ ಇಲ್ಲ ಹಾಗೆ ನನ್ನನ್ನು ರೂಪಿಸು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.*

ಇದೂ ಸಹಿತ ಸಾಧನೆಯ ಒಂದು ಅಂಶವಾಗಿರುತ್ತದೆ.

*7. ನಾನು ಯಾವಾಗ ಕಾರ್ಯಪ್ರವೃತ್ತನಾಗುತ್ತೇನೆಯೋ, ಆಗ ಆ ಕಾರ್ಯವನ್ನು ಪೂರೈಸುವ ಶಕ್ತಿಯನ್ನು ಒದಗಿಸು ಎಂದು ಶ್ರೀಮಾತೆಯಲ್ಲಿ ಪ್ರಾರ್ಥಿಸುತ್ತೇನೆ. ನನಗೆ ಸಹಾಯ ಮಾಡು ಮತ್ತು ಮಾಡುತ್ತಿರುವ ಕಾರ್ಯವನ್ನು ಸೂಕ್ತವಾಗಿ ಮಾಡುವಂತೆ, ಕಾಳಜಿಪೂರ್ವಕವಾಗಿ ಪೂರೈಸುವಂತೆ ಹಾಗೂ ಪ್ರೇಮಪೂರ್ವಕವಾಗಿ ಸಮರ್ಪಣಾ ಮನೋಭಾವದಿಂದ, ಸಂತೋಷದಿಂದ, ಶ್ರೀಮಾತೆಯ ಸ್ಮರಣೆಯೊಂದಿಗೇ ಜೊತೆಗೆ ಆತ್ಮದ ಅನುಭವದೊಂದಿಗೆ, ಅದು ಒದಗಿಸುವ ಸಹಕಾರದೊಂದಿಗೆ ಮತ್ತು ಯಾವುದೇ ಅಹಂ, ಆಶೆಗಳಿಲ್ಲದೇ ಇರುವಂತೆ ನನಗೆ ಶ್ರೀಮಾತೆಯ ಸಹಾಯ ದೊರೆಯಲಿ ಎಂದು ಪ್ರಾರ್ಥಿಸುತ್ತೇನೆ.*

ಇದೂ ಸಹಿತ ಸಾಧನೆಯ ಒಂದು ಅಂಶವಾಗಿರುತ್ತದೆ.

*8. ಕಾರ್ಯ ಮಾಡುತ್ತಿರುವ ಅವಧಿಯ ಮಧ್ಯದಲ್ಲಿ ಕೊಂಚ ವಿಶ್ರಾಂತಿಯ ಸಮಯದಲ್ಲೂ ನಾನು ಶಕ್ತಿಗಾಗಿ, ಸಹಾಯಕ್ಕಾಗಿ ಹಾಗೂ ಶಾಶ್ವತವಾದ ಸ್ಮರಣೆಗಾಗಿ ಶ್ರೀಮಾತೆಯವರನ್ನು ಪ್ರಾರ್ಥಿಸುತ್ತೇನೆ.*

ಇದೂ ಸಹಿತ ಒಂದು ಅಂಶವಾಗಿದೆ.

*9. ಯಾವಾಗ ಕೆಟ್ಟ ಅಥವಾ ಪರಿಶುದ್ಧವಲ್ಲದ ಚಿಂತನೆಗಳು ಬರುವವೋ, ಅಂಥ ದೃಶ್ಯಗಳು ಕಾಣುವವೋ ಅಥವಾ ಅಂತಹ ಸಂವೇದನೆಯು ನನ್ನಲ್ಲಿ ಮೂಡುವದೋ, ಅದರಿಂದ ನನ್ನನ್ನು ಪಾರು ಮಾಡು, ಮುಕ್ತಗೊಳಿಸು ಹಾಗೂ ಶುದ್ಧಗೊಳಿಸು ಎಂದು ಪ್ರಾರ್ಥಿಸುತ್ತೇನೆ.*

ಇದೂ ಸಹಿತ ಸಾಧನಾ ಪಥದ ಒಂದು ಅಂಶವಾಗಿದೆ.

*10. ನಾನು ಅಧ್ಯಯನದಲ್ಲಿ ಇರುವಾಗ, ಎಲ್ಲವೂ ಶೀಘ್ರಾತಿಶೀಘ್ರದಲ್ಲಿಯೇ ಅರಿವಿಗೆ ಬರುವಂತಾಗಲಿ, ಈ ರೀತಿಯಲ್ಲಿಯೇ ವಿಷಯವನ್ನು ಗ್ರಹಿಸುವಂತೆ*

*ಹಾಗೂ ಸರ್ವ ವಿಷಯಗಳನ್ನೂ ಕರಗತ ಮಾಡಿಕೊಳ್ಳುವಂತೆ ಮಾಡು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.*

ಒಂದು ವೇಳೆ ಇದು 'ಸಾಧನೆ' ಆಗಿದ್ದಲ್ಲಿ ಅಥವಾ ಸಾಧನಾ ಪಥದಲ್ಲಿ ಪ್ರಗತಿಗಾಗಿ ಉಪಯೋಗವಾಗುತ್ತಿರುವ ಒಂದು ಉಪಕರಣವಾಗಿದ್ದಲ್ಲಿ, ಆಗ ಮಾತ್ರ ಇದು ಸೂಕ್ತವಾದ ಅಂಶವಾಗಿರುತ್ತದೆ.

*11. ನಾನು ಮಾಡುತ್ತಿರುವ ಕಾರ್ಯದಲ್ಲಿ ಯಾವುದಾದರೂ ತಪ್ಪು ಘಟಿಸಿದಲ್ಲಿ, ನಾನು ಮತ್ತೂ ಹೆಚ್ಚು ಜಾಗರೂಕನಾಗಿರುವಂತೆ, ಪ್ರಜ್ಞಾವಂತನಾಗುವದಕ್ಕೆ ಹಾಗೂ ಅರ್ಧಂಬರ್ಧ ಕೆಲಸ ಮಾಡದಂತೆ ಹರಸು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.*

ಇದು ಸಹಿತ ಸಾಧನೆಯ ಒಂದು ಅಂಶವಾಗಿದೆ.

*12. ನಾನು ನನ್ನ ಮಿತ್ರನಿಗೆ ಪ್ರಸಾದದ ಭಾಂಗಿ(ಪಾಕೆಟ್)ಗಳನ್ನು ನೋಂದಣಿ ವ್ಯವಸ್ಥೆಯಲ್ಲಿ ಅಂಚೆ ಕಚೇರಿಯ ಮೂಲಕ ರವಾನಿಸುತ್ತಿರುವಾಗ, ಈ ಪ್ರಸಾದವು ಅವನಿಗೆ ಯಾವುದೇ ವಿಳಂಬವಿಲ್ಲದೇ ಹಾಗೂ ಸುರಕ್ಷಿತವಾದ ಸ್ಥಿತಿಯಲ್ಲಿ ತಲುಪಲಿ ಎಂದು ಪ್ರಾಥಿಸುತ್ತೇನೆ.*

ಇದು ಈಡೇರಬಹುದು. ಒಂದು ವೇಳೆ ಸಮಯದ ವ್ಯರ್ಥ ವಿಳಂಬವನ್ನು ಕಡಿಮೆ ಮಾಡುವದೂ ಸಹಿತ ಸಾಧನೆಯ ಪಥದ ನಿಬಂಧನೆಯ ಒಂದು ಅಂಶವಾಗಿರುತ್ತದೆ.

*13. ನಾನು ಧ್ಯಾನಕ್ಕೆ ಆಸೀನನಾದಾಗ, ಆ ಧ್ಯಾನವನ್ನು ಶ್ರೀಮಾತೆಯು ಸ್ವೀಕರಿಸಿ, ಮತ್ತೂ ಗಾಢವಾದ ಧ್ಯಾನದ ಸ್ಥಿತಿಯನ್ನು ಒದಗಿಸು, ನಿಶ್ಚಲವಾದ, ಲಕ್ಷ್ಯಪೂರ್ವಕವಾದ ಹಾಗೂ ಬಾಹ್ಯ ಸಂಗತಿಗಳ ಚಿಂತನಗಳ ಯಾವುದೇ ಆಘಾತದಿಂದ ವಿಚಲಿತನಾಗದಂತೆ, ಅಶಾಂತತೆಯ ವ್ಯಾಪ್ತತೆಯಿಂದ ಮುಕ್ತವಾಗಿರುವಂತೆ ಕೃಪೆ ತೋರು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.*

ಇದೂ ಸಹಿತ ಸಾಧನೆಯ ಒಂದು ಅಂಶವಾಗಿದೆ.

*14. ಆತ್ಮಗ್ಲಾನಿಗೆ ಒಳಗಾದಾಗ, ತೊಂದರೆಗಳಿಗೆ ಸಿಲುಕಿದಾಗ, ತಪ್ಪು ಸಲಹೆಯಿಂದಾಗಿ, ಸಂಶಯದಿಂದ, ಸ್ಥಗಿತಗೊಳ್ಳುತ್ತಿದ್ದಲ್ಲಿ ಅಂತಹ*

*ಯಾವುದೇ ಪ್ರಸಂಗವಿರುವಲ್ಲಿ ಅಥವಾ ಅಂತಹ ಘಟನಾವಳಿಗಳು ಇರುವಲ್ಲಿ, ಆಗ ನನಗೆ ಸ್ಥೈರ್ಯವನ್ನೂ, ವಿಶ್ವಾಸವನ್ನೂ ತುಂಬುವಂತೆ ಹಾಗೂ ಪ್ರತಿಯೊಂದನ್ನೂ ಎದುರಿಸುವಂತೆ ಹಾಗೂ ಅದರಿಂದ ಹೊರಬಂದು ಸಮರ್ಥನಾಗಿರುವಂತೆ ಕೃಪೆದೋರು ಎಂದು ಶ್ರೀಮಾತೆಯಲ್ಲಿ ಪ್ರಾರ್ಥಿಸುತ್ತೇನೆ.*

ಇದೂ ಸಹಿತ ಸಾಧನೆಯ ಒಂದು ಅಂಶವಾಗಿದೆ.

*15. ಇನ್ನುಳಿದ ಯಾವುದೇ ಸಮಯದಲ್ಲಿಯೂ ಸಹಿತ, ನನಗೆ ಸಾಧ್ಯವಿದ್ದಷ್ಟರವರೆಗೂ, ಸದಾ ನನ್ನಲ್ಲಿ ಶಾಂತಿ, ಶಕ್ತಿ, ಪ್ರಕಾಶ (ಜ್ಞಾನ) ಮುಂತಾದವುಗಳೆಲ್ಲ ತುಂಬಿಕೊಂಡಿರಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಅಥವಾ ಪ್ರಾರ್ಥನೆಯು ಆಶಿಸುವ ಅಂತಹ ಉಳಿದ ವಿಧಾನಗಳಲ್ಲಿ ನಿವೇದಿಸಿಕೊಳ್ಳುತ್ತೇನೆ. ಮತ್ತೆ ನನಗೆ ಸಹಕಾರಿಯಾಗುತ್ತಿರುವದರ ಸಲುವಾಗಿ, ನನ್ನನ್ನು ಸಾಮರ್ಥ್ಯಶೀಲನನ್ನಾಗಿಸುವದಕ್ಕಾಗಿ ಹಾಗೂ ಸದಾ ನನ್ನ ಜೊತೆಯಲ್ಲಿಯೇ ನೆಲೆಸಿರುವದಕ್ಕಾಗಿ ಕೃತಜ್ಞತೆಯನ್ನು ಹೇಳುತ್ತೇನೆ.*

ಇದೂ ಸಹಿತ ಸಾಧನೆಯ ಒಂದು ಅಂಶವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/315–17 – ಶ್ರೀ ಅರವಿಂದರು**

## ದೈನಂದಿನ ಕಾರ್ಯಕ್ರಮ

ಭೌತಿಕ, ಮಾನಸಿಕ ಹಾಗೂ ಅತ್ಯಂತ ಮಹತ್ವಪೂರ್ಣವಾದ ಪ್ರಗತಿಗೆ ನಿಗದಿತಗೊಂಡ ಯಾಂತ್ರಿಕ–ವ್ಯವಸ್ಥೆಯಲ್ಲಿ ಕ್ರಮಬದ್ಧವಾದ ಕಾರ್ಯಕ್ರಮವೊಂದು ಅನಿವಾರ್ಯವಾಗಿಯೇ ರೂಪಿಸಲ್ಪಟ್ಟಿರುತ್ತದೆ, ನಿಶ್ಚಿತಗೊಳಿಸಲ್ಪಟ್ಟರುತ್ತದೆ; ಆದರೆ ಈ ಯಾಂತ್ರಿಕ ಕಠೋರತೆಯು ಅಧ್ಯಾತ್ಮಿಕ ಪ್ರಗತಿಯ ಮೇಲೆ ಅತ್ಯಲ್ಪ ಪ್ರಮಾಣದ ಅಥವಾ ಇಲ್ಲವೇ ಇಲ್ಲ ಎನ್ನುವಷ್ಟು ಪರಿಣಾಮ ತೋರುತ್ತದೆ. ಆದಾಗ್ಯೂ ಪರಿಪೂರ್ಣ ಪ್ರಾಮಾಣಿಕತೆಯ ಸಹಜತೆಯು ಮಾತ್ರ ಅನಿವಾರ್ಯವೇ ಆಗಿರುತ್ತದೆ.

ಶ್ರೀ ಅರವಿಂದರು ಈ ವಿಷಯವಾಗಿ ಅತ್ಯಂತ ಸ್ಪಷ್ಟವಾಗಿ ಬರೆದಿದ್ದಾರೆ. ಅವರು ಬರೆದಿರುವ 'ಯೋಗ ಸಮನ್ವಯ'(ಸಿಂಥೇಸಿಸ್ ಆಫ್ ಯೋಗ)ದಲ್ಲಿ ಇದರ ವಿವರಗಳು ಕಾಣುತ್ತಿವೆ.

ಆದರೂ ನಿಮ್ಮ ಪಥದಲ್ಲಿ ಒಂದು ಪ್ರಾರಂಭಿಕ ಸಹಾಯವನ್ನು ರೂಪಿಸಲು, ನಾನು ಈ ರೀತಿಯಾಗಿ ಹೇಳುತ್ತೇನೆ: (1) ಪ್ರತಿದಿನ ಬೆಳಿಗ್ಗೆ ನೀವು ನಿದ್ರೆಯಿಂದ ಎಚ್ಚರಗೊಳ್ಳುವ ಹಂತದಲ್ಲಿ, ನಿಮ್ಮ ದೈನಂದಿನ ಕಾರ್ಯಕ್ರಮವನ್ನು ಪ್ರಾರಂಭಿಸುವ ಮುನ್ನ, ಈ ದಿನವನ್ನು ದಿವ್ಯತ್ವಕ್ಕೆ ಅರ್ಪಿಸುವದು ಉತ್ತಮವಾಗಿರುತ್ತದೆ. ಯಾರು ಏನೆಲ್ಲ ಯೋಚಿಸುತ್ತಾರೋ, ಅವೆಲ್ಲವೂ ಒಂದೇ ಆಗಿದ್ದು ಅವೆಲ್ಲವನ್ನೂ ಅವನು ಅನುಷ್ಠಾನಿಸುತ್ತಾನೆ. (2) ರಾತ್ರಿಯ ಸಮಯದಲ್ಲಿ, ಅಂದರೆ ಮಲಗುವದಕ್ಕಿಂತ ಮುಂಚೆ, ಇಡೀ ದಿನದಲ್ಲಿನ ಘಟನೆಗಳನ್ನು ಪುನರ್–ಅವಲೋಕನ ಮಾಡಿಕೊಳ್ಳುವದು ಒಳ್ಳೆಯದು. ಯಾರೇ ಆಗಲಿ, ಯಾವುದೇ ಘಟನೆಯಾಗಲಿ ಮರೆತಿದ್ದಲ್ಲಿ, ಅಥವಾ ನಿರಾಕರಿಸಿದ್ದಲ್ಲಿ, ಅದೂ ತನ್ನದೇ ಸ್ವಂತ ಅಥವಾ ಮತ್ತಿತರರ ಕ್ರಿಯೆಗಳನ್ನು ನಿರಾಕರಿಸಿದ್ದಾಗಲಿ ನಡೆದಿದ್ದರೆ, ಆ ಘಟನೆಯು ಮತ್ತೆ ಮುಂದೆ ಮರುಕಳಿಸದಂತೆ ಪ್ರಾರ್ಥಿಸಿ ಅಥವಾ ಅದಕ್ಕಾಗಿ ಅಭೀಪ್ಸೆ ಹೊಂದಿರಿ.

ಇದು ಅತ್ಯಂತ ಸುಲಭವಾದ ಮಾರ್ಗ, ಅತ್ಯಂತ ಚಿಕ್ಕದಾಗಿಯೇ ಪ್ರಾರಂಭಗೊಂಡರೂ ಸಹಿತ, ಅಲ್ಲಿರುವ ನಿಮ್ಮ ಪ್ರಾಮಾಣಿಕತೆಯ ಲಕ್ಷ್ಯದೊಂದಿಗೆ ಅದು ಪ್ರಗತಿ ಹೊಂದುತ್ತ ಸಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/315–16**

ಪ್ರತಿ ದಿನ ರಾತ್ರಿ ನಿದ್ರೆಗೆ ಹೋಗುವ ಮುನ್ನ, ಆ ದಿನದಲ್ಲಿ ಘಟಿಸಿರುವ ಯಾವುದೇ ತಪ್ಪುಗಳು ಇದ್ದಲ್ಲಿ, ಅಂತಹ ತಪ್ಪುಗಳು ಮತ್ತೆ ಮುಂದೆ ಘಟಿಸದಂತೆ ಕಡ್ಡಾಯವಾಗಿ ಪ್ರಾರ್ಥಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/239**

ನಿದ್ರೆಯಿಂದ ಎಚ್ಚರವಾಗುವ ಸಮಯದಲ್ಲಿ, ಕೆಲವು ಕ್ಷಣಗಳ ಕಾಲ ಶಾಂತವಾಗಿ, ಪ್ರಶಾಂತವಾಗಿ ಇದ್ದು, ಮತ್ತೆ ಆಗಮಿಸಲಿರುವ ದಿನದಲ್ಲಿನ ದಿವ್ಯತ್ವದ ಕಡೆಗೆ ಲಕ್ಷ್ಯ ಕೇಂದ್ರೀಕರಿಸಿಕೊಳ್ಳಿರಿ, ಸದಾ ಅವರನ್ನು ಸ್ಮರಿಸುತ್ತಾ, ಎಲ್ಲ ಸಂದರ್ಭಗಳಲ್ಲಿಯೂ ಅವನನ್ನು ಸ್ಮರಿಸುತ್ತಾ ಪ್ರಾರ್ಥಿಸಿರಿ.

ನಿದ್ರೆಗೆ ತೆರಳುವ ಮುನ್ನವೂ ಸಹಿತ, ನೀವು ಕೆಲವು ಕ್ಷಣಗಳ ಕಾಲ ನಿಮ್ಮಲ್ಲಿಯೇ ಲಕ್ಷ್ಯ ಕೇಂದ್ರೀಕರಿಸಿಕೊಂಡು, ಘಟಿಸಿ ಹೋಗಿರುವ ಆ ದಿನವನ್ನು ಸ್ಮರಣೆಗೆ ತಂದುಕೊಳ್ಳಿರಿ. ನೀವು ಯಾವಾಗ ಮತ್ತು ಎಲ್ಲಿ ಈ ದಿವ್ಯತ್ವವನ್ನು ಮರೆತು ಕಾರ್ಯ ನಡೆಸಿದ್ದೀರಿ ಎನ್ನುವದನ್ನು ನೆನಪಿಸಿಕೊಳ್ಳಿ. ಮತ್ತೆ ಆ ರೀತಿಯಲ್ಲಿ ಘಟನೆಗಳು ಬಾರದ ಹಾಗೆ ಪ್ರಾರ್ಥನೆ ಸಲ್ಲಿಸಿರಿ.

*

ಪ್ರತಿದಿನ ಎಚ್ಚರಗೊಳ್ಳುವ ಮುನ್ನ ಇಡೀ ದಿನವನ್ನು ಲಕ್ಷ್ಯಪೂರ್ವಕವಾಗಿಯೇ ಇರುವಂತೆ ನಾವೆಲ್ಲ ಪ್ರಾರ್ಥನೆ ಸಲ್ಲಿಸೋಣ, ನಾವು ಪ್ರಾರ್ಥನೆಗೈದಿರುವಂತೆಯೇ ಕ್ರಿಯೆಗೂ ತೊಡಗಿಕೊಳ್ಳೋಣ. ತನ್ಮಯತೆಯಲ್ಲಿಯೇ ಕಾರ್ಯಪ್ರವೃತ್ತರಾಗುವದೇ ದೇಹವು ದಿವ್ಯತ್ವಕ್ಕೆ ಸಲ್ಲಿಸುವ ಪ್ರಾರ್ಥನೆಯಾಗಿದೆ.

*

ದಿವ್ಯತ್ವಕ್ಕಾಗಿ ಕಾರ್ಯಪ್ರವೃತ್ತವಾಗುವದೇ ದೇಹದ ಪ್ರಾರ್ಥನೆಯಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/207–08**

ಧ್ಯಾನದ ಮೂಲಕ ಓರ್ವನು ಪ್ರಗತಿ ಸಾಧಿಸಬಹುದು, ಆದರೆ ವಹಿಸಲ್ಪಟ್ಟ ಕರ್ತವ್ಯವನ್ನು ಸಂಪೂರ್ಣ ಸೂಕ್ತವಾಗಿ, ಆಸಕ್ತಿಪೂರ್ವಕ, ಶಕ್ತನಾಗಿ ಮಾಡುವದು ಕೇವಲ ಧ್ಯಾನಕ್ಕಿಂತ, ಮಾಡುವ ಪ್ರಾರ್ಥನೆಗಿಂತ ಹತ್ತುಮಡಿ ಶ್ರೇಷ್ಠವಾಗಿರುತ್ತದೆ.

*

ಹೃದಯಪೂರ್ವಕವಾಗಿ ನೀವು ಓದಬೇಕು, ಆಗ ನಿಮಗೆ ಎಲ್ಲವೂ ಅರಿವಿಗೆ ಬರುತ್ತದೆ. ಆಶೀರ್ವಾದಗಳು.

*

ಈ ದೈವೀ ಕ್ರಿಯೆಯು ಸಂಪೂರ್ಣವಾಗಿ ಸಾಧಿಸಲ್ಪಡುವಂತೆಯೇ ನಮ್ಮೆಲ್ಲರ ಹೃದಯದ ಪ್ರಾರ್ಥನೆಗಳೂ ಇರಲಿ.

*

ಎಲ್ಲ ಪ್ರಾಮಾಣಿಕ ಪ್ರಾರ್ಥನೆಗಳೂ ಆಲಿಸಲ್ಪಡುತ್ತವೆ; ನೆರವೇರಿಸಲ್ಪಡುತ್ತವೆ. ಆದರೆ ಅದನ್ನು ಲೌಕಿಕವಾಗಿ ಅರಿತುಕೊಳ್ಳಲು ಕೆಲವು ಸಮಯ ಬೇಕಾಗಬಹುದು.

*

ನಾವು ಸದಾ ಅಭೀಪ್ಸೆಯನ್ನು ಹೊಂದಿರೋಣ ಎನ್ನುವದೇ ನಮ್ಮ ಬದ್ಧತೆಯಾಗಿರಲಿ. ಒಂದು ವೇಳೆ ಈ ತೆರನಾದ ಅಭೀಪ್ಸೆ ಹೊಂದಲು ಸಾಧ್ಯವಾಗದಿದ್ದಲ್ಲಿ, ಆಗ ಮಗುವಿನ ಮುಗ್ಧತೆಯ ಸರಳ ಮನೋಭಾವದಲ್ಲಿ ನಾವು ಪ್ರಾರ್ಥಿಸೋಣ.

*

ಆ ದಿವ್ಯತ್ವವು ನಮಗೆ ಮತ್ತು ಹೆಚ್ಚಿನದನ್ನು ಕಲಿಸಲಿ ಎಂದು, ನಮ್ಮನ್ನು ಮತ್ತೂ ಮತ್ತೂ ಜ್ಞಾನಿಗಳನ್ನಾಗಿಸಲಿ ಎಂದೂ, ನಮ್ಮ ಅಜ್ಞಾನವನ್ನು ತ್ಯಜಿಸುವಂತೆ ಹಾಗೂ ನಮ್ಮ ಮನಸ್ಸು ಸದಾ ಪ್ರಕಾಶಮಾನವಾಗಿ ಕಾಂತಿಗೊಳ್ಳುವಂತೆ ಪ್ರಾರ್ಥಿಸೋಣ.

*

ಉತ್ಕಟವಾದ ಮತ್ತು ಪ್ರಾಮಾಣಿಕವಾಗಿ ದಿವ್ಯತ್ವದ ಕೃಪೆಗಾಗಿ ಸಲ್ಲಿಸಲ್ಪಟ್ಟಿರುವ ಯಾವ ಪ್ರಾರ್ಥನೆಯೂ ವ್ಯರ್ಥವಾಗುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/207–08 – ಶ್ರೀಮಾತೆ**

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

"ಸ್ಪೆಕ್ಟ್ರಮ್" ವತಿಯಿಂದ ದಿನಾಂಕ 1ನೇ ಜೂನ್ 2019ರ ಶನಿವಾರದಂದು ಕನಸು ನನಸು ಕಲಾನಿಕೇತನ ತಂಡದವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 8ನೇ ಜೂನ್ 2019ರ ಶನಿವಾರದಂದು ಡಾ॥ ಬಿ. ಮಹಾದೇವನ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "What is the Goal of our Life? Perspectives from Ancient Indian Wisdom" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 11ನೇ ಜೂನ್ 2019ರ ಮಂಗಳವಾರದಂದು ಶ್ರೀ ರಾಜೀವ್ ಎಂ. ನಾಡಿಗ್ ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "The Mother and Sri Aurobindo Views on Gratitude" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 16ನೇ ಜೂನ್ 2019ರ ಭಾನುವಾರ ಶ್ರೀ ನಿರಾಕರ್ ದಾಸ್, ಒಡಿಸ್ಸ ಇವರಿಂದ ಬೆಳಿಗ್ಗೆ 11.00 ಗಂಟೆಯಿಂದ 12.30 ರವರೆಗೆ "Spiritual Quest" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 22ನೇ ಜೂನ್ 2019ರ ಶನಿವಾರದಂದು "ಮಿರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್" ತಂಡದವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 29ನೇ ಜೂನ್ 2019ರ ಶನಿವಾರದಂದು ಡಾ|| ಸಿ. ಶ್ಯಾಮಸುಂದರ್, ನಿವೃತ್ತ ಮನೋವೈದ್ಯರು, ನಿಮ್ಹಾನ್ಸ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "True Nature of Science" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

## ಶ್ರದ್ಧಾಂಜಲಿ

ಶ್ರೀಯುತ ಪುರುಷೋತ್ತಮ ಗಲಗಲಿರವರ ಶರೀರ ತ್ಯಜಿಸಿದ ವಾರ್ತೆ ತಿಳಿದು ಅತೀವ ದುಃಖವಾಯಿತು. ಶ್ರೀಯುತರು ಶ್ರೀಮಾತಾರವಿಂದರ ಅನುಯಾಯಿಗಳು ಮತ್ತು ಹಿರಿಯ ಸಾಧಕರು, ಶ್ರೀ ಅರವಿಂದೋ ಸೊಸೈಟಿ, ಪಾಂಡಿಚೇರಿ ಜೊತೆ ಹಲವು ದಶಕಗಳಿಂದ ನಿಕಟ ಸಂಪರ್ಕ ಹೊಂದಿದ್ದರು. ಹಾಗೆಯೇ ಶ್ರೀಯುತರು ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್, ಧರ್ಮದರ್ಶಿ, ಶ್ರೀ ಅರವಿಂದೋ ಸೊಸೈಟಿ, ಹಲಸೂರು ಕಾರ್ಯನಿರ್ವಾಹಕ ಮಂಡಳಿ ಸದಸ್ಯರು ಹಾಗೂ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿಯ ಉಪಾಧ್ಯಕ್ಷರಾಗಿ ಸಕ್ರಿಯವಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ತಮ್ಮ ಅಪಾರ ಜ್ಞಾನದಿಂದ ಇವರ ತಂದೆ ಮಧುರಚೆನ್ನ ನಂತರ ಶ್ರೀಮಾತಾರವಿಂದರ ತತ್ವ ಸಿದ್ಧಾಂತಗಳನ್ನು ಕರ್ನಾಟಕದ ಗ್ರಾಮೀಣ ಭಾಗದಲ್ಲಿ ತಲುಪಿಸುವ ಸಾಧಕರ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದರು ಹಾಗೆಯೇ ಶ್ರೀ ಅರವಿಂದೋ ಸೊಸೈಟಿ ಹಲಸಂಗಿ ಕೇಂದ್ರದ ಸ್ಥಾಪಕರು ಹಾಗೂ ಕಾರ್ಯಾಧ್ಯಕ್ಷರಾಗಿ ತಮ್ಮ ಕೊನೆಯ ಉಸಿರಿರುವವರೆಗು ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ಅಖಿಲ ಭಾರತ ಪತ್ರಿಕೆಯ ಅನುವಾದಕರಾಗಿ ಇತ್ತೀಚಿನವರೆಗು ಸೇವೆ ಸಲ್ಲಿಸಿರುತ್ತಾರೆ. ಇವರ ಅಗಲಿಕೆಯಿಂದ ತುಂಬಲಾರದ ನಷ್ಟವಾಗಿರುತ್ತದೆ. ಶ್ರೀಮಾತಾರವಿಂದರು ಇವರ ಆತ್ಮಕ್ಕೆ ಶಾಂತಿ ನೀಡಲೆಂದು ಹಾಗೂ ಇವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಶ್ರೀಮಾತಾರವಿಂದರು ಅವರ ಕುಟುಂಬ ವರ್ಗಕ್ಕೂ ಕರುಣಿಸಲೆಂದು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ, ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಪ್ರಾರ್ಥಿಸಿಕೊಳ್ಳುತ್ತೇವೆ.



ಸಾಧನೆಯೇ ಪ್ರಾರ್ಥನೆ
ಆತ್ಮದೀ ಸರ್ವ ದೇಹಭಾಷೆಗಳು ದಿವ್ಯತ್ವವನ್ನು ಧರಿಸಿ.

**– ಪುಟ್ಟು ಕುಲಕರ್ಣಿ**

(ಶ್ರೀ ಅರವಿಂದರ **'ಸಾವಿತ್ರಿ'**; ದಳ 2 ರೇಣು 3 ಪುಟ 125)

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಹರ್ಷಪುಲಕಿತದಿ ಪರಮಸ್ಫೂರ್ತಿಯಲಿ ಸಾವಿರದ ವಾಣಿಯಿಂದು
ಭಾವಪರವಶತೆಯಲ್ಲಿ ಮೋದದಲಿ ನವಭಾವ ಕಾಣಲೆಂದು
ಸ್ವಾಗತಕೆ ಕಾದು ಸದಾ ತೆರೆದಿದ್ದ ಅವನ ಆ ಮುಕ್ತ ಹೃದಯ
ತುಂತುಂಬುವಂತೆ ಸಿಂಚನದ ಬೆಳಕು ಇಂಬಿಡಿಸಿ ನಿತ್ಯ ಕ್ರಿಯೆಯ ॥179॥
ದೇವಾದಿದೇವನಾ ಪ್ರಪ್ರಥಮ ತೋಷ ಮರುಕಳಿಸಿ ಮುದಿತಗೊಂಡು
ಪರಮ ಪರಿಶುದ್ಧ ಚಿರದ ಯೌವನದ ಕಾಲದಲಿ ಸೃಷ್ಟಿಗೊಂಡು.
ಅರೆಚಣದಿ ಗ್ರಹಿಸಿ, ಸೂಕ್ಷ್ಮಾತಿಸೂಕ್ಷ್ಮದವಕಾಶವದುವು ಶಾಂತ
ಸರ್ವಜ್ಞಭಾವ ಸಂಪೂರ್ಣಗೊಂಡು, ಚಿಂತನವು ಶಬ್ದರಹಿತ ॥180॥

**– ಪುಟ್ಟು ಕುಲಕರ್ಣಿ**
(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 41)
Photo: Imaging Savitri

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.